ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 19 ಗುರುವಾರ 2025

₹4

ಸಂಪುಟ: 46 | ಸಂಚಿಕೆ: 63 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಜ್ಞಾನ ಸರೋವರ ಶಾಲೆಗೆ ಬಾಂಬ್ ಬೆದರಿಕೆ!

ಮೈಸೂರು, ಜೂ. 18 (ಆರ್‌ಕೆ)– ಬೆಂಗಳೂರು, ಹಾಸನ ಮತ್ತು ಉಡುಪಿ ಜಿಲ್ಲೆಗಳ ಹಲವು ಶಾಲೆಗಳಿಗೆ ಸೋಮವಾರ ಮತ್ತು ಮಂಗಳವಾರ ಬಾಂಬ್ ಬೆದರಿಕೆ ಬೆನ್ನಲ್ಲೇ ಇಂದು ಮೈಸೂರಿನ ಬನ್ನೂರು ರಸ್ತೆಯ ಜ್ಞಾನ ಸರೋವರ ಇಂಟರ್‌ನ್ಯಾಷನಲ್ ಶಾಲೆಗೂ ಬಾಂಬ್ ಬೆದರಿಕೆ ಇ–ಮೇಲ್ ಬಂದಿದೆ.

ಇಂದು ಮಧ್ಯಾಹ್ನ 12.03 ಗಂಟೆಗೆ ಶಾಲೆಯ ಕಚೇರಿ ಇ–ಮೇಲ್ ವಿಳಾಸಕ್ಕೆ `Bomb blast in your school - do not take this email lightly - justice for the rape victim in Hydrabad' ಸಂದೇಶ ಕಳುಹಿಸಲಾಗಿದೆ. ಡಿವಿಜಿ ಪ್ರಭಾಕರ್ ಎಂಬ ಹೆಸರಿನ ವ್ಯಕ್ತಿಯ ಮೇಲ್‌ನಿಂದ ಈ ಮಾಹಿತಿ ಕಳುಹಿಸಲಾಗಿದ್ದು, ಮೂರು ಮೊಬೈಲ್ ಸಂಖ್ಯೆಗಳನ್ನೂ ನೀಡಲಾಗಿದೆ.

ಇ–ಮೇಲ್ ಗಮನಿಸಿದ ಶಾಲಾ ಕಚೇರಿ ಸಿಬ್ಬಂದಿ ತಕ್ಷಣ ಸಂಸ್ಥೆ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಅವರಿಗೆ ವಿಷಯ ತಿಳಿಸಿದ್ದಾರೆ. ಕೂಡಲೇ ಶಾಲೆಗೆ ಧಾವಿಸಿದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಶೇಖರ್ ಹಾಗೂ ಸಿಬ್ಬಂದಿ ಶ್ವಾನ ದಳ, ಬೆರಳಚ್ಚು ಮುದ್ರೆ ಘಟಕ, ಬಾಂಬ್ ಪತ್ತೆ ಮತ್ತು ನಿಗ್ರಹ ದಳದ ಸಿಬ್ಬಂದಿ ಸುಮಾರು ಮೂರು ತಾಸು ಪರಿಶೀಲನೆ ನಡೆಸಿದರೂ ಯಾವುದೇ ಅಪಾಯಕಾರಿ ಕುರುಹುಗಳು ಸಿಗಲಿಲ್ಲ.

ಶಾಲಾ ಕಚೇರಿ, ತರಗತಿ ಕೊಠಡಿಗಳು, ಹಾಸ್ಟೆಲ್, ಡೈನಿಂಗ್ ಹಾಲ್, ಕ್ರೀಡಾಂಗಣ, ಸ್ವಿಮ್ಮಿಂಗ್ ಪೂಲ್, ಶಾಲಾ ಆವರಣ, ವಾಹನಗಳ ಪಾರ್ಕಿಂಗ್ ಸ್ಥಳ, ಪ್ರವೇಶ ದ್ವಾರ, ಶೌಚಾಲಯಗಳಲ್ಲಿ ತೀವ್ರ ತಪಾಸಣೆ ನಡೆಸಲಾಯಿತು.

ಸಂಸ್ಥೆ ಅಧ್ಯಕ್ಷ ಸುಧಾಕರ್ ಎಸ್. ಶೆಟ್ಟಿ ನೀಡಿದ ಲಿಖಿತ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ಈ ಇ–ಮೇಲ್ ಜಾಡು ಹಿಡಿದು ತನಿಖೆ ನಡೆಸುತ್ತಿದ್ದಾರೆ.

ನಿಯಮಾವಳಿ ಪಾಲಿಸದ ಆಟೋಗಳ ವಿರುದ್ಧ ಮೈಸೂರಲ್ಲಿ ಸಂಚಾರ ಪೊಲೀಸರ ಸಮರ

ಎರಡು ದಿನದಲ್ಲಿ 425ಕ್ಕೂ ಹೆಚ್ಚು ಪ್ರಕರಣ ದಾಖಲು

ಮೈಸೂರು, ಜೂ.18(ಆರ್‌ಕೆ)– ಮೈಸೂರು ನಗರದಾದ್ಯಂತ ಮಂಗಳವಾರದಿಂದ ನಿಯಮಾವಳಿ ಧಿಕ್ಕರಿಸುತ್ತಿರುವ ಆಟೋರಿಕ್ಷಾಗಳ ವಿರುದ್ಧ ಸಂಚಾರ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

ಸಾರ್ವಜನಿಕರಿಂದ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನಿರ್ದೇಶನದಂತೆ, ಅಪರಾಧ ಮತ್ತು ಸಂಚಾರ ಡಿಸಿಪಿ ಸುಂದರರಾಜ್ ಮಾರ್ಗದರ್ಶನದಲ್ಲಿ ಸಂಚಾರ ಉಪವಿಭಾಗದ ಎಸಿಪಿ ಎಂ.ಶಿವಶಂಕರ್ ನೇತೃತ್ವದಲ್ಲಿ ಎಲ್ಲಾ ಸಂಚಾರ ಠಾಣೆಗಳ ಇನ್‌ಸ್ಪೆಕ್ಟರ್ ಸಮ್ಮುಖದಲ್ಲಿ ಸಬ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಜೂ.17ರಿಂದ ತಪಾಸಣಾ ಕಾರ್ಯ ನಡೆಸುತ್ತಿದ್ದಾರೆ.

ಮಂಗಳವಾರ ಸಮವಸ್ತ್ರ ಧರಿಸದೇ ಆಟೋ ಚಾಲನೆ 10, ದೋಷಪೂರಿತ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ 9, ಬಾಡಿಗೆಗೆ ಬರಲು ನಿರಾಕರಣೆ 2, ನಿಗದಿಗಿಂತ ಹೆಚ್ಚು ಪ್ರಯಾಣಿಕರನ್ನು ಕೂರಿಸಿಕೊಂಡು ಚಾಲನೆ 54, ಪ್ರಯಾಣಿಕರಿಗೆ ಹೆಚ್ಚುವರಿ ಶುಲ್ಕಕ್ಕೆ ಬೇಡಿಕೆ 24, ಸರಿಯಾಗಿ ದಾಖಲೆಗಳನ್ನಿರಿಸಿಕೊಳ್ಳದ 3 ಸೇರಿ ಒಂದೇ ದಿನ 202 ಆಟೋಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 2ನೇ ದಿನವಾದ ಇಂದು ತಪಾಸಣೆ ಮುಂದುವರಿಸಿದ ಪೊಲೀಸರು ಎಫ್‌ಸಿ, ಇನ್ಶೂರೆನ್ಸ್, ಡಿಎಲ್, ಡಿಸ್ಪ್ಲೇ ಕಾರ್ಡ್ ಪ್ರದರ್ಶನ ವಿರುದ್ಧ 225ಕ್ಕೂ ಹೆಚ್ಚು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು, ವಾಹನವನ್ನು ಸುಸ್ಥಿತಿಯಲ್ಲಿರಿಸಿ, ದಾಖಲೆಗಳನ್ನು ಆಟೋ ಚಾಲನೆ ಮಾಡುವಾಗ ತಮ್ಮ ಬಳಿ ಸದಾ ಇರಿಸಿಕೊಂಡಿರಬೇಕೆಂದು ಆಟೋ ಚಾಲಕರಿಗೆ ಸೂಚನೆ ನೀಡಲಾಯಿತು.



ನಿಯಮಾವಳಿ ಧಿಕ್ಕರಿಸುತ್ತಿರುವ ಆಟೋರಿಕ್ಷಾಗಳ ವಿರುದ್ಧ ಮೈಸೂರು ಸಂಚಾರ ಪೊಲೀಸರು ತಪಾಸಣೆ ನಡೆಸುತ್ತಿರುವುದು.

ಕೊಡಗಿನಲ್ಲಿ ಬಿಎಸ್‌ಎನ್‌ಎಲ್ ಸಮರ್ಪಕ ಸೇವೆಗೆ ಕೇಂದ್ರ ಸಚಿವರಿಗೆ ಯದುವೀರ್ ಮನವಿ

ಜ್ಯೋತಿರಾದಿತ್ಯ ಸಿಂಧಿಯಾ ಭೇಟಿ ಮಾಡಿ, ಮನವರಿಕೆ ಮಾಡಿಕೊಟ್ಟ ಸಂಸದರು



ಕೊಡಗಿನಲ್ಲಿ ಬಿಎಸ್‌ಎನ್‌ಎಲ್ ಸೇವೆ ಸಮರ್ಪಕಗೊಳಿಸಬೇಕು ಎಂದು ಕೇಂದ್ರ ದೂರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಮನವಿ ಸಲ್ಲಿಸಿದರು.

ಮೈಸೂರು, ಜೂ. 18– ಕಿತ್ತಳೆ ನಾಡು ಕೊಡಗಿನಲ್ಲಿ ಬಿಎಸ್‌ಎನ್‌ಎಲ್ ಸೇವೆ ಸಮರ್ಪಕಗೊಳಿಸಬೇಕು. ಈ ನಿಟ್ಟಿನಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ದೂರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಸಂಸದ ಯದುವೀರ್, ಕೊಡಗಿನಲ್ಲಿ ಈಗ ಅತ್ಯಂತ ತುರ್ತಾಗಿ ಈ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿದರು. ಈ ಸಂಬಂಧ ಯದುವೀರ್ ಮನವಿ ಪತ್ರವನ್ನು ಸಚಿವರಿಗೆ ನೀಡಿದ ಬಳಿಕ ಮಾಧ್ಯಮ ಹೇಳಿಕೆ ನೀಡಿದ್ದಾರೆ. ಕೊಡಗಿನಲ್ಲಿ ಇತ್ತೀಚೆಗೆ ಧಾರಾಕಾರ ಮಳೆ ಸುರಿಯುತ್ತಿದೆ. ಇದರಿಂದ ವಿದ್ಯುತ್ ಹಾಗೂ ಟೆಲಿಫೋನ್ ಕಂಬಗಳು ನೆಲಕ್ಕುರುಳಿವೆ. ಅವುಗಳ ದುರಸ್ತಿಗೂ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಜೂ.22, ಸಾವಿರಾರು ಕರಾಟೆಪಟುಗಳ ಪ್ರಾತ್ಯಕ್ಷಿಕೆ



ಮೈಸೂರು,ಜೂ.18(ಎಂಟಿವೈ)– ವಿಶ್ವ ಕರಾಟೆ ದಿನದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್ ಪಕ್ಕದ ಮಹಾರಾಜ ಕಾಲೇಜು ಹಾಕಿ ಮೈದಾನದಲ್ಲಿ ಜೂ.22ರಂದು ಬೆಳಗ್ಗೆ 8 ಗಂಟೆಗೆ ಆಯೋಜಿಸಿರುವ ಸ್ವಯಂ ರಕ್ಷಣೆಗಾಗಿ ಕರಾಟೆ ಕಾರ್ಯಕ್ರಮದಲ್ಲಿ 1500ಕ್ಕೂ ಹೆಚ್ಚು ಕರಾಟೆ ಪಟುಗಳು ಕರಾಟೆ ಪ್ರಾತ್ಯಕ್ಷಿಕೆ ನೀಡಲಿದ್ದಾರೆ ಎಂದು ಮೈಸೂರು ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಎಸ್.ಸುನೀಲ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಯಂ ರಕ್ಷಣೆಗಾಗಿ ಕರಾಟೆ ಪ್ರದರ್ಶನವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಟಿ.ದೇವೇಗೌಡ ವಹಿಸಲಿದ್ದು, ಮೈಸೂರು ವಿವಿ ಉಪಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಎಎಸ್ಪಿ ಸಿ.ಮಲ್ಲಿಕ್, ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ವೆಂಕಟೇಶ್, ಡಾ.ಕೃಷ್ಣಯ್ಯ, ಸುರೇಶ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ವಿಶ್ವ ಕರಾಟೆ ದಿನದ ಅಂಗವಾಗಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಗಳಲ್ಲಿ ಹೆಚ್ಚು ಅಂಕ ಪಡೆದ ಕರಾಟೆಪಟುಗಳನ್ನು ಸನ್ಮಾನಿಸಲಾಗುತ್ತಿದೆ. ಸಭಾ ಕಾರ್ಯಕ್ರಮದ ಬಳಿಕ ಕರಾಟೆ ಪ್ರದರ್ಶನ ಜರುಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಕರಾಟೆ ಅಸೋಸಿಯೇಷನ್ ಪದಾಧಿಕಾರಿಗಳಾದ ಸೋಸಲೆ ಸಿದ್ದರಾಜು, ಶಿವದಾಸ್, ಭಾರತಿ ಆನಂದ್, ಶಂಕರ್ ಇದ್ದರು.

ಇಂದು, ನಾಳೆ ಸಂಗೀತ ಕಾರ್ಯಕ್ರಮ

ಮೈಸೂರು, ಜೂ. 18(ಜಿಎ)– ಜನಚೈತನ್ಯ ಫೌಂಡೇಶನ್ ವತಿಯಿಂದ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಜೂ.19, 20ರಂದು ಸಂಜೆ 4.30ರಿಂದ ರಾತ್ರಿ 9.30ರವರೆಗೆ 'ಡಿಸ್ಕೋ ಮೆಲೋಡಿ ಸಾಂಗ್ಸ್ ಮ್ಯೂಸಿಕಲ್ ಇವ್ನಿಂಗ್' ಶೀರ್ಷಿಕೆ ಅಡಿಯಲ್ಲಿ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಶನ್‌ನ ಅಧ್ಯಕ್ಷ ಆರ್.ಲಕ್ಷ್ಮಣ್ ಈ ವಿಷಯ ತಿಳಿಸಿ, ಜೂ.19ರಂದು ಸಂಜೆ 4.30ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜು ವಿ.ಬೈರಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್ ಆಗಮಿಸಲಿದ್ದಾರೆ ಎಂದರು.

ಎರಡು ದಿನ ನಡೆಯುವ ಸಂಗೀತ ಕಾರ್ಯಕ್ರಮದಲ್ಲಿ ಜಾಯ್ಸ್ ವೈಶಾಕ್, ರೇಣುಕಾ ಅರುಣ್, ಗುರುರಾಜ್, ಡಾ.ಎ.ಎಸ್.ಪೂರ್ಣಿಮ, ಅಜರುದ್ದೀನ್, ಡಾ.ಎ.ಎನ್.ಪದ್ಮ, ವಿಜಯ್‌ಆನಂದ್, ವೈ.ಎಂ.ನಾಗೇಂದ್ರ, ಕೆ.ಎಸ್.ಶೇಷಾದ್ರಿ, ಡಿ.ನಾಗೇಶ್, ಶಾಂತಕುಮಾರಿ, ರೂಪ್‌ಕುಮಾರ್, ಶಶಿಕಾಂತ್, ಮಧು ಸೇರಿದಂತೆ 20 ಗಾಯಕರು ಪಾಲ್ಗೊಂಡು ಸುಮಾರು 80 ಹಾಡುಗಳನ್ನು ಪ್ರಸ್ತುತಪಡಿಸಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಗೋಷ್ಠಿಯಲ್ಲಿ ಜಾಯ್ಸ್ ವೈಶಾಕ್, ವಿಜಯ್‌ಆನಂದ್, ಕೆ.ಎಸ್.ಶೇಷಾದ್ರಿ, ರೂಪ್‌ಕುಮಾರ್ ಇದ್ದರು.


ನಿಧನ



ಪುಟ್ಟಸ್ವಾಮಿಗೌಡ

ಮೈಸೂರು, ಜೂ.18–ನಂಜನಗೂಡು ತಾಲೂಕಿನ ಬಸವನಪುರ ಗ್ರಾಮದ ಪುಟ್ಟಸ್ವಾಮಿಗೌಡ(62) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದೇಗೌಡ



ಮೈಸೂರಿನ ಹೂಟಗಳ್ಳಿ ನಿವಾಸಿ, ಮಾಜಿ ಛೇರ್ಮನ್ ವೆಂಕಟೇಗೌಡರ ಹಿರಿಯ ಪುತ್ರ ಸಿದ್ದೇಗೌಡ(85) ಮಂಗಳವಾರ ನಿಧನರಾದರು. ಮೃತರು ಪತ್ನಿ, ಬಿಜೆಪಿ ಮುಖಂಡ ಎಸ್.ರವಿ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಹೂಟಗಳ್ಳಿಯ ರುದ್ರಭೂಮಿಯಲ್ಲಿ ಬುಧವಾರ ನೆರವೇರಿಸಲಾಯಿತು.

ಸ್ವಾಭಿಮಾನಿ ಕನ್ನಡಿಗರು 'ಥಗ್ ಲೈಫ್' ಚಿತ್ರ ನೋಡಬೇಡಿ

ಪ್ರಜ್ಞಾವಂತ ನಾಗರಿಕ ವೇದಿಕೆಯಿಂದ ಸೈಕಲ್ ಸವಾರಿ ಮೂಲಕ ಜನರಲ್ಲಿ ಮನವಿ



ಥಗ್ ಲೈಫ್ ಚಿತ್ರ ನೋಡದಂತೆ ಪ್ರಜ್ಞಾವಂತ ನಾಗರಿಕ ವೇದಿಕೆಯಿಂದ ಮನವಿ.

ಮೈಸೂರು, ಜೂ.18–ಕನ್ನಡದ ಬಗ್ಗೆ ಕೆಟ್ಟದಾಗಿ ಮಾತನಾಡಿ ಕನ್ನಡಿಗರ ಆಕ್ರೋಶಕ್ಕೆ ಕಾರಣರಾಗಿದ್ದ ತಮಿಳುನಟ ಕಮಲ್ ಹಾಸನ್ ನಟನೆಯ ಥಗ್ ಲೈಫ್ ಚಿತ್ರ ಬಹಿಷ್ಕರಿಸುವಂತೆ ಸ್ವಾಭಿಮಾನಿ ಕನ್ನಡಿಗರಿಗೆ ಸೈಕಲ್ ಸವಾರಿ ಮೂಲಕ ಮನವಿ ಮಾಡಿದರು.

ಅಗ್ರಹಾರ ವೃತ್ತದ ಪದ್ಮ ಚಿತ್ರಮಂದಿರದ ಬಳಿ ಜಮಾಯಿಸಿದ ಪ್ರಜ್ಞಾವಂತ ನಾಗರಿಕರ ವೇದಿಕೆಯ ಪದಾಧಿಕಾರಿಗಳು ಕನ್ನಡದ ಚಿತ್ರಗಳಿಗೆ ಸೈಕಲ್ ಸವಾರಿ ಮೂಲಕ ಪ್ರಚಾರ ಮಾಡುತ್ತಿದ್ದ ಪಾರಂಪರಿಕ ಮಾದರಿಯಲ್ಲೇ ಕಮಲ್‌ಹಾಸನ್ ಭಾವಚಿತ್ರಕ್ಕೆ ಮಸಿ ಬಳಿದು 'ಥಗ್ ಲೈಫ್' ಚಿತ್ರ ನೋಡದಂತೆ ಬಹಿಷ್ಕರಿಸೋಣ ಎಂದು ಸಂದೇಶ ಸಾರಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಕನ್ನಡದ ನೆಲ ಜಲ ಭಾಷೆ ವಿಚಾರಕ್ಕೆ ಧಕ್ಕೆ ಬಂದಾಗ ಧ್ವನಿಯೆತ್ತುವುದು ಪ್ರತಿಯೊಬ್ಬ ಸ್ವಾಭಿಮಾನಿ ಕನ್ನಡಿಗನ ಕರ್ತವ್ಯ. ಕಮಲ್ ಹಾಸನ್ ಚಿತ್ರ ಪ್ರದರ್ಶನಕ್ಕೆ ಸುಪ್ರಿಂ ಕೋರ್ಟ್ ಆದೇಶ ನೀಡಿದೆ. ಅದನ್ನು ಒಪ್ಪಿಕೊಳ್ಳೋಣ. ಆದರೆ, ಅದನ್ನು ನೋಡಲೇಬೇಕು ಎಂದು ಕೋರ್ಟ್ ಆದೇಶಿಸಿಲ್ಲ. ಹಾಗಾಗಿ ಕನ್ನಡಿಗರನ್ನ ಕೆರಳಿಸಿರುವ ದುರಹಂಕಾರಿ ಕಮಲ್‌ಹಾಸನ್ ಚಿತ್ರವನ್ನು ಕನ್ನಡಿಗರ ನೋಡಬಾರದು. ಚಿತ್ರ ನಿರ್ಮಾಪಕರು, ಚಿತ್ರವಿತರಕರು ಕೂಡ ಚಿತ್ರಮಂದಿರದಲ್ಲಿ ಪ್ರದರ್ಶನಕ್ಕೆ ಅವಕಾಶ ಕೊಡದೇ ಕನ್ನಡದ ಅಸ್ಮಿತೆ ಗೌರವಿಸಬೇಕು ಎಂದರು.

ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜು ಬಸಪ್ಪ ಮಾತನಾಡಿ, ತಮಿಳುನಾಡಿನಲ್ಲೇ ಸಾಕಷ್ಟು ತಿರಸ್ಕಾರ, ಅಪಕೀರ್ತಿ ಪಡೆದಿರುವ ಕಮಲ್‌ಹಾಸನ್ ಕನ್ನಡದ ಭಾಷೆ ಬಗ್ಗೆ ಅವಹೇಳನವಾಗಿ ಮಾತನಾಡಿ ಅವಮಾನ ಮಾಡಿದ್ದಾರೆ. ಕ್ಷಮೆಯನ್ನೇ ಕೇಳದೆ ದುರಹಂಕಾರ ಮೆರೆದಿರುವ ಕಮಲ್‌ಹಾಸನ್ ಚಿತ್ರವನ್ನು ನೋಡದೆ ಕನ್ನಡಿಗರು ತಕ್ಕಪಾಠ ಕಲಿಸಬೇಕು. ಎಂದು ಆಗ್ರಹಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ. ಪಾರ್ಥಸಾರಥಿ, ನಿರ್ದೇಶಕ ಹೆಚ್.ವಿ. ಭಾಸ್ಕರ್, ವಿಕ್ರಮ್ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಎಸ್.ಎನ್. ರಾಜೇಶ್, ಗೌರಿಶಂಕರನಗರದ ಶಿವು, ರಾಕೇಶ್, ಶಿವಲಿಂಗ ಸ್ವಾಮಿ, ಜತ್ತಿ ಪ್ರಸಾದ್ ಇನ್ನಿತರರು ಭಾಗವಹಿಸಿದ್ದರು.

ಈ ತೀರ್ಪು ಕನ್ನಡಿಗರಿಗೆ ಹಿನ್ನಡೆಯಲ್ಲ



ಸ.ರ.ಸುದರ್ಶನ್

ಮೈಸೂರು: ಸರ್ವೋಚ್ಚ ನ್ಯಾಯಾಲಯ 'ಥಗ್ ಲೈಫ್' ಚಿತ್ರ ಬಿಡುಗಡೆಗೆ ಆದೇಶ ನೀಡಿದ್ದರೂ ಕಮಲಹಾಸನ್ ಅವರ ಕನ್ನಡ ಭಾಷೆಯ ಬಗೆಗಿನ ಹೇಳಿಕೆಯನ್ನು ಸಮರ್ಥಿಸಿಲ್ಲ. ಬೆಂಗಳೂರಿನ ಪ್ರಬುದ್ಧ ಜನರು ಅದು ಸರಿಯಲ್ಲ ಎಂದು ಹೇಳಬಹುದು ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ ಈ ತೀರ್ಪು ಕನ್ನಡಿಗರಿಗೆ ಹಿನ್ನಡೆಯಲ್ಲ ಎಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ್ ಹೇಳಿದ್ದಾರೆ. ವಾಸ್ತವವಾಗಿ ಧರ್ಮದ ವಿಷಯದಲ್ಲಿ ನೀಡಲಾಗುವ ಹೇಳಿಕೆಗಳನ್ನು ಕ್ರಮಕ್ಕೆ ಪರಿಗಣಿಸಿ ಆದೇಶಿಸುವ ನ್ಯಾಯಾಲಯಗಳು ಭಾಷೆಯ ವಿಷಯದಲ್ಲಿ ಕಮಲ್‌ಹಾಸನ್ ಅಂತಹವರ ಅವೈಜ್ಞಾನಿಕ ಹೇಳಿಕೆಗಳನ್ನು ಮೇಲಿನಂತೆ ಪರಿಗಣಿಸಬಹುದಿತ್ತು. ಒಂದು ವೇಳೆ ಚಿತ್ರ ಬಿಡುಗಡೆಯಾದರೂ ಕನ್ನಡಿಗರು ಅದನ್ನು ಬಹಿಷ್ಕರಿಸಬೇಕು. ಚಿತ್ರ ನೋಡಿ ಎಂದು ಹೇಳುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ತಿಳಿಸಿದೆ. ಆದ್ದರಿಂದ ಕನ್ನಡಿಗರು ಈ ಚಿತ್ರವನ್ನು ಬಹಿಷ್ಕರಿಸಬೇಕು. ಅದೇ ಕಮಲ್‌ಹಾಸನ್ ಅವರ ಉದ್ಧಟತನಕ್ಕೆ ಸರಿಯಾದ ಪ್ರತಿಕ್ರಿಯೆ ಎಂದು ಕನ್ನಡ ಕ್ರಿಯಾ ಸಮಿತಿ ಕನ್ನಡಿಗರಿಗೆ ಕರೆ ನೀಡುತ್ತದೆ ಎಂದು ತಿಳಿಸಿದ್ದಾರೆ.

ಜೂ.22ಕ್ಕೆ ಪ್ರೊ.ರಾಮದಾಸ್ ಸ್ಮರಣಾರ್ಥ ಸಂವಾದ, ಪುಸ್ತಕ ಬಿಡುಗಡೆ ಸಮಾರಂಭ

ಮೈಸೂರು,ಜೂ.18(ಎಂಟಿವೈ)– ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಜೂ.22ರಂದು ಬೆಳಗ್ಗೆ 10.30ಕ್ಕೆ ವಿಚಾರವಾದಿ ಪ್ರೊ.ಕೆ.ರಾಮದಾಸ್ ಸ್ಮರಣಾರ್ಥ ಸಂವಾದ, ಪುಸ್ತಕ ಬಿಡುಗಡೆ ಹಾಗೂ ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಜನಮನ ಕೃಷ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಾಡು ಕಂಡ ಪ್ರಾಮಾಣಿಕವಾದ ಸಾಮಾಜಿಕ ಚಿಂತಕ ಎನಿಸಿರುವ ಪ್ರೊ.ಕೆ.ರಾಮದಾಸ್ ಅವರ ನೆನಪಿನಲ್ಲಿ ಪ್ರತಿ ವರ್ಷ ಈ ರೀತಿಯ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಉದ್ಘಾಟಿಸಲಿದ್ದಾರೆ. ಬಳಿಕ ನಡೆಯುವ ಸಂವಾದ ಮತ್ತು ಮೇಷ್ಟ್ರ ನೆನಪು ಕಾರ್ಯಕ್ರಮದಲ್ಲಿ ಎಲಿಯೂರು ಧನಂಜಯ, ಬಾಬುರಾಜ್, ಉಗ್ರ ನರಸಿಂಹೇಗೌಡ, ಶಿವು ಹೊಸಹಳ್ಳಿ, ಸ್ಟ್ಯಾನ್ಲಿ ಹಾಗೂ ಇನ್ನಿತರರು ಪ್ರೊ.ರಾಮದಾಸ್ ಅವರೊಂದಿಗಿನ ತಮ್ಮ ಒಡನಾಟ ಹಾಗೂ ಹೋರಾಟದ ಬಗ್ಗೆ ಮಾತನಾಡಲಿದ್ದಾರೆ ಎಂದರು.

ಇದೇ ವೇಳೆ ಕೃಷ್ಣಜನಮನ ಸಂಪಾದಕತ್ವದಲ್ಲಿ ಹೊರತಂದಿರುವ 'ರಾಜಕಾರಣದಲ್ಲಿ ನೈತಿಕತೆ' ಪುಸ್ತಕವನ್ನು ಹಿರಿಯ ಹೋರಾಟಗಾರ ಆರ್.ಪಿ. ವೆಂಕಟೇಶಮೂರ್ತಿ ಬಿಡುಗಡೆ ಮಾಡಲಿದ್ದಾರೆ. ಪುಸ್ತಕ ಕುರಿತು ಚಿಂತಕ ನಾ. ದಿವಾಕರ್ ಮಾತನಾಡಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಈ ಹಿಂದೆ 'ಹಿಂದೂ ಸಮಾಜದಲ್ಲಿನ ಮೂಢನಂಬಿಕೆ ದೇಶದ ಪ್ರಗತಿಗೆ ಪೂರಕವೇ ಅಥವಾ ಮಾರಕವೇ ವಿಷಯ ಕುರಿತು ಆಹ್ವಾನಿಸಿದ್ದ ಲೇಖನ ಸ್ಪರ್ಧೆಯಲ್ಲಿ ರಾಜ್ಯದ ವಿವಿಧೆಡೆಯಿಂದ 38 ಲೇಖನ ಸ್ವೀಕರಿಸಲಾಗಿತ್ತು. ಅವುಗಳಲ್ಲಿ ಮೂರು ಉತ್ತಮ ಲೇಖನಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಲೇಖಕರಿಗೆ ಚಿಂತಕ ರುದ್ರಪ್ಪ ಹನಗವಾಡಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಡಾ.ದಿನಮಣಿ, ಎಲಿಯೂರು ಧನಂಜಯ, ಕುಮಾರಸ್ವಾಮಿ ಇದ್ದರು.

ಜೂ.25, ಜನತಾ ದರ್ಶನ ಕಾರ್ಯಕ್ರಮ

ಮೈಸೂರು,ಜೂ.18– ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಪ್ರತಿ ತಿಂಗಳು ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡು ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸುವ ಸಂಬಂಧ ಜೂ.25ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್ ಆವರಣದಲ್ಲಿ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಿಗೆ ಅಂದು ತಮ್ಮ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಈ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್‌ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.06.2025 ಗುರುವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಶಿಬಿರ, ಸಂಧಿವಾತಕ್ಕೆ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೆಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಇಂಗ್ವಾನಲ್ ಹರ್ನಿಯಾ ಮತ್ತು ಮೂಲವ್ಯಾಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಮೈಸೂರು ವಿಶ್ವವಿದ್ಯಾನಿಲಯ, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ :** ಮಾನವ ಅಭಿವೃದ್ಧಿ ಮತ್ತು ಕಲ್ಯಾಣ ಸಂಘ ಮತ್ತು ಭಾರತೀಯ ಗೃಹ ವಿಜ್ಞಾನ ಸಂಘ, ಮೈಸೂರು ಪ್ರಾದೇಶಿಕ ಅಧ್ಯಾಯ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಡೀನ್ ಮತ್ತು ನಿರ್ದೇಶಕ ಡಾ. ಎಚ್.ಜಿ. ಮಂಜುನಾಥ್, ಗೌರವ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಕೋಮಲ, ಸ್ಥಳ: ಸೆಮಿನಾರ್ ಹಾಲ್, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡು ಬರುವ ಹಸಿವಾಗದೆ ಇರುವುದು, ಅಜೀರ್ಣ, ಹೊಟ್ಟೆನೋವು, ಜಂತುಹುಳುವಿನ ಬಾಧೆ, ರುಮಟೈಡ್ ಆರ್ಥೈಟಿಸ್ ಚಿಕಿತ್ಸಾ ಶಿಬಿರ, ಉತ್ತಮ ನಿದ್ರೆ ಅಭ್ಯಾಸ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ವ್ಯವಸ್ಥಾಪಕರು :** ರತ್ನ ಎಂದೆಂದಿಗೂ ರತ್ನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಎಂ. ಸತ್ಯನಾರಾಯಣ ರಾವ್, ಎನ್. ಧನಂಜಯ ಅವರಿಗೆ 2024ರ ರಂಗ ರತ್ನ ಪ್ರಶಸ್ತಿ ಪ್ರದಾನ, ನ. ರತ್ನ ಅವರ ಪುಸ್ತಕ ಬಿಡುಗಡೆ ಕೈಯಲ್ಲಿ ಕೈಲಾಸಂ, ಪುಸ್ತಕ ಬಿಡುಗಡೆ : ಎಂ. ಸತ್ಯನಾರಾಯಣರಾವ್, ಪುಸ್ತಕ ಕುರಿತು: ಶಶಿಧರ್ ಡೋಂಗ್ರೆ, ಶ್ರೀಮತಿ ಪ್ರೇಮಲತಾ ರತ್ನ ಅವರಿಂದ ನ. ರತ್ನ ಅವರ ನಾಟಕದ ತೆಲುಗು ಅನುವಾದ ಅಯಾನ್ ಶಾಂತಿ ಕುಟೀರಂ ಬಿಡುಗಡೆ, ಅನುವಾದಕರ ನುಡಿ : ಮಲ್ಲಿಕಾರ್ಜುನ ಕೊಂಡೂರಿ, ಸ್ಥಳ: ದೇವೇಗೌಡ ಸಭಾಂಗಣ, ಐಡಿಯಲ್ ಜಾವಾ ರೋಟರಿ ಶಾಲೆ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ವಿಶ್ವ ಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್ :** ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮ, ಉಪಸ್ಥಿತರು : ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಅರಣ್ಯ ಸಂರಕ್ಷಣಾಧಿಕಾರಿ ಡಾ. ಎಂ. ಮಾಲತಿ ಪ್ರಿಯಾ, ಹಣಕಾಸು ಅಧಿಕಾರಿ ಶ್ರೀಮತಿ ರೇಖಾ, ಉಪ ಪೊಲೀಸ್ ಆಯುಕ್ತ ಕೆ.ಎಸ್. ಸುಂದರ್‌ರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಗೋಕುಲ್ ಗೋವರ್ಧನ್, ಸ್ಥಳ: ಮಹಾರಾಜ ಕಾಲೇಜು ಹೊಸ ಕಟ್ಟಡದ ಮುಂಭಾಗ, ಬೆಳಗ್ಗೆ 10.30ಕ್ಕೆ.

■ **ಶಬರಿಮಲ ಶ್ರೀ ಅಯ್ಯಪ್ಪ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಹಾಗೂ ಶ್ರೀ ಗುರುವಾಯೂರಪ್ಪನ್ ದೇವಾಲಯ):** ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಸಂಜೆ 5.30ರಿಂದ ಗಣಪತಿ ಹೋಮ, ಶ್ರೀ ಅಯ್ಯಪ್ಪಸ್ವಾಮಿಗೆ ಉದಯಾಸ್ಥಮಾನ ಪೂಜೆ, ನವಗಂ, ಪಂಚಗವ್ಯಂ, ಉಚ್ಚ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನದಾನ, ಸ್ಥಳ: ದೇವಾಲಯದ ಸನ್ನಿಧಿ, ಚಾಮುಂಡಿಬೆಟ್ಟದ ಪಾದ.

■ **ನವೋ ಪ್ರಮತಿ ಸ್ಕೂಲ್ ಆಫ್ ಸಿವಿಲ್ ಸರ್ವೀಸಸ್ :** 2024ರ ಯುಪಿಎಸ್‌ಸಿ 5ನೇ ರ್‍ಯಾಂಕ್ ಪಡೆದ ಎಸ್. ಶ್ರೇಯಸ್, ಯುಪಿಎಸ್‌ಸಿ ಸಿವಿಲ್ ಸರ್ವೀಸಸ್ ಪರೀಕ್ಷೆಯಲ್ಲಿ 812ನೇ ರ್‍ಯಾಂಕ್ ಪಡೆದ ತನಕ ಡಿ. ಆನಂದ್ ಅವರಿಗೆ ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್‌ತನ್ವೀರ್ ಆಶೀಫ್, ಎಸ್‌ಪಿ ಎನ್. ವಿಷ್ಣುವರ್ಧನ್, ಕಾರ್ಯದರ್ಶಿ ಹೆಚ್.ವಿ. ರಾಜೀವ್, ಸಂಯೋಜಕ ಡಾ. ಎಸ್.ಆರ್. ರವಿ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** 52ನೇ ಕನ್ನಡ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ನಾದಸ್ವರ ವಿದ್ವಾನ್ ಎನ್.ಕೆ. ಮಹದೇವನ್, ಅಧ್ಯಕ್ಷತೆ : ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ಉಪಸ್ಥಿತರು : ಶಿಬಿರದ ಸಂಯೋಜಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 2ಕ್ಕೆ.

■ **ಜನಚೈತನ್ಯ ಫೌಂಡೇಷನ್ :**ಡಿಸ್ಕೋ, ಮೆಲೋಡಿ ಸಾಂಗ್ಸ್ ಮ್ಯೂಸಿಕಲ್ ಇವ್ನಿಂಗ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 4.30 ರಿಂದ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಪರಿಸರ ದಿನಾಚರಣೆ, ಪರಿಸರವಾದಿ ಸುರೇಶ್ ಹೆಬ್ಳೀಕರ್ ಅವರಿಂದ ಪರಿಸರ ಜಾಗೃತಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್. ಸಿ. ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಬಿ. ಶ್ರೀರಾಂಭಟ್ ಹಾಗೂ ಪಿ. ಸುರಭಿ, ವ್ಯಾಖ್ಯಾನ : ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಯೋಗದತ್ತ ಜಗತ್ತು– ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ ಯೋಗ ಶಿಕ್ಷಕರಾದ ಡಾ. ಜಯಶ್ರೀ ಚಂದ್ರಶೇಖರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 8.50 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಕೆ.ಜೆ. ಯೇಸುದಾಸ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ–ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಕರುಣಾಕರ್, ಪ್ರಸ್ತುತಿ : ಟಿ. ವಿ. ವಿದ್ಯಾಶಂಕರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಹಳ್ಳಿಹಾಡು, 4.30 ವಿಜ್ಞಾನ ಭಾರತಿ–ದ್ರೋಣ್ ಹಾರುತಿದೆ ನೋಡಾ ಮಾತನಾಡುತ್ತಾರೆ ಲಕ್ಷ್ಮಿ ಬಿ. ಹಾಗೂ ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ವಸ್ತುಗಳ ಲೇಪನ ಮಾತನಾಡುತ್ತಾರೆ ನಂದಿನಿ ಎಂ.ಎಸ್., 6.50 ಕೃಷಿರಂಗ–ಕಿಸಾನ್‌ವಾಣಿ – ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳನ್ನು ಕುರಿತು ಸಂವಾದ, ಭಾಗವಹಿಸುತ್ತಾರೆ–ಬೆಂಗಳೂರಿನ APEDA ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕರದ ಯು. ಧರ್ಮರಾವ್ ಹಾಗೂ ಸಹಾಯಕ ವ್ಯವಸ್ಥಾಪಕರಾದ ಬಿ.ಕೆ. ಪೂಜಾ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ವಿಶೇಷ ಕಾರ್ಯಕ್ರಮ – ವಿಕಸಿತ ಭಾರತದ ಅಮೃತಕಾಲ ಸೇವೆ, ಉತ್ತಮ ಆಡಳಿತ ಹಾಗೂ ಗರೀಬ್ ಕಲ್ಯಾಣದ ಹನ್ನೊಂದು ವರ್ಷಗಳು, 10.00 ನಾಟಕ–ಮತ್ತೆ ಮಕ್ಕಳಂತಾಗಿ ಬಿಡೋಣ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 19 ಗುರುವಾರ 2025

ಸಂಪುಟ: 46 | ಸಂಚಿಕೆ: 63 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮತದಾರರಿಗೆ 15 ದಿನಗಳಲ್ಲಿ ವೋಟರ್ ಐಡಿ

ನವದೆಹಲಿ, ಜೂ.18– ಮತದಾರರ ಗುರುತಿನ ಚೀಟಿಗಳನ್ನು ಇನ್ನು 15 ದಿನಗಳಲ್ಲಿ ಮತದಾರರಿಗೆ ತಲುಪಿಸಲಾಗುವುದು ಎಂದು ಚುನಾವಣಾ ಆಯೋಗವು ಬುಧವಾರ ತಿಳಿಸಿದೆ.

ಈ ಮೂಲಕ ವೋಟರ್ ಐಡಿ ತೆಗೆದುಕೊಳ್ಳುವ ಸಮಯವನ್ನು ಅರ್ಧದಷ್ಟು ಕಡಿಮೆ ಮಾಡುತ್ತದೆ. ಇದುವರೆಗೆ, ಮತದಾರರ ಫೋಟೋ ಗುರುತಿನ ಚೀಟಿ ಮತದಾರರಿಗೆ ತಲುಪಲು 1 ತಿಂಗಳಿಗಿಂತ ಸ್ವಲ್ಪ ಹೆಚ್ಚು ಸಮಯ ಬೇಕಾಗುತ್ತಿತ್ತು ಎಂದು ಆಯೋಗದ ಅಧಿಕಾರಿಗಳು ಹೇಳಿದ್ದಾರೆ.

ಮತದಾರರ ಹೊಸ ನೋಂದಣಿ ಮಾಡಿಕೊಳ್ಳುವವರಿಗೆ ಅಥವಾ ಅಸ್ತಿತ್ವದಲ್ಲಿರುವ ಮತದಾರರ ವಿವರಗಳಲ್ಲಿ ಬದಲಾವಣೆ ಮಾಡಲು ಬಯಸುವವರಿಗೆ 15 ದಿನಗಳಲ್ಲಿ ವೋಟರ್‌ಕಾರ್ಡ್‌ಗಳನ್ನು ತಲುಪಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಹೊಸ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು ಪರಿಚಯಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಚುನಾವಣಾ ಆಯೋಗದ ಹೊಸ ವ್ಯವಸ್ಥೆಯು ಚುನಾವಣಾ ನೋಂದಣಿ ಅಧಿಕಾರಿ EPIC

ಚುನಾವಣಾ ಆಯೋಗದ ಮಹತ್ವದ ಕ್ರಮ



ಸಿದ್ಧಗೊಳ್ಳುವುದರಿಂದ ಹಿಡಿದು ಅಂಚೆ ಇಲಾಖೆ ಮೂಲಕ ಮತದಾರರಿಗೆ ವೋಟರ್ ಕಾರ್ಡ್ ತಲುಪಿಸುವವರೆಗೆ ಪ್ರತಿ ಹಂತದ ನೈಜ–ಸಮಯದ ಟ್ರ್ಯಾಕಿಂಗ್ ಅನ್ನು ಈ ವ್ಯವಸ್ಥೆ ಮೂಲಕ ಮಾಡಬಹುದು ಎಂದು ಚುನಾವಣಾ ಪ್ರಾಧಿಕಾರ ತಿಳಿಸಿದೆ.

ಮತದಾರರು ಪ್ರತಿ ಹಂತದಲ್ಲಿ SMS ಮೂಲಕ ನೋಟಿಫಿಕೇಷನ್ ಸ್ವೀಕರಿಸುತ್ತಾರೆ. ಅವರ ಮತದಾರರ ಫೋಟೋ ಗುರುತಿನ ಚೀಟಿ ಸ್ಥಿತಿಯ ಬಗ್ಗೆ ಮತದಾರರಿಗೆ ತಿಳಿಯುತ್ತದೆ. ಈ ಉದ್ದೇಶಕ್ಕಾಗಿ, ಚುನಾವಣಾ ಆಯೋಗ ಇತ್ತೀಚೆಗೆ ಪ್ರಾರಂಭಿಸಲಾದ ECINet ವೇದಿಕೆಯಲ್ಲಿ ಮೀಸಲಾದ ಐಟಿ ಮಾಡ್ಯೂಲ್ ಅನ್ನು ಪರಿಚಯಿಸಿದೆ. ಇದು ಕೆಲಸವನ್ನು ಸುಗಮಗೊಳಿಸುವ ಮೂಲಕ ಅಸ್ತಿತ್ವದಲ್ಲಿರುವ ಪ್ರಕ್ರಿಯೆ ಬದಲಾಯಿಸುತ್ತದೆ. ಈ ಉಪಕ್ರಮವು ಡೇಟಾ ಸುರಕ್ಷತೆ ಕಾಪಾಡಿಕೊಳ್ಳುವಾಗ ಸೇವಾ ವಿತರಣೆ ಹೆಚ್ಚಿಸುವ ಗುರಿ ಹೊಂದಿದೆ. ಕಳೆದ 4 ತಿಂಗಳಲ್ಲಿ ಆಯೋಗವು ಮತದಾರರ ಪ್ರಯೋಜನಕ್ಕಾಗಿ ವಿವಿಧ ಉಪಕ್ರಮಗಳನ್ನು ತೆಗೆದುಕೊಂಡಿದೆ.

> “ಮತದಾರರಿಗೆ EPICಗಳನ್ನು ವೇಗವಾಗಿ ತಲುಪಿಸುವುದನ್ನು ಖಚಿತಪಡಿಸಿಕೊಳ್ಳಲು ಹೊಸ ಪ್ರಮಾಣಿತ ಕಾರ್ಯ ವಿಧಾನ ಪರಿಚಯಿಸಲಾಗಿದೆ. ಇದು ಮತದಾರರ ಹೊಸ ನೋಂದಣಿ ಅಥವಾ ಅಸ್ತಿತ್ವದಲ್ಲಿರುವ ಮತದಾರರ ಯಾವುದೇ ವಿವರಗಳಲ್ಲಿನ ಬದಲಾವಣೆ ಸೇರಿದಂತೆ ಮತದಾರರ ಪಟ್ಟಿಯಲ್ಲಿ ನವೀಕರಣಗೊಂಡ 15 ದಿನಗಳಲ್ಲಿ ಮತದಾರರ ಫೋಟೋ ಗುರುತಿನ ಚೀಟಿಗಳನ್ನು ತಲುಪಿಸಲು ಸಹಾಯ ಮಾಡುತ್ತದೆ.
> –ಚುನಾವಣಾ ಆಯೋಗ.

ಯುಪಿಎಸ್ ನೌಕರರಿಗೆ ನಿವೃತ್ತಿ; ಮರಣ ಗ್ರಾಚುಟಿ ಸೌಲಭ್ಯ

ನವದೆಹಲಿ: ಏಕೀಕೃತ ಪಿಂಚಣಿ ಯೋಜನೆ (ಯುಪಿಎಸ್) ವ್ಯಾಪ್ತಿಯ ಕೇಂದ್ರ ಸರ್ಕಾರದ ಎಲ್ಲ ನೌಕರರು ಹಳೆ ಪಿಂಚಣಿ ಯೋಜನೆಯಲ್ಲಿ (ಒಪಿಎಸ್) ಇದ್ದ ನಿವೃತ್ತಿ ಮತ್ತು ಮರಣ ಗ್ರಾಚುಟಿ ಸೌಲಭ್ಯ ಪಡೆಯಬಹುದು ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ದೂರು ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಬುಧವಾರ ಹೇಳಿದ್ದಾರೆ.

ಈ ಕ್ರಮವು ಸರ್ಕಾರಿ ನೌಕರರ ಗಮನಾರ್ಹವಾದ ಬೇಡಿಕೆಯೊಂದಕ್ಕೆ ಸ್ಪಂದಿಸಿದೆ ಎಂದು ಹೇಳಿದ್ದಾರೆ. ಸಚಿವಾಲಯದ 11 ವರ್ಷಗಳ ಪಯಣದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುವಾಗ ಈ ವಿವರ ನೀಡಿದ್ದಾರೆ.

ಸಿಬ್ಬಂದಿ ಸಚಿವಾಲಯದ ಅಧೀನದ ಪಿಂಚಣಿ ಮತ್ತು ಪಿಂಚಣಿದಾರರ ಅಭಿವೃದ್ಧಿ ಇಲಾಖೆಯು ಬುಧವಾರ ಆದೇಶವೊಂದನ್ನು ಹೊರಡಿಸಿದೆ.

ನೌಕರರು ಸೇವೆಯಲ್ಲಿದ್ದ ಅವಧಿಯಲ್ಲಿ ಮೃತಪಟ್ಟರೆ ಒಪಿಎಸ್ ಸೌಲಭ್ಯಕ್ಕೆ ಮರಳುವ ಅವಕಾಶವನ್ನು ಈ ಆದೇಶ ಒದಗಿಸಿದೆ. ಇದು ನೌಕರರು ಬಯಸಿದ್ದ ಸ್ಪಷ್ಟನೆಯನ್ನು ಒದಗಿಸಿದೆ ಎಂದು ಇಲಾಖೆ ಕಾರ್ಯದರ್ಶಿ ವಿ.ಶ್ರೀನಿವಾಸ್ ತಿಳಿಸಿದ್ದಾರೆ.


ಆ.15ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್

ಖಾಸಗಿ ವಾಹನಗಳಿಗೆ ಮಾತ್ರವೇ ಅನ್ವಯ

ನವದೆಹಲಿ: ನಾಗರಿಕರಿಗೆ ಹೆದ್ದಾರಿ ಪ್ರಯಾಣಕ್ಕೆ ಅನುಕೂಲವಾಗುವಂತೆ ಖಾಸಗಿ ವಾಹನಗಳಿಗೆ ಫಾಸ್ಟ್‌ಟ್ಯಾಗ್ ಆಧಾರಿತ ವಾರ್ಷಿಕ ಪಾಸ್ ಆಗಸ್ಟ್ 15ರಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ಪರಿಚಯಿಸಲಿದೆ ಎಂದು ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.



ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಪಾಸ್ ಸಕ್ರಿಯಗೊಳಿಸಿದ ದಿನಾಂಕ ದಿಂದ ಒಂದು ವರ್ಷ ಅಥವಾ 200 ಟ್ರಿಪ್‌ಗಳವರೆಗೆ, ಯಾವುದು ಮೊದಲು ಬರುತ್ತದೆಯೋ ಅದಕ್ಕೆ ನಿಯಮ ಮಾನ್ಯವಾಗಿರುತ್ತದೆ. ಕಾರುಗಳು, ಜೀಪ್‌ಗಳು ಮತ್ತು ವ್ಯಾನ್‌ಗಳಂತಹ ವಾಣಿಜ್ಯೇತರ ಖಾಸಗಿ ವಾಹನಗಳ ಸಂಚಾರಕ್ಕೆ ಮಾತ್ರ ಈ ಪಾಸ್ ಅನ್ವಯವಾಗುತ್ತದೆ ಎಂದರು. ವಾರ್ಷಿಕ ಪಾಸ್ ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಜನರಿಗೆ ಸುಗಮ ಮತ್ತು ವೆಚ್ಚ–ಪರಿಣಾಮಕಾರಿ ಪ್ರಯಾಣವನ್ನು ಒದಗಿಸುತ್ತದೆ. ಈ ಪಾಸ್‌ಗೆ ಸಂಬಂಧಿಸಿದ ಲಿಂಕ್ ಶೀಘ್ರದಲ್ಲೇ ರಾಜ್ ಮಾರ್ಗ್ ಯಾತ್ರಾ ಅಪ್ಲಿಕೇಶನ್‌ನಲ್ಲಿ ಹಾಗೂ ಎನ್‌ಹೆಚ್‌ಎಐ ಮತ್ತು ಎಂಒಆರ್‌ಟಿಹೆಚ್‌ನ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ. 60 ಕಿಮೀ ವ್ಯಾಪ್ತಿಯೊಳಗೆ ಇರುವ ಟೋಲ್ ಪ್ಲಾಜಾಗಳಿಗೆ ಸಂಬಂಧಿಸಿದ ಪ್ರಯಾಣಿಕರ ದೀರ್ಘ ಕಾಲದ ಸಮಸ್ಯೆಗಳ ಈ ನೀತಿಯು ಪರಿಹರಿಸುತ್ತದೆ. ಒಂದೇ, ಕೈಗೆಟುಕುವ ವಹಿವಾಟಿನ ಮೂಲಕ ಟೋಲ್ ಪಾವತಿಗಳನ್ನು ಸರಳಗೊಳಿಸುತ್ತದೆ ಎಂದರು. ಈ ಪಾಸ್‌ನಿಂದ ಟೋಲ್ ಪ್ಲಾಜಾದಲ್ಲಿ ಕಾಯುವ ಸಮಯ ಕಡಿಮೆ ಮಾಡುವುದು, ದಟ್ಟಣೆ ಕಡಿಮೆ ಮಾಡುವುದು ಮತ್ತು ಟೋಲ್ ಪ್ಲಾಜಾಗಳಲ್ಲಿ ವಿವಾದಗಳನ್ನು ಬಗೆಹರಿಸುತ್ತದೆ. ವಾರ್ಷಿಕ ಪಾಸ್ ಲಕ್ಷಾಂತರ ಖಾಸಗಿ ವಾಹನ ಮಾಲೀಕರಿಗೆ ವೇಗವಾದ ಮತ್ತು ಸುಗಮ ಪ್ರಯಾಣದ ಅನುಭವವನ್ನು ನೀಡುವ ಗುರಿ ಹೊಂದಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದರು.


ನಿತಿನ್ ಗಡ್ಕರಿ

ಮಾವು ಬೆಳೆಗಾರರ ಆಕ್ರೋಶಕ್ಕೆ ಹೆದರಿ

ನಂದಿ ಬೆಟ್ಟದಲ್ಲಿ ನಡೆಯಬೇಕಿದ್ದ ಸಂಪುಟ ಸಭೆ ವಿಧಾನಸೌಧಕ್ಕೆ!

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಸಿದ್ಧ ನಂದಿ ಬೆಟ್ಟದಲ್ಲಿ ಜೂನ್ 19 ರಂದು ಮಧ್ಯಾಹ್ನ 12 ಗಂಟೆಗೆ ನಡೆಯಬೇಕಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ಸಭೆಯನ್ನು ಇದೀಗ ದಿಢೀರನೇ ಅಚ್ಚರಿಯ ರೀತಿಯಲ್ಲಿ ಬೆಂಗಳೂರಿನ ವಿಧಾನ ಸೌಧಕ್ಕೆ ಸ್ಥಳಾಂತರಿಸಲಾಗಿದೆ.

ಸಚಿವ ಸಂಪುಟ ಸಭೆ ವೇಳೆಯಲ್ಲಿ ಜೆಡಿಎಸ್ ನೇತೃತ್ವದಲ್ಲಿ ನಂದಿ ಹಿಲ್ಸ್‌ನಲ್ಲಿ ಪ್ರತಿಭಟನೆ ನಡೆಸಲು ರೈತರು ಯೋಜಿಸಿದ್ದರಿಂದ ಮಾವು ಬೆಳೆಗಾರರ ಕೋಪಕ್ಕೆ ಸರ್ಕಾರ ಹೆದರಿದೆ ಎಂದು ಪ್ರಾಥಮಿಕ ವರದಿಗಳು ಹೇಳಿವೆ. ಇದರಿಂದ ಆಗುವ ಮುಜುಗರಿಂದ ತಪ್ಪಿಸಿಕೊಳ್ಳಲು ಸರ್ಕಾರ ಸಚಿವ ಸಂಪುಟ ಸಭೆಯನ್ನು ಸ್ಥಳಾಂತರಿಸಿದೆ ಎಂದು ಮೂಲಗಳು ಹೇಳಿವೆ.

ಅಭಿವೃದ್ಧಿ ವಿಚಾರದಲ್ಲಿ ಘೋಷಣೆ ಸೇರಿದಂತೆ ಕೆಲವು ನಿರ್ಧಾರಗಳು ಇನ್ನೂ ಕಾರ್ಯಗತಗೊಳ್ಳದ ಹಿನ್ನೆಲೆಯಲ್ಲಿ ಕ್ಯಾಬಿನೆಟ್ ಸಭೆಯನ್ನು ಸ್ಥಳಾಂತರಿಸಲು ಸರ್ಕಾರ ನಿರ್ಧರಿಸಿದೆ. ಆದರೆ ಶೀಘ್ರದಲ್ಲೇ ನಂದಿ ಹಿಲ್ಸ್‌ನಲ್ಲಿ ಸಚಿವ ಸಂಪುಟ ಸಭೆಗೆ ಮರು ದಿನಾಂಕ ನಿಗದಿಪಡಿಸಲಾಗುವುದು ಎಂದು ಅಧಿಕೃತ ಮೂಲಗಳು ಹೇಳಿವೆ.

ಮಾವಿಗೆ ಬೆಂಬಲ ಬೆಲೆಗೆ ಆಗ್ರಹ: ಮಾವಿಗೆ ಕನಿಷ್ಠ 10ರಿಂದ 15 ಸಾವಿರ ರೂ.ವರೆಗೆ ಬೆಂಬಲ ಬೆಲೆ ನೀಡಬೇಕೆಂಬ ಮಾವು ಬೆಳೆಗಾರರ ಆಗ್ರಹ ಸರ್ಕಾರಕ್ಕೆ ಬಿಸಿ ಮುಟ್ಟಿಸಿದೆ.

ಐಶ್ವರ್ಯಗೌಡ ವಂಚನೆ ಪ್ರಕರಣ ಸಿಐಡಿಗೆ



ಬೆಂಗಳೂರು: ಐಶ್ವರ್ಯ ಗೌಡ ವಂಚನೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಐಶ್ವರ್ಯ ವಿರುದ್ಧ ರಾಜರಾಜೇಶ್ವರಿ ನಗರ, ಚಂದ್ರಾಲೇಔಟ್, ಮಂಡ್ಯ ಸೇರಿ ಹಲವಾರು ಕಡೆ ಕೇಸ್ ದಾಖಲಾಗಿತ್ತು. ಈಗ ಐಶ್ವರ್ಯ ಗೌಡ ವಂಚನೆ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ. ಸಿಡಿಆರ್ ಪ್ರಕರಣ ಹೊರತುಪಡಿಸಿ ಉಳಿದ ಪ್ರಕರಣದ ತನಿಖೆಯನ್ನು ಸಿಐಡಿ ನಡೆಸಲಿದೆ. ಸಿಐಡಿಯ ಆರ್ಥಿಕ ಅಪರಾಧ ವಿಭಾಗಕ್ಕೆ ಕೇಸ್ ವರ್ಗಾವಣೆ ಮಾಡಲಾಗಿದೆ. ಈಗಾಗಲೇ ಬ್ಯಾಟರಾಯನಪುರ ಉಪವಿಭಾಗದ ಪೊಲೀಸರು ಕೇಸ್‌ನ ತನಿಖೆ ನಡೆಸಿದ್ದರು. ಇದೀಗ ಮುಂದಿನ ತನಿಖೆಗೆ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ. ಮತ್ತೊಂದು ಕಡೆ ಇಡಿಯಿಂದ ಕೂಡ ವಂಚನೆ ಕೇಸ್ ತನಿಖೆ ನಡೆಯುತ್ತಿದೆ. ಪ್ರಕರಣದಲ್ಲಿ ಇಡಿ ಅಧಿಕಾರಿಗಳು ಐಶ್ವರ್ಯ ಗೌಡಳನ್ನು ಬಂಧಿಸಿ ಜೈಲಿಗೆ ಕಳಿಸಿದ್ದರು. ಆದಾದ ಬಳಿಕ ಮಾಜಿ ಸಂಸದ ಡಿ.ಕೆ ಸುರೇಶ್ ಕೂಡ ಪ್ರಕರಣದಲ್ಲಿ ತನಿಖೆಗೆ ಹಾಜರಾಗುವಂತೆ ಇಡಿ ನೋಟಿಸ್ ಕೊಟ್ಟಿದ್ದು, ತನಿಖೆ ಮುಂದುವರಿಸಿದೆ.

ಟ್ರಂಪ್‌ಗೂ ಖಮೇನಿ ಡೋಂಟ್ ಕೇರ್; ನಾವು ಶರಣಾಗಲ್ಲ



ಟೆಹರಾನ್: ಇಸ್ರೇಲ್ ಹಾಗೂ ಇರಾನ್ ನಡುವಣ ಸಂಘರ್ಷ ತೀವ್ರಗೊಳ್ಳುತ್ತಿರುವಂತೆಯೇ ಬೇಷರತ್ತಾಗಿ ಶರಣಾಗುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಎಚ್ಚರಿಕೆಗೂ ಡೋಂಟ್ ಕೇರ್ ಎಂದ ಅಯತೊಲ್ಲಾ ಅಲಿ ಖಮೇನಿ ಇರಾನ್ ಶರಣಾಗುವುದಿಲ್ಲ ಎಂದು ಗುಡುಗಿದ್ದಾರೆ.

ಬುಧವಾರ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಖಮೇನಿ, ಇರಾನ್ ಶರಣಾಗುವ ರಾಷ್ಟ್ರವಲ್ಲ. ಅಲ್ಲದೇ ಯಾವುದೇ ಮಿಲಿಟರಿ ಹಸ್ತಕ್ಷೇಪವು ನಿಸ್ಸಂದೇಹವಾಗಿ ಸರಿಪಡಿಸಲಾಗದ ಹಾನಿಗೆ ಕಾರಣವಾಗುತ್ತದೆ ಎಂಬುದನ್ನು ಅಮೆರಿಕನ್ನರು ತಿಳಿದಿರಬೇಕು ಎಂದರು. ಇರಾನ್ ರಾಷ್ಟ್ರವನ್ನು ಚೆನ್ನಾಗಿ ಬಲ್ಲವರೂ, ಅದರ ಇತಿಹಾಸದ ಬಗ್ಗೆ ▶ 6ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಡಿಮೆ ಬಂದರೆ ಶಿಕ್ಷಕರ ವಾರ್ಷಿಕ ವೇತನ ಬಡ್ತಿಗೆ ತಡೆ

ಶಾಲೆ ಅನುದಾನಕ್ಕೂ ಕತ್ತರಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಡಿಮೆ ಫಲಿತಾಂಶ ಪಡೆದಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮೇಲೆ ಕ್ರಮಕ್ಕೆ ಶಿಕ್ಷಣ ಇಲಾಖೆ ಮುಂದಾಗಿದೆ. ಈ ವರ್ಷದ ಫಲಿತಾಂಶದ ಬಗ್ಗೆ ಸಿಎಂ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ, ಮುಂದಿನ ವರ್ಷ 75% ಫಲಿತಾಂಶದ ಟಾರ್ಗೆಟ್ ನೀಡಿದ ಬಳಿಕ ಕಡಿಮೆ ಫಲಿತಾಂಶದ ಶಾಲೆಗಳ ಮೇಲೆ ಶಿಕ್ಷಣ ಇಲಾಖೆ ಕ್ರಮಕ್ಕೆ ಮುಂದಾಗಿದೆ.

60%ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕರಿಗೆ ಇಲಾಖೆ ನೋಟಿಸ್ ಜಾರಿ ಮಾಡಿದೆ. ಎಲ್ಲಾ ಸೌಲಭ್ಯ ನೀಡಿದರೂ ಫಲಿತಾಂಶ ಕಡಿಮೆ ಬಂದಿದೆ. ನಿಮ್ಮ ಮೇಲೆ ಯಾಕೆ ಕ್ರಮ ತೆಗೆದುಕೊಳ್ಳಬಾರದು ಎಂದು ನೋಟಿಸ್ ಜಾರಿ ಮಾಡಿದೆ.

ಫಲಿತಾಂಶ ಉತ್ತಮಗೊಳಿಸುವ ನಿಟ್ಟಿನಲ್ಲಿ ನೀವು ಏಕೆ ಕ್ರಮ ತೆಗೆದುಕೊಂಡಿಲ್ಲ. ಇದು ಕರ್ತವ್ಯ ಲೋಪ ಅಲ್ಲವೇ ಅಂತ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದು, ಉತ್ತರ ಕೊಡುವಂತೆ ಶಿಕ್ಷಣ ಇಲಾಖೆ ಸೂಚಿಸಿದೆ. ನೋಟಿಸ್‌ಗೆ ಉತ್ತರ ಕೊಟ್ಟ ಬಳಿಕ ಅಂತಹ ಶಾಲಾ ಮುಖ್ಯ ಶಿಕ್ಷಕರ ವಿರುದ್ಧ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಲಾಗಿದೆ. ಖಾಸಗಿ ಅನುದಾನಿತ ಶಾಲೆಗಳ ಮೇಲೆ ಕಠಿಣ ಕ್ರಮಕ್ಕೆ ಮುಂದಾಗಿದೆ. 60%ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಶಾಲಾ ಶಿಕ್ಷಕರು, ▶ 6ನೇ ಪುಟಕ್ಕೆ

ಇಂಧನ ಇಲಾಖೆಯ 35 ಸಾವಿರ ಹುದ್ದೆ ಭರ್ತಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ
- ಇಲಾಖೆಯ 532 ಪೌರಕಾರ್ಮಿಕರ ಕಾಯಂ

ಬೆಂಗಳೂರು, ಜೂ. 18(ಕೆಎಂಶಿ)– ವಿದ್ಯುತ್ ಪ್ರಸರಣ ಇಲಾಖೆಯಲ್ಲಿ ಖಾಲಿ ಇರುವ 35,000 ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಲಾಖೆಯ 532 ಪೌರಕಾರ್ಮಿಕರ ಹುದ್ದೆ ಕಾಯಂ ಮಾಡುವುದಾಗಿ ಭರವಸೆ ನೀಡಿದರು. ನಮ್ಮದು ನುಡಿದಂತೆ ನಡೆಯುವ ಸರ್ಕಾರ, ನಿಮ್ಮ ಬೇಡಿಕೆಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ, ನೂತನ ಪಿಂಚಣಿ ಯೋಜನೆ ಜಾರಿ ಮಾಡಿದ್ದು ಕೇಂದ್ರ ಸರ್ಕಾರ.



ನಾವು ಹಳೆ ಪಿಂಚಣಿ ಯೋಜನೆ ಪುನಃ ಜಾರಿಗೆ ತರುವುದಾಗಿ ಪ್ರಣಾಳಿಕೆಯಲ್ಲೇ ಘೋಷಿಸಿದ್ದು, ಈ ಬಗ್ಗೆ ಚರ್ಚಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ವಿದ್ಯುತ್ ಪ್ರಸರಣ ನಿಗಮದ ನೌಕರರು ಮತ್ತು ಕಾರ್ಮಿಕರು ಶ್ರಮವಹಿಸಿ ಕೆಲಸ ನಿರ್ವಹಿಸುತ್ತಿದ್ದು, ಸಿಬ್ಬಂದಿಯ ಎಲ್ಲಾ ಬೇಡಿಕೆ ಈಡೇರಿಸಲು ಸರ್ಕಾರ ಸಿದ್ಧವಿದೆ. ನಾವು ನಿಮ್ಮ ಜೊತೆಗಿದ್ದೇವೆ, ನೀವು ನಮ್ಮ ಜೊತೆಗಿರಿ ಎಂದರು. ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಪೂರೈಸುವ ಹೊಣೆಗಾರಿಕೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೀರಿ. ಇದಕ್ಕಾಗಿ ಎಲ್ಲರೂ ಅಭಿನಂದನಾರ್ಹರು. ಏಷ್ಯಾದಲ್ಲಿ ಮೊದಲ ಬಾರಿಗೆ ವಿದ್ಯುತ್ ಉತ್ಪಾದನೆಯಾಗಿದ್ದು 1902ರಲ್ಲಿ ಕರ್ನಾಟಕದಲ್ಲಿ. 1905ರಲ್ಲಿ ಬೆಂಗಳೂರಿನಲ್ಲಿ ಪ್ರಥಮ ವಿದ್ಯುತ್ ಸರಬರಾಜು ಕಂಪನಿ ಆರಂಭಿಸಲಾಯಿತು. 1908ರಲ್ಲಿ ಮೊದಲ ಬಾರಿ ಅರಮನೆಗೆ ವಿದ್ಯುತ್ ಪೂರೈಸಲಾಯಿತು. ಅಲ್ಲಿಂದ ಇದುವರೆಗೆ ರಾಜ್ಯದಲ್ಲಿ 34,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿರುವುದು ಹೆಗ್ಗಳಿಕೆ. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆಯಲ್ಲೂ 7 ಗಂಟೆ ಅಗತ್ಯ ವಿದ್ಯುತ್ ಸರಬರಾಜು ಗುರಿಯೊಂದಿಗೆ ಕಾಮಗಾರಿಗಳು ನಡೆಯುತ್ತಿವೆ. 60,000 ಮೆಗಾವ್ಯಾಟ್ ಉತ್ಪಾದನೆ ಗುರಿ ನಾವು ತಲುಪಿದಾಗ ಇದು ಸಾಧ್ಯವಾಗಲಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಚಾಮರಾಜನಗರ ಯುವ ಲೇಖಕ ಆರ್. ದಿಲೀಪ್‌ಕುಮಾರ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ

ಚಾಮರಾಜನಗರ, ಜೂ.18–ನಗರದ ಆರ್.ದಿಲೀಪ್ ಕುಮಾರ್ ಅವರಿಗೆ ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಲಭಿಸಿದೆ. ದಿಲೀಪ್ ಅವರ 'ಪಚ್ಚೆಯ ಜಗುಲಿ' ಪಂಪನ ಎರಡು ಕಾವ್ಯಗಳ ವಿಮರ್ಶಾ ಲೇಖನಗಳ ಸಂಕಲನಕ್ಕೆ ಈ ಪುರಸ್ಕಾರ ನೀಡಲಾಗಿದೆ.


ದಿಲೀಪ್‌ಕುಮಾರ್

ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಗೆ ದೊರೆತಿರುವ ಮೊದಲ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಇದಾಗಿದೆ. ದಿಲೀಪ್ ಅವರ 'ಪಚ್ಚೆಯ ಜಗುಲಿ' ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ (ಪಂಪಭಾರತ) ಕುರಿತ ವಿಮರ್ಶಾ ಲೇಖನಗಳ ಸಂಕಲನವಾಗಿದೆ. ನಗರದ ಕಾರಾಗೃಹದ ಹಿಂಭಾಗದಲ್ಲಿರುವ ಬಡಾವಣೆಯ ನಿವಾಸಿಯಾದ ದಿಲೀಪ್, ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಹಳಗನ್ನಡ, ನಡುಗನ್ನಡ, ನವ್ಯ, ನವೋದಯ ಮತ್ತು ▶ 6ನೇ ಪುಟಕ್ಕೆ

ಕೆಲಸದ ಅವಧಿ 9ರಿಂದ 10 ಗಂಟೆಗೆ ಹೆಚ್ಚಳ ಚಿಂತನೆ

ಕಾರ್ಮಿಕ ಸಂಘಟನೆಗಳ ವಿರೋಧ

ಬೆಂಗಳೂರು: ಕರ್ನಾಟಕದಲ್ಲಿ ಕಾರ್ಮಿಕರ ಕೆಲಸದ ಅವಧಿಯ ಗರಿಷ್ಠ ಮಿತಿಯನ್ನು ದಿನಕ್ಕೆ 9ರಿಂದ 10 ಗಂಟೆಗೆ ಹೆಚ್ಚಳಕ್ಕೆ ಸರ್ಕಾರ ಚಿಂತನೆ ನಡೆಸಿದೆ. ಸದ್ಯ ಕಾರ್ಮಿಕ ಕಾನೂನು ತಿದ್ದುಪಡಿ ಕುರಿತು ಚರ್ಚಾ ಹಂತದಲ್ಲಿ ಇರುವ ರಾಜ್ಯ ಸರ್ಕಾರ, ಅಭಿಪ್ರಾಯ ಸಂಗ್ರಹಿಸುತ್ತಿದೆ. ವಿಕಾಸಸೌಧದಲ್ಲಿ ಬುಧವಾರ ಕಾರ್ಮಿಕ ಇಲಾಖೆಯಿಂದ ಕೈಗಾರಿಕಾ ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಸಭೆ ನಡೆಯಿತು. ಕಾರ್ಮಿಕ ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಸೇರಿದಂತೆ ಅಧಿಕಾರಿಗಳು, ಕಾರ್ಖಾನೆಗಳ ಮಾಲೀಕರು, ಕಾರ್ಮಿಕ ಸಂಘಟನೆಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು. ಸದ್ಯ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961ರ ಸೆಕ್ಷನ್ 7ರ ಪ್ರಕಾರ ಕೆಲಸದ ಅವಧಿ ದಿನಕ್ಕೆ 9 ಗಂಟೆ ಮೀರಬಾರದು ಮತ್ತು ಗರಿಷ್ಠ ಒಟಿ 10 ಗಂಟೆಗಳನ್ನು ಮೀರಬಾರದು ಎಂಬ ನಿಯಮವಿದೆ. ಆದರೆ ಇದೀಗ ಕಾಯ್ದೆ ತಿದ್ದುಪಡಿ ಮಾಡುವ ಮೂಲಕ ಕೆಲಸದ ಅವಧಿಯನ್ನ ದಿನಕ್ಕೆ ಗರಿಷ್ಠ 10 ಗಂಟೆ ಮತ್ತು ಹೆಚ್ಚುವರಿ ಕೆಲಸದ ಅವಧಿಯನ್ನು ದಿನಕ್ಕೆ ಗರಿಷ್ಠ 12 ಗಂಟೆಗಳಿಗೆ ವಿಸ್ತರಿಸಲು ಚಿಂತಿಸಿದೆ. ಈ ಚಿಂತನೆಗೆ ಕಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. ಕಾರ್ಮಿಕ ವಿರೋಧಿ ಕಾನೂನು ಜಾರಿ ಆಗಬಾರದು. ಆದರೆ ಕಾರ್ಖಾನೆ, ▶ 6ನೇ ಪುಟಕ್ಕೆ



ಪಿರಿಯಾಪಟ್ಟಣ ಬಳಿ ಹಳ್ಳಕ್ಕೆ ಉರುಳಿದ ಶಾಲಾ ವಾಹನ; 20 ಮಕ್ಕಳಿಗೆ ಗಾಯ

9 ಮಕ್ಕಳಿಗೆ ಚೆಲುವಾಂಬ ಆಸ್ಪತ್ರೆಯಲ್ಲಿ ಚಿಕಿತ್ಸೆ, ಚಾಲಕ ಶ್ರೀನಿವಾಸ ಕೆ.ಆರ್.ಆಸ್ಪತ್ರೆಗೆ ದಾಖಲು

ಮೈಸೂರು, ಜೂ. 18(ಆರ್‌ಕೆ)– ಮೈಸೂರಲ್ಲಿ ಸಂಚಾರ ಪೊಲೀಸರು ಶಾಲಾ ವಾಹನಗಳ ಸ್ಥಿತಿಗತಿ ಪರಿಶೀಲಿಸುತ್ತಿರುವ ಬೆನ್ನಲ್ಲೇ ಶಾಲಾ ಮಕ್ಕಳ ವಾಹನವೊಂದು ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿ ಬಿದ್ದು 20 ಮಕ್ಕಳು ಗಾಯಗೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ. ಈ ದುರ್ಘಟನೆ ಸಂಭವಿಸಿದ ಸ್ಥಳದಿಂದ 10 ಮೀಟರ್ ಅಂತರದಲ್ಲಿ ಹೈಟೆನ್ಷನ್ ವಿದ್ಯುತ್ ಕಂಬವಿದ್ದು, ಒಂದು ವೇಳೆ ಅದಕ್ಕೆ ಡಿಕ್ಕಿ ಹೊಡೆದಿದ್ದರೆ ಭಾರಿ ಅನಾಹುತವೇ ಸಂಭವಿಸುತ್ತಿತ್ತು.

ತಾಲೂಕಿನ ಹಬ್ಬನಕುಪ್ಪೆ ಮತ್ತು ಹೊಸಕೋಪ್ಪಲು ಗ್ರಾಮದ ನಡುವೆ ಬುಧವಾರ ಬೆಳಗ್ಗೆ ಸುಮಾರು 8 ಗಂಟೆ ವೇಳೆ ಘಟನೆ ಸಂಭವಿಸಿದ್ದು, ಪರಿಣಾಮ ವಾಹನ (ಕೆಎ 41–ಬಿ 3263)ದಲ್ಲಿ ಶಾಲೆಗೆ ತೆರಳುತ್ತಿದ್ದ 20 ಮಕ್ಕಳು ಗಾಯಗೊಂಡಿದ್ದು, ಆ ಪೈಕಿ 9 ಮಕ್ಕಳನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಮೈಸೂರಿಗೆ ಕರೆತಂದು ಚೆಲುವಾಂಬ ಆಸ್ಪತ್ರೆಯಲ್ಲಿ ದಾಖಲಿಸಲಾಯಿತು.


ಪಿರಿಯಾಪಟ್ಟಣ ಬಳಿ ಶಾಲಾ ವಾಹನ ಹಳ್ಳಕ್ಕೆ ಉರುಳಿ ಬಿದ್ದಿರುವುದು.

ಚಿಕಿತ್ಸೆ ಪಡೆದ ಬಳಿಕ ಗುಣಮುಖರಾದ ಶಾಲಾ ಮಕ್ಕಳನ್ನು ಸಂಜೆ ಆಸ್ಪತ್ರೆಯಿಂದ ಮನೆಗೆ ಕಳುಹಿಸಿಕೊಡಲಾಗಿದ್ದು, ಉಳಿದ ಮಕ್ಕಳನ್ನು ಹುಣಸೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ ಎಂದು ಪಿರಿಯಾಪಟ್ಟಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಎಲ್ಲಾ ಶಾಲಾ ಮಕ್ಕಳೂ ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದು, ವಾಹನ ಚಾಲಕ ಶ್ರೀನಿವಾಸ ಹಣೆ ಭಾಗದಲ್ಲಿ ಗಾಯವಾಗಿರುವುದರಿಂದ ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ನಾಳೆ (ಜೂ.19) ಅವರನ್ನು ಡಿಸ್‌ಚಾರ್ಜ್ ಮಾಡುವುದಾಗಿ ವೈದ್ಯರು ಹೇಳಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಪಿರಿಯಾಪಟ್ಟಣ ತಾಲೂಕು, ಕಂಪಲಾಪುರದಲ್ಲಿರುವ ಎಂ.ಆರ್.ನೋಬೆಲ್ ಇಂಗ್ಲಿಷ್ ಮೀಡಿಯಂ ಶಾಲೆಗೆ ಮಕ್ಕಳನ್ನು ಕರೆದೊಯ್ಯುತ್ತಿದ್ದ ವಾಹನ, ಎದುರಿಂದ ಬಂದ ಮತ್ತೊಂದು ವಾಹನಕ್ಕೆ ಜಾಗ ಬಿಡಲೆಂದು ಬ್ರೇಕ್ ಹಾಕಿದಾಗ ನಿಯಂತ್ರಣ ತಪ್ಪಿ ಉರುಳಿ ಬಿದ್ದಿತು ಎಂದು ಚಾಲಕ ಶ್ರೀನಿವಾಸ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ನಾನು ಇತ್ತೀಚೆಗಷ್ಟೇ ಈ ವಾಹನ ಓಡಿಸುತ್ತಿದ್ದೇನೆ. ▶ 6ನೇ ಪುಟಕ್ಕೆ

ಗೂಡ್ಸ್ ವಾಹನದ ಟೈರ್ ಸ್ಫೋಟಿಸಿ ಉರುಳಿ ಬಿದ್ದು 18 ಮಹಿಳಾ ಕಾರ್ಮಿಕರಿಗೆ ತೀವ್ರ ಗಾಯ

ಗುಂಡ್ಲುಪೇಟೆ (ಸೋಮ್.ಜಿ): ತಾಲೂಕಿನ ವಡ್ಡಗೆರೆ ಸಮೀಪ ಬುಧವಾರ ಟೈರ್ ಸ್ಫೋಟಿಸಿ ಗೂಡ್ಸ್ ವಾಹನ ಉರುಳಿ ಬಿದ್ದ ಪರಿಣಾಮ ಕೂಲಿ ಕೆಲಸಕ್ಕೆ ಹೋಗುತ್ತಿದ್ದ 18 ಮಹಿಳಾ ಕಾರ್ಮಿಕರು ಗಾಯಗೊಂಡಿದ್ದು, ಅವರನ್ನು ಚಾ.ನಗರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.


ಟೈರ್ ಸ್ಫೋಟಿಸಿ ಗೂಡ್ಸ್ ವಾಹನ ಉರುಳಿ ಬಿದ್ದಿರುವುದು.

ಚಾಮರಾಜನಗರ ತಾಲೂಕಿನ ಯಾನಗಹಳ್ಳಿ ಗ್ರಾಮದಿಂದ ಕುಮಾರ್ ಎಂಬುವರು ತಮ್ಮ ಗೂಡ್ಸ್ ವಾಹನ (ಕೆಎ10, ಎ 5001)ದಲ್ಲಿ ತಾಲೂಕಿನ ಅಂಕಹಳ್ಳಿ ಜಮೀನಿಗೆ 18 ಮಹಿಳಾ ಕಾರ್ಮಿಕರನ್ನು ಕೂಲಿ ಕೆಲಸಕ್ಕೆ ಕರೆದೊಯ್ಯುತ್ತಿದ್ದರು. ವಡ್ಡಗೆರೆ ಸಮೀಪ ಇದರ ಮುಂದಿನ ಟೈರ್ ಸ್ಫೋಟಿಸಿ ಆಗ ಚಾಲಕನ ನಿಯಂತ್ರಣ ತಪ್ಪಿದ ವಾಹನ ರಸ್ತೆಬದಿಗೆ ಉರುಳಿ ಬಿದ್ದಿದೆ. ಘಟನೆಯಲ್ಲಿ ವಾಹನದಲ್ಲಿ ಪ್ರಯಾಣಿಸುತ್ತಿದ್ದ 18 ಕಾರ್ಮಿಕರಿಗೂ ಪೆಟ್ಟುಬಿದ್ದಿದ್ದು 17 ಮಂದಿಯನ್ನು ಚಾ.ನಗರ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ತೀವ್ರ ಪೆಟ್ಟಾಗಿದ್ದ ಒಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ. ಡಿವೈಎಸ್‌ಪಿ ಲಕ್ಷ್ಮಯ್ಯ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ವರಿಷ್ಠಾಧಿಕಾರಿ ಶಶಿಧರ್ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿ, ಘಟನೆ ಬಗ್ಗೆ ಮಾಹಿತಿ ಪಡೆದರು. ಪ್ರಕರಣ ದಾಖಲಿಸಿಕೊಂಡಿರುವುದಾಗಿ ತೆರಕಣಾಂಬಿ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕೆ.ಎಂ.ಮಹೇಶ್ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಬೆಳಗ್ಗೆ ಮಂತ್ರಿ ಬಂದ ಸಸಿ ನೆಟ್ಟ...
ಮಧ್ಯಾಹ್ನ ಕುರಿ ಬಂತು ಆ ಸಸಿ ತಿಂತು...
ರಾತ್ರಿ ಮಂತ್ರಿ ಬಂದು ಕುರಿ ತಿಂದ...
ಇಲ್ಲಿಗೆ ಪರಿಸರ ದಿನವೂ ಮುಗಿಯಿತು. ಎಲ್ಲಾ ಲೆಕ್ಕಾನು ಚುಕ್ತಾ ಆಯ್ತು.

ಮೈಸೂರು ಮಿತ್ರ

ಗುರುವಾರ, 19 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಎಲ್ಲೂ ಎಡವದಂತೆ ನಡೆಯುವುದು ದೊಡ್ಡದಲ್ಲ, ಎಷ್ಟು ಬಾರಿ ಬಿದ್ದರೂ ಎದ್ದು ಮುನ್ನಡೆಯುವುದು ಶ್ರೇಷ್ಠ ಸಾಧಕನ ಲಕ್ಷಣ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನಿ ಹನಿ ಸೇರಿದರೆ ಹಳ್ಳ, ತೆನೆ ತೆನೆ ಸೇರಿದರೆ ಬಳ್ಳ

ನಿಮ್ಮ ಪತ್ರಗಳು

■ 'ಗಂಡಭೇರುಂಡ ಉದ್ಯಾನವನ' ಯೋಜನೆ ಸಾಕಾರಗೊಳ್ಳಲು ಸಹಕರಿಸಿದ ಒಳ್ಳೆ ಅಧಿಕಾರಿ!

ಮಾನ್ಯರೆ,

ನಾನು, 2013–18ರ ಅವಧಿಯಲ್ಲಿ ಮೈಸೂರಿನ ಕುವೆಂಪುನಗರದ ವಾರ್ಡ್ ನಂ.17ರಲ್ಲಿ ನಗರಪಾಲಿಕೆ ಸದಸ್ಯನಾಗಿದ್ದೆ. ಆಗ ಉದಯ ರವಿ ರಸ್ತೆಯಲ್ಲಿ ಬರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಹಾಗೂ ಪ್ರಮತಿ ಶಾಲೆಯ ಮಧ್ಯ ಭಾಗ ಒಂದು ದೊಡ್ಡ ಖಾಲಿ ಜಾಗವಿತ್ತು. ಅದನ್ನ ಒಂದು ಸುಂದರ ಉದ್ಯಾನವನ ಮಾಡಬೇಕು ಎಂಬ ಉದ್ದೇಶದಿಂದ ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಯನ್ನು ಆಗಿನ ಮುಡಾ ಕಮಿಷನರ್ ಆಗಿದ್ದ ಪಾಲಯ್ಯನವರಿಗೆ ಒದಗಿಸಿದ್ದೆ. ಆ ಫೈಲ್ ನಂತರ ಮುಡಾ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿದ್ದ ಎಂ.ಶಿವಕುಮಾರ್ ಅವರ ಮೇಜಿಗೆ ಬಂದಿತು. ನಾನು ಅವರ ಬಳಿ ಹೋಗಿ 'ಸರ್ ಆದಷ್ಟು ಬೇಗ ಆ ಉದ್ಯಾನವನ ಆಗಬೇಕು' ಎಂದು ವಿನಂತಿಸಿಕೊಂಡೆ.



ಎಂ.ಶಿವಕುಮಾರ್

ತಕ್ಷಣ ಅವರು ಇಂಜಿನಿಯರ್‌ಗಳಾದ ಪ್ರಭಾಕರ್ ಮತ್ತು ಜಗದೀಶ್ ಅವರನ್ನು ಕರೆದು, ಇವರು ಸಾರ್ವಜನಿಕ ಕೆಲಸಕ್ಕೆ ಈ ದಾಖಲೆಯನ್ನು ಒದಗಿಸಿದ್ದಾರೆ. ಆದಷ್ಟು ಬೇಗ ಈ ಕೆಲಸ ಅಗಬೇಕು ಎಂದು ಹೇಳಿ, ಆ ಉದ್ಯಾನವನ ಆಗಲು ತುಂಬಾ ಸಹಾಯ ಮಾಡಿದರು. ಆ ಉದ್ಯಾನವನವೇ ಈಗ ಮೈಸೂರಿನಲ್ಲೇ ಪ್ರಸಿದ್ಧವಾಗಿರುವ 'ಗಂಡಭೇರುಂಡ ಉದ್ಯಾನವನ'. ನನ್ನ ಗೆಳೆಯರೂ ಆಗಿದ್ದ ಇಂಜಿನಿಯರ್ ಮದನ್‌ರವರು ಇತ್ತೀಚೆಗೆ ಅಪಘಾತದಲ್ಲಿ ಹೋಗಿಬಿಟ್ಟರು. ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಹೋದಾಗ ಅಲ್ಲಿ ಇಂಜಿನಿಯರ್ ಜಗದೀಶ್ ಸಿಕ್ಕಿದ್ದರು. ಶಿವಕುಮಾರ್ ಅವರ ಬಗ್ಗೆ ಅವರಲ್ಲಿ ವಿಚಾರಿಸಿದ್ದೆ. ಅದಾದ ಕೆಲವು ದಿನಗಳ ನಂತರ ನನಗೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಶಿವಕುಮಾರ್ ಅವರ ನಿಧನದ ವಿಷಯ ಓದಿ ಮನಸ್ಸಿಗೆ ತುಂಬಾ ನೋವಾಯಿತು. ಇಂತಹ ಒಳ್ಳೆಯ ಮನುಷ್ಯನನ್ನ ಆ ದೇವರು ಇಷ್ಟು ಬೇಗ ತನ್ನ ಬಳಿ ಕರೆದುಕೊಂಡನಲ್ಲ ಅಂತ ಬೇಸರವಾಯಿತು. ನಾನು ಹಾವಿನ ಸಂರಕ್ಷಣೆಗೆ ಅವರು ವಾಸವಿದ್ದ ದಟ್ಟಗಳ್ಳಿ ಕಡೆ ಹೋದಾಗಲೆಲ್ಲ ಅವರನ್ನ ಮಾತನಾಡಿಸಿ, ಅವರ ಮನೆಯಲ್ಲಿ ಟೀ ಕುಡಿದು ಬರುತ್ತಿದ್ದೆ. ಅವರು ಬಹಳ ಒಳ್ಳೆಯ ಕೆಲಸಗಳನ್ನ ಮಾಡಿದ್ದಾರೆ. ಇಂತಹ ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳು ಸರ್ಕಾರಿ ಕೆಲಸಕ್ಕೆ ಬಂದರೆ ಜನರಿಗೆ ಒಳ್ಳೆಯ ಕೆಲಸಗಳಾಗುತ್ತವೆ. ಇವತ್ತು ಅವರು ನಮ್ಮನ್ನ ಅಗಲಿದ್ದರೂ ಅವರ ನೆನಪು ಸದಾ ನನ್ನ ಮನಸ್ಸಿನಲ್ಲಿ ಇದ್ದೆ ಇರುತ್ತದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.



–ಸ್ನೇಕ್ ಶ್ಯಾಮ್, ಉರಗ ಸಂರಕ್ಷಕ ಹಾಗೂ ಮಾಜಿ ಕಾರ್ಪೋರೇಟರ್, ಮೊ.:9980557797

■ ಪ್ಲೀಸ್ ದುರ್ನಾತಕ್ಕೆ ಅಂತ್ಯ ಹಾಡಿ



ಮಾನ್ಯರೆ,

ಮೈಸೂರಿನ ಪಡುವಾರಹಳ್ಳಿ ಬಳಿ ಇರುವ ಸಿಗ್ನಲ್ ಪಾಯಿಂಟ್‌ನಲ್ಲಿ ಪ್ರತಿ ದಿನವೂ ಅತೀ ಹೆಚ್ಚು ಸಂಚಾರ ದಟ್ಟಣೆ ಇರುತ್ತದೆ. ಅಂತೆಯೇ, ಅದೇ ಸಿಗ್ನಲ್ ಪಾಯಿಂಟ್ ಬಳಿಯಿರುವ ಶ್ರೀ ಆದಿಚುಂಚನಗಿರಿ ವಿದ್ಯಾರ್ಥಿ ನಿಲಯದ ಕಾಂಪೌಂಡ್ ಹತ್ತಿರವಿರುವ ಮ್ಯಾನ್ ಹೋಲ್ ಬ್ಲಾಕ್ ಆಗಿ ಚರಂಡಿ ನೀರು ಕಳೆದ ಐದು–ಆರು ದಿನಗಳಿಂದ ಉಕ್ಕಿ ಹರಿಯುತ್ತಿದ್ದು, ಸುತ್ತಮುತ್ತ ದುರ್ವಾಸನೆ ಬೀರುತ್ತಿದೆ. ಅಲ್ಲದೇ ಈ ರಸ್ತೆಯಲ್ಲಿಯೇ ಕೊಂಚ ದೂರದಲ್ಲಿ ಬಸ್ ತಂಗುದಾಣವಿದ್ದು, ಅಲ್ಲಿ ಬಸ್ಸಿಗಾಗಿ ಕಾಯುವ ಪ್ರಯಾಣಿಕರಿಗೆ ಚಲಿಸುವ ವಾಹನಗಳಿಂದ ಈ ಮಲೀನ ನೀರು ಹಾರುವ ಅಸಹ್ಯಕರ ಪರಿಸ್ಥಿತಿಯಿಂದ ಜನ ಬೇಸತ್ತು ಹೋಗಿದ್ದಾರೆ. ಆದ್ದರಿಂದ ಕೂಡಲೇ ಈ ದುರ್ನಾತ, ಅನೈರ್ಮಲ್ಯತೆ ನಿವಾರಿಸುವ ಕಾರ್ಯಕ್ಕೆ ಮೈಸೂರು ಮಹಾನಗರಪಾಲಿಕೆ ಮುಂದಾಗದಿರುವುದು ನಮ್ಮ ಸ್ಥಳೀಯ ಆಡಳಿತ ಅಧಿಕಾರಿ ವರ್ಗದ ಬೇಜವಬ್ದಾರಿ ವರ್ತನೆಗೆ ಸಾಕ್ಷಿಯಾಗಿದೆ.

–ಯಶಸ್. ಆರ್, ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.

■ ಶೌಚಾಲಯದ ತೆರವು ಭಾಗ್ಯ ಯಾವಾಗ?

ಮಾನ್ಯರೆ,



ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಬೆಸಗರಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಇರುವ ಶೌಚಾಲಯ ಹಲವಾರು ವರ್ಷಗಳು ಸಾರ್ವಜನಿಕರ ಉಪಯೋಗಕ್ಕೆ ಬಂದಿತ್ತು. ಬೆಸಗರಹಳ್ಳಿ ಹಾಗೂ ಸುತ್ತಮುತ್ತಲ 23 ಗ್ರಾಮ ಗಳ ಜನರು ಪ್ರತಿನಿತ್ಯ ತಮ್ಮ ನಾನಾ ವ್ಯವಹಾರಕ್ಕಾಗಿ ಬೆಸಗರಹಳ್ಳಿಗೆ ಬಂದು ಹೋಗುತ್ತಾರೆ. ಅವರಿಗೆ ಉಪಯೋಗವಾಗಲಿ ಎಂಬ ಉದ್ದೇಶದಿಂದ ಲಕ್ಷಾಂತರ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಶೌಚಾಲಯ ಕಳೆದ ಒಂದು ವರ್ಷದಿಂದ ಮುಚ್ಚಿರುವುದರಿಂದ ಸ್ಥಳೀಯರು ಹಾಗೂ ತಮ್ಮ ವ್ಯವಹಾರಕ್ಕೆ ಬರುವ ಹೊರಗಿನವರಿಗೆ ತುಂಬಾ ತೊಂದರೆಯುಂಟಾಗಿದೆ. ಶೌಚಾಲಯದ ಹತ್ತಿರದಲ್ಲಿ ಬಸ್ ನಿಲ್ದಾಣ, ಮಾರುಕಟ್ಟೆ ಇದ್ದು, ಸದಾ ಜನಜಂಗುಳಿಯ ಪ್ರದೇಶವಾಗಿದೆ. ಸ್ಥಳೀಯರು ಶೌಚಾಲಯಕ್ಕೆ ಹೋಗಲು ಬಯಲು ಪ್ರದೇಶವನ್ನು ಆಶ್ರಯಿಸಬೇಕಾಗಿದೆ. ಹಲವಾರು ಬಾರಿ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಇನ್ನಾದರೂ ಎಚ್ಚೆತ್ತುಕೊಂಡು ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಶೌಚಾಲಯವನ್ನು ತೆರೆದು ಬಳಕೆಗೆ ಅನುಕೂಲ ಕಲ್ಪಿಸುವುದು ಸೂಕ್ತ.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ನಾಗರಿಕರೆಂದ ಮೇಲೆ ನಾಗರಿಕ ಪ್ರಜ್ಞೆ ಇರಬೇಕಲ್ವಾ...

ಜೂನ್ 23, ವಿಶ್ವಸಂಸ್ಥೆ ಪ್ರಕಾರ ನಾಗರಿಕ ಸೇವಾ ದಿನ. ಭಾರತದಲ್ಲಿ ನಾವು ಏಪ್ರಿಲ್ 21ಕ್ಕೆ ನಾಗರಿಕ ಸೇವಾ ದಿನವನ್ನು ಆಚರಿಸುತ್ತೇವೆ. 1947ರಲ್ಲಿ ಅಂದಿನ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನಾಗರಿಕ ಸೇವಾ ಪರೀಕ್ಷೆಗಳಲ್ಲಿ ತೇರ್ಗಡೆಯಾದವರನ್ನು ಕುರಿತು ಭಾಷಣ ಮಾಡಿದ್ದರು. ದೇಶದ ಉನ್ನತಿಗಾಗಿ ಅವರು ಮಾಡಬೇಕಾದ ಕರ್ತವ್ಯದ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದರು.

ನನಗನ್ನಿಸುತ್ತದೆ, ನಾಗರಿಕ ಪ್ರಜ್ಞೆ ದಿನಾಚರಣೆ ಎಂದು ಕೂಡ ಒಂದು ದಿನ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ದಿನಾಚರಣೆಗಳ ನೆಪದಲ್ಲಿ ನಾವು ವರ್ಷದಲ್ಲಿ ಒಂದು ದಿನ ಜೀವಮಾನವಿಡೀ (ಸ್ವ ಇಚ್ಛೆಯಿಂದ) ಮಾಡಿರದೇ ಇದ್ದದ್ದನ್ನು ಮಾಡುತ್ತೇವೆ. ಅದೂ ಶ್ರದ್ಧಾ ಭಕ್ತಿಯಿಂದ! ಆ ದಿನ ನಾವು ಮರೆತಿರುವ ಕರ್ತವ್ಯ, ವ್ಯಕ್ತಿ, ಆಚಾರ–ವಿಚಾರ, ತತ್ವ, ನಡವಳಿಕೆ, ಆದರ್ಶಗಳ ನೆನಪಾಗುತ್ತದೆ. ಒಂದು ದಿನ ಆಚರಿಸಿದ ಹಾಗೆ ಮಾಡಿ ವರ್ಷದ ಉಳಿದ ದಿನಗಳನ್ನು ಅದರ ನೆನಪಲ್ಲಿಯೇ ಕಳೆಯುತ್ತಾ ಒಂದಷ್ಟು ಪಶ್ಚಾತ್ತಾಪ–ಅಪರಾಧೀ ಮನೋಭಾವವನ್ನು ಹೊಂದಿ ಒಂದು ಚೂರು ವಿನಮ್ರರಾಗಿರುತ್ತೇವೆ. ವನಮಹೋತ್ಸವ, ಪರಿಸರ ದಿನಾಚರಣೆ, ಅಮ್ಮ–ಅಪ್ಪಂದಿರ ದಿನಗಳ ನೆನಪಾಯ್ತೇ? ನೆನಪಾಗಿದ್ದರೆ ನಾನು ಹೇಳುತ್ತಿರುವುದು ನಿಮಗೆ ಅರ್ಥವಾಗುತ್ತಿದೆ ಎಂದರ್ಥ!

ಹೌದು, ಭಾರತೀಯರಿಗೆ ನಾಗರಿಕ ಪ್ರಜ್ಞಾ ದಿನಾಚರಣೆ ಎಂಬ ದಿನವೊಂದಿರಬೇಕಿತ್ತು. ಎಷ್ಟೋ ದಿನಾಚರಣೆಗಳಿವೆ, ಅದರ ಮಧ್ಯೆ ಇದೂ ಒಂದು! ಆಗ ನಮಗೆ, ವರ್ಷದ ಉಳಿದ ದಿನಗಳಲ್ಲಿ ನಮಗೆ ನಾಗರಿಕ ಪ್ರಜ್ಞೆ ಇಲ್ಲ ಎಂಬ ಸತ್ಯ ಅರಿವಾಗಿ ಅದೇನೆಂದು ತಿಳಿಯಲು ಸ್ವಲ್ಪವಾದರೂ ಪ್ರಯತ್ನಪಡುತ್ತಿದ್ದೇವೇನೋ!

ಅಲ್ಲವೇ ಮತ್ತೆ ಆರ್‌ಸಿಬಿ ವಿಜಯೋತ್ಸವದ ದಿನ ಆದ ಅನಾಹುತ ನೋಡಿದ ಮೇಲೆ ನನಗಂತೂ ಖಂಡಿತವಾಗಿ ಹಾಗೆಯೇ ಎನ್ನಿಸಿತು. ನಿಜಾರ್ಥದಲ್ಲಿ ತುಂಬಲಾರದ ನಷ್ಟ ಉಂಟು ಮಾಡಿದ ಸಮಾರಂಭದ ದುರಂತಕ್ಕೆ ಸರ್ಕಾರ, ಪೊಲೀಸರು, ಆರ್‌ಸಿಬಿ ಪದಾಧಿಕಾರಿಗಳು ಅಥವಾ ಈವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ಕಾರಣ ಎಂದು ಕೆಸರೆರಚಾಟ ನಡದೇ ಇದೆ. ಅದು ಒತ್ತಟ್ಟಿಗಿರಲಿ. ಆದರೆ ದುರಂತಕ್ಕೆ ಅವರನ್ನು ಕಾರಣ ಮಾಡಿ ಗೂಬೆ ಕೂರಿಸಿ ಕೈತೊಳೆದುಕೊಂಡು ಬಿಟ್ಟರೆ ಮುಗಿಯಿತೇ! ಕಾರ್ಯಕ್ರಮ ನಡೆಸುವವರಿಗೆ ಅಂದಾಜಿರಬೇಕಿತ್ತು ಎಂದು ಎಲ್ಲ ತಿಳಿದವರಂತೆ ವಾದಿಸುವ ನಮಗೂ ಅಂದಾಜಿರಬೇಕಿತ್ತಲ್ಲವೇ

ಗೆಲುವು ನಮ್ಮದಾದ ತಕ್ಷಣವೇ ಮುಗಿಲು ಮುಟ್ಟಿದ ಸಂಭ್ರಮಾಚರಣೆ, ಜನ ಮತ್ತು ವಾಹನ ದಟ್ಟಣೆಗಳ ಬಗ್ಗೆ ಟಿವಿ, ಸಾಮಾಜಿಕ ಜಾಲತಾಣಗಳು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದ ಜನರ ಜವಾಬ್ದಾರಿ ಏನೇನೂ ಇರಲಿಲ್ಲವಾ?

ಸಮರ್ಪಣಾಭಾವದಿಂದ ದೇಶದ ನಾಗರಿಕರ ಒಳಿತಿಗಾಗಿ ಕೆಲಸ ಮಾಡುತ್ತೇವೆ ಎಂದು ಪ್ರಮಾಣ ಮಾಡಿದ ಅಧಿಕಾರಿಗಳನ್ನು ಬಾಧ್ಯಸ್ಥರನ್ನಾಗಿ ಮಾಡಿ ಜನ ಹುಚ್ಚಾಟ ಮಾಡಿದರೆ, ಮೈಮೇಲೆ ಪ್ರಜ್ಞೆ ಇಲ್ಲದವರ ಹಾಗೆ, ಮತ್ತೇರಿದ ಹಾಗೆ ವಿವೇಚನೆ ಕಳೆದುಕೊಂಡು ರಂಪಾಟ ಮಾಡಿದರೆ ಪೊಲೀಸರೇನು ಗುಂಡು ಹಾರಿಸಿ ಅವರೆಲ್ಲರನ್ನೂ ತಹಬದಿಗೆ ತರಬೇಕಿತ್ತೇ? ನಾಗರಿಕರೆನಿಸಿಕೊಂಡ ಅಭಿಮಾನಿಗಳ ಪಾತ್ರ ಶೂನ್ಯವೇ?

ಏನು ಮಾಡಬೇಕಿತ್ತು? ಎಂದು ಕೇಳಿದರೆ, ನಾಗರಿಕ ಪ್ರಜ್ಞೆ ಮೆರೆಯಬೇಕಿತ್ತು, ನಾಗರಿಕರಂತೆ ಸಂಯಮದಿಂದ ಇರಬೇಕಿತ್ತು ಎಂಬುದಷ್ಟೇ ಉತ್ತರ.

ನಾಗರಿಕ ಪ್ರಜ್ಞೆ ಎಂದರೆ ಏನು? ಅಷ್ಟಕ್ಕೂ ನಾಗರಿಕ ಪ್ರಜ್ಞೆ ಎಂದರೆ, ನಾವು ಸಮಾಜದಲ್ಲಿ ಹೇಗೆ ಇರಬೇಕೆಂದು ನಿರ್ಧರಿಸಿ, ನಡೆಯುವುದು. ನಮ್ಮಿಂದ ಇನ್ನೊಬ್ಬರಿಗೆ ತೊಂದರೆಯಾಗದಂತೆ, ಸಾರ್ವಜನಿಕವಾಗಿ ಸಂಭಾವಿತರಾಗಿ, ಸಾರ್ವಜನಿಕ ಆಸ್ತಿಗೆ ಹಾನಿ ಮಾಡದಂತೆ, ಪರಿಸರ– ಪ್ರಕೃತಿಗಳ ಅಂದಗೆಡಿಸದೆ ನಿರುಪದ್ರವಿಯಾಗಿ ಬದುಕುವುದು. ಇದು ಸಮಾಜಶಾಸ್ತ್ರದ ಪುಸ್ತಕದಿಂದ ತೆಗೆದುಕೊಂಡ ವ್ಯಾಖ್ಯೆಯಲ್ಲ. ನಾನೂ ನಾಗರಿಕಳು ಎಂದು ಅಂದುಕೊಂಡಿರುವುದರಿಂದ, ನಾನು ಹೇಗೆ, ತೀರಾ ಆದರ್ಶಮಯವಾಗಿಯಲ್ಲದಿದ್ದರೂ, ಯೋಗ್ಯ ರೀತಿ ಬದುಕಬೇಕು ಎಂದು ಹಾಗೆಯೇ ನನ್ನನ್ನು ನಾನು ಕೇಳಿಕೊಂಡಾಗ ದೊರೆತ ಉತ್ತರ. ಬಹುಶಃ ನಮ್ಮೆಲ್ಲರಿಗೂ ಸಾಮಾನ್ಯವಾಗಿ ಇದೇ ಉತ್ತರ ದೊರಕುತ್ತದೆ.

ಸುಮ್ಮನೆ ಹಾಗೆಯೇ ಸುತ್ತಲಿನ ನಮ್ಮ ಪರಿಸರವನ್ನು ಗಮನಿಸಿ ನೋಡಿ, ಆಗ ನಾವು ನಾಗರಿಕರು ಹೌದಾ ಎಂಬ ಮೂಲ ಪ್ರಶ್ನೆ ನಮ್ಮನ್ನು ಕಾಡಲು ತೊಡಗುತ್ತದೆ.

ವಿಜಯೋತ್ಸವದ ವಿಚಾರಕ್ಕೆ ಬಂದರೆ ಆರ್‌ಸಿಬಿ ಗೆದ್ದ ತಕ್ಷಣ ಉತ್ಸಾಹ ಎಲ್ಲೆ ಮೀರಿತು. ಆಗಿನ ಸಮಯದಲ್ಲಿ ಅಪ್ಲೋಡ್ ಆದ ವಿಡಿಯೋ ಮತ್ತು ಫೋಟೋಗಳನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. ಕಿರುಚಾಟ ಕೇಕೆಗಳನ್ನು ಅತ್ಯಾನಂದದ ಲಕ್ಷಣಗಳು ಎಂದು ಕೊಳ್ಳೋಣ. ಆದರೆ ಎಷ್ಟೋ ಜನ ಪೊಲೀಸರು ಸುರಕ್ಷತೆಗೆ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ಎಳೆದುಕೊಂಡು ಊರ ತುಂಬೆಲ್ಲಾ ಓಡಾಡಿದರು, ರಸ್ತೆಯಲ್ಲಿಯೇ ಸಂಭ್ರಮಾಚರಣೆಯ ನೆಪದಲ್ಲಿ ಮದ್ಯಪಾನ ಮಾಡಿ ಕೇಕ್ ಕತ್ತರಿಸಿ ಕಸ ಹರಡಿದರು. ಕೆಲವೆಡೆ ಸಾರ್ವಜನಿಕ ಆಸ್ತಿಗೆ ಹಾನಿಯಾದ ಸುದ್ದಿಯೂ ಬಂತು.

ದುರಂತ ನಡೆದ ದಿನ ಜನ ನೂಕುನುಗ್ಗಲು ನಡೆಸದೆ ಸ್ವಲ್ಪ ಸಂಯಮ ಕಾಯ್ದುಕೊಂಡಿದ್ದರೆ ದುರಂತ ನಡೆಯುತ್ತಲೇ ಇರಲಿಲ್ಲ. ನಂತರ ಮೆಟ್ರೋ ನಿಲ್ದಾಣದಲ್ಲಿ ನಿಯಮ ಉಲ್ಲಂಘಿಸಿದ್ದೂ ಕಂಡುಬಂತು.

ನಾಗರಿಕ ಪ್ರಜ್ಞೆ ಸಾರ್ವಜನಿಕವಾಗಿ ಹೇಗೆ ವರ್ತಿಸಬೇಕೆಂಬ ಅರಿವು ಇದ್ದಿದ್ದರೆ ದುರಂತದ ತೀವ್ರತೆ ಖಂಡಿತವಾಗಿ ಇಷ್ಟೊಂದು ವಿಪರೀತಕ್ಕೆ ಹೋಗುತ್ತಿರಲಿಲ್ಲ ಎಂಬುದನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ.



> ❝ ಭಾರತೀಯರಿಗೆ ನಾಗರಿಕ ಪ್ರಜ್ಞಾ ದಿನಾಚರಣೆ ಎಂಬ ದಿನವೊಂದಿರಬೇಕಿತ್ತು. ಎಷ್ಟೋ ದಿನಾಚರಣೆಗಳಿವೆ, ಅದರ ಮಧ್ಯೆ ಇದೂ ಒಂದು! ಆಗ ನಮಗೆ, ವರ್ಷದ ಉಳಿದ ದಿನಗಳಲ್ಲಿ ನಮಗೆ ನಾಗರಿಕ ಪ್ರಜ್ಞೆ ಇಲ್ಲ ಎಂಬ ಸತ್ಯ ಅರಿವಾಗಿ ಅದೇನೆಂದು ತಿಳಿಯಲು ಸ್ವಲ್ಪವಾದರೂ ಪ್ರಯತ್ನ ಪಡುತ್ತಿದ್ದೇವೇನೋ!

ಹಾಗಾದರೆ ಈ ನಾಗರಿಕ ಪ್ರಜ್ಞೆ ಎಲ್ಲಿ ಸಿಗುತ್ತದೆ, ಎಲ್ಲಿ ಕಲಿಯಬೇಕು, ಯಾರು ಕಲಿಸುತ್ತಾರೆ, ಇದರ ಪಠ್ಯವೇನು, ಎಷ್ಟು ವರ್ಷಗಳ ಕೋರ್ಸ್ ಎಂದೆಲ್ಲಾ ಕೇಳುವ ಹಾಗಿಲ್ಲ. ಜೀವನಪೂರ್ತಿ ಕಲಿಯಬೇಕಾದ ಈ ಪಾಠ ನಾವು ಭೂಮಿಗೆ ಬಂದ ತಕ್ಷಣದಿಂದಲೇ ಶುರುವಾಗುತ್ತದೆ. ನಂತರ ನಾವು ಬೆಳೆಯುತ್ತಾ... ಬೆಳೆಯುತ್ತಾ... ಹಾಗೆ ಸಂದರ್ಭಕ್ಕನುಗುಣವಾಗಿ ಕಲಿಕೆ ವಿಸ್ತಾರವಾಗುತ್ತಾ ಹೋಗುತ್ತದೆ. ಶಾಲೆಗಳಲ್ಲಿ ಇದಕ್ಕೆ ನಿಯಮಿತವಾದ ಪಠ್ಯ ಅಂತ ಇಲ್ಲವಾದರೂ, ಶಿಕ್ಷಕರು ಮಕ್ಕಳಿಗೆ ಸಂದರ್ಭೋಚಿತವಾಗಿ ಖಂಡಿತವಾಗಿ ಹೇಳಿಕೊಡಲೇಬೇಕಾದುದು ಅವರ ಜವಾಬ್ದಾರಿ. ಹಿಂದೆಲ್ಲಾ ನೈತಿಕ ಶಿಕ್ಷಣದ ಅವಧಿ ಇರುತ್ತಿತ್ತು, ಆಗ ಮಕ್ಕಳಿಗೆ ಇಂತಹ ವಿಷಯಗಳ ಕಲಿಕೆಗೆ ಸಹಕಾರಿಯಾಗುವ ಕಥೆಗಳನ್ನು ಹೇಳುತ್ತಿದ್ದರು. ಅದರಿಂದ ಮಕ್ಕಳಲ್ಲಿ ಅಂತಃಪ್ರಜ್ಞೆ ಜಾಗೃತವಾಗಿ ಸರಿ ತಪ್ಪುಗಳ ವಿಶ್ಲೇಷಣೆಯಲ್ಲಿ ತೊಡಗುತ್ತಿದ್ದರು.

ಎಲ್ಲಾ ಸಾಮಾಜಿಕ ಬಾಧ್ಯತೆಗಳನ್ನು ಮರೆತು ರೇಸ್‌ನಲ್ಲಿ ಭಾಗವಹಿಸಲು ಮಕ್ಕಳನ್ನು ತಯಾರು ಮಾಡುತ್ತಿರುವ ಇಂದಿನ ಶಿಕ್ಷಣ ಪದ್ಧತಿಯಲ್ಲಿ ನೈತಿಕ ಶಿಕ್ಷಣಕ್ಕೆ ಸಮಯವಿಲ್ಲ. ಕತೆ ಕೇಳಿ ಮಕ್ಕಳು ಬದಲಾಗುತ್ತಾರೆಯೇ ಎಂಬ ಉಪೇಕ್ಷೆಯ ಧೋರಣೆ ಬೆಳೆಸಿಕೊಂಡವರಿಗೆ, ಪಂಚತಂತ್ರದ ಕಥೆಗಳ ಮೂಲಕ ಜೀವನಪಾಠವನ್ನೇ ಕಲಿತ ರಾಜಕುಮಾರರ ಕಥೆ ನೆನಪಿಸಬೇಕಾಗಿದೆ.

ಇದರ ಜೊತೆಗೆ ನಮ್ಮಲ್ಲಿ ಅತಿಯಾಗಿ ಬೆಳೆದಿರುವ ಸ್ವಾರ್ಥ, ಸ್ವಕೇಂದ್ರಿತ ಆಲೋಚನೆಗಳು, ನಾಗರಿಕ ಪ್ರಜ್ಞೆ ಅಥವಾ ಸಹೃದಯೀ ಭಾವನೆಗಳನ್ನು ಬೆಳೆಸಿಕೊಳ್ಳುವುದಕ್ಕೆ ಅಡ್ಡಿಯಾಗುತ್ತಿವೆ ಎಂಬುದೂ ಸತ್ಯ. ನನ್ನೊಬ್ಬನಿಂದ ಏನಾಗುತ್ತದೆ, ನಾನೊಬ್ಬನೇ ಜವಾಬ್ದಾರನೇ, ಅವರನ್ನು ಯಾರೂ ಕೇಳುವುದಿಲ್ಲ ಎಂದೆಲ್ಲಾ ಯೋಚಿಸಿಕೊಂಡು ಸಮಾಜಪರ ನಡುವಳಿಕೆಗಳಿಂದ ತನ್ನನ್ನು ತಾನೇ ಮುಕ್ತಗೊಳಿಸಿಕೊಂಡು ನೆಮ್ಮದಿಯಾಗಿ ಬಿಟ್ಟಿದ್ದೇವೆ, ಸ್ವಾರ್ಥಿಗಳಾಗಿ.

ಬೆಳಗ್ಗೆ ಹಾಸಿಗೆಯಿಂದ ಎದ್ದಾಗಲೇ ನಮ್ಮ ಅನಾರಿಕ ಪ್ರಜ್ಞೆ ಜಾಗೃತವಾಗಿ ಬಿಡುತ್ತದೆ. ಎದ್ದು ಬಚ್ಚಲಮನೆಗೆ ಹೋಗಿ ಮುಖಮಾರ್ಜನೆ ಇತ್ಯಾದಿ ಮಾಡುವಾಗ ಅನಿಯಂತ್ರಿತವಾಗಿ ನೀರನ್ನು ಬಳಸುವುದರಿಂದ ಪ್ರಾರಂಭ! ಹಲ್ಲುಜ್ಜುವಾಗ ನಲ್ಲಿಯಲ್ಲಿ ನೀರು ಹೇರಳವಾಗಿ ಹೋಗುತ್ತಿರಬೇಕು. ಸೋಪು ಹಚ್ಚಿ ತಿಕ್ಕುವಾಗ ಶವರ್ ನಿಲ್ಲಬಾರದು. ಮನೆ ಬಾಗಿಲಿಗೆ ನೀರು ಹಾಕುವ ಗೃಹಿಣಿಯರಿಗೆ ಮನೆಯ ಮುಂದಿನ ಬೀದಿಯನ್ನು ಕೊಡಗಟ್ಟಲೆ ನೀರು ಹಾಕಿ ತೊಳೆಯದಿದ್ದರೆ ಸಮಾಧಾನವಿಲ್ಲ! ಇನ್ನು ಪುರುಷರಿಗೆ ತಮ್ಮ ತಮ್ಮ ಕಾರು, ಬೈಕು, ಸ್ಕೂಟರುಗಳನ್ನು ತೊಳೆಯಲು ಪೈಪಿನಿಂದ ಜಲಧಾರೆ ಅವ್ಯಾಹತವಾಗಿ ಬರುತ್ತಿರಬೇಕು.

ಕಸವಿಂಗಡಣೆಯ ಬಗ್ಗೆ ಎಷ್ಟೊಂದು ತಿಳುವಳಿಕೆ ನೀಡುವ ಕೆಲಸಗಳಾಗುತ್ತಿವೆ. ಹಸಿ ಮತ್ತು ಒಣ ಕಸ ವಿಂಗಡಣೆಗೆ ಚಂದದ ಹಸಿರು ಮತ್ತು ಕೆಂಪು ಬಕೆಟ್ಟುಗಳನ್ನೂ ಕೊಡಲಾಗಿತ್ತು. ಅವುಗಳಲ್ಲಿ ಮನೆಯ ದಿನಸಿ ಪದಾರ್ಥಗಳನ್ನು ತುಂಬಿ, ಕವರುಗಳಲ್ಲಿ ಎಲ್ಲ ಕಸಗಳನ್ನು ತುಂಬಿ, ವಿಂಗಡಿಸದೆಯೇ ನೀಡುವವರ ಸಂಖ್ಯೆ ಹೆಚ್ಚು ಎಂಬುದನ್ನು ಹೇಳಬೇಕೆ? ಪಾಪ ಪೌರಕಾರ್ಮಿಕರು ದಿನವೂ ಬೇರ್ಪಡಿಸಿ ಕೊಡಿ ಎಂದು ಗೋಗರೆದರೂ, ಕಸ ಅಂದ್ಮೇಲೆ ಎಲ್ಲಾ ಒಂದೇ ಎಂದು ಉದ್ಧಟತನದಿಂದ ವಾದಿಸುವವರನ್ನು ನೋಡಿಯೇ ಇರುತ್ತೀರಿ.

ಇನ್ನು ಕವರುಗಳಲ್ಲಿ ಕಟ್ಟಿ ಕಸವನ್ನು ಸಿಕ್ಕಸಿಕ್ಕಲ್ಲಿ ಎಸೆಯುವ ಅತ್ಯಂತ ಶಿಕ್ಷಿತ ಅನಾಗರಿಕರ ಜನಸಂಖ್ಯೆ ಇಂದು ಬೇಕಾಬಿಟ್ಟಿ ಬೆಳೆದಿದೆ. ಕತ್ತಲೆಯಲ್ಲಿ, ಗಾಡಿ–ಕಾರುಗಳಲ್ಲಿ ಹೋಗುವಾಗ ಕಸ ಎಸೆಯುವವರನ್ನು ನೋಡಿದರೆ ನಖಶಿಖಾಂತ ಸಿಟ್ಟು ಬರುತ್ತದೆ. ತಮ್ಮ ಮನೆಯ ಕಸವನ್ನು ಪಕ್ಕದ ಮನೆ ಕಾಂಪೌಡ್‌ಗೆ, ಖಾಲಿ ಸೈಟುಗಳಿಗೆ ಹಾಕೋದರಲ್ಲಿ ಇವರಿಗೆಲ್ಲಾ ಪರಮಾನಂದ. ನದಿಗಳ ಸೇತುವೆ ಮೇಲೆ ಹೋಗುವಾಗ ಇಂತಹವರಿಗೆ ಎಲ್ಲಿಲ್ಲದ ವಿಕೃತಾನಂದ. ಸಮುದ್ರವಂತೂ ಪಾಪ ಬಸವಳಿದು ಹೋಗಿದೆ.

ಹೀಗೆ ಇವರುಗಳು ಎಸೆದ ಕಸಗಳೇ, ಅದರಲ್ಲೂ ಅದರಲ್ಲಿರುವ ಪ್ಲಾಸ್ಟಿಕ್ ಮೋರಿಗಳಲ್ಲಿ ಕಟ್ಟಿಕೊಂಡು, ಮಳೆಗಾಲವೆಂದರೆ ಭಯ ಹುಟ್ಟುವ ಹಾಗಾಗಿರುವುದು.

ನಮ್ಮ ಮೈಸೂರಿನ ರಿಂಗ್ ರಸ್ತೆ, ಹೊಸ ಬಡಾವಣೆಗಳಂತೂ ಹೊಲಸೆದ್ದು ನಾರುತ್ತಿವೆ. ಫುಟ್ ಪಾತುಗಳಿರುವುದೇ ಕಸ ಹಾಕುವುದಕ್ಕೆ ಎಂದು ಭಾವಿಸಿದ್ದಾರೆ. ಸಾರ್ವಜನಿಕ ಸ್ಥಳಗಳನ್ನಂತೂ ಅಧಿಕಾರಯುತವಾಗಿ ಕಸದ ತೊಟ್ಟಿ ಮಾಡುತ್ತಾರೆ, ಶಾಲಾ ಕಾಲೇಜು, ಪ್ರವಾಸಿ ತಾಣಗಳನ್ನಂತೂ ಕೇಳುವುದೇ ಬೇಡ.

ದಸರೆಯ ನಂತರದ ಮೈಸೂರನ್ನು ನೆನಪಿಸಿಕೊಳ್ಳಿ!

ಇದರ ಜೊತೆಗೆ ನಾಯಿ ಸಾಕಿರುವವರ ಅತ್ಯಂತ ಹೇಯ ವರ್ತನೆ. ಇನ್ನೊಬ್ಬರ ಮನೆಯ ಅಂಗಳ ಎಂಬುದನ್ನೂ ನೋಡದೆಯೇ ಗಲೀಜು ಮಾಡಿಸಿ ತಮ್ಮ ಪಾಡಿಗೆ ತಾವು ಸಾಗುತ್ತಾರೆ.

ಮತ್ತೆ ಪಾಲಿಕೆಯನ್ನು ಅಧಿಕಾರಿಗಳನ್ನು ದೂರುವುದು, ನಗರ ಸ್ವಚ್ಛವಾಗಿಲ್ಲ ಎಂದು. ಇವರ ಅಪೇಕ್ಷೆಯಾದರೂ ಏನು? ಎಲ್ಲೆಡೆ ಕಾವಲು ಪಡೆಗಳನ್ನಿಟ್ಟು, ಸಿಸಿ ಕ್ಯಾಮರಾಗಳನ್ನು ಇಡಬೇಕೆಂದೇ...! ಹಾಗಾದರೆ ಇವರನ್ನು ಸಾಮಾಜಿಕ, ಬುದ್ಧಿವಂತ ಪ್ರಾಣಿ ಎಂದೇಕೆ ಕರೆಯಬೇಕು

ಎಲ್ಲೆಂದರಲ್ಲಿ ಉಗುಳುವುದು, ಗುಟ್ಕಾ ತಿಂದು ಪ್ಯಾಕೆಟ್ ಎಸೆಯುವುದು ಮಾತ್ರವಲ್ಲ, ಗೋಡೆ–ನೆಲಗಳನ್ನು ಗಲೀಜು ಮಾಡುವುದು. ನೀವು ಮಹಡಿ ಹತ್ತಿ ಹೋಗಬೇಕಾದ ಕಡೆ ಎಲ್ಲಾ ನೋಡಿರುತ್ತೀರಿ, ಉಗುಳಿನ ಚಿತ್ತಾರವನ್ನು.

ಐತಿಹಾಸಿಕ ಸ್ಥಳಗಳಿಗೆ, ಶಾಲಾ–ಕಾಲೇಜುಗಳಿಗೆ ಹೋಗಿ ನೋಡಿ. ಇವರು ಇತಿಹಾಸ ಸೃಷ್ಟಿಯಲ್ಲಿ ತೊಡಗಿರುತ್ತಾರೆ. ಗೋಡೆ, ಬೆಂಚುಗಳ ಮೇಲೆ ತಮ್ಮ ಹೆಸರುಗಳನ್ನು ಕೆತ್ತಿ ಅಜರಾಮರಾಗಿರುತ್ತಾರೆ. ಕೆಲವರಂತೂ ಪೇಂಟ್ ಅನ್ನು ಜೊತೆಯಲ್ಲಿ ಹಿಡಿದೇ ಹೋಗಿರುತ್ತಾರೆ.

ಇನ್ನು ಟ್ರಾಫಿಕ್‌ನಲ್ಲಿ ಅನಾಗರಿಕ ಪ್ರಾಜ್ಞರ ಸಂಖ್ಯೆ ಇತ್ತೀಚೆಗೆ ಮಿತಿಮೀರುತ್ತಿದೆ. ಸಿಗ್ನಲ್ ಲೈಟ್ ಜಂಪ್ ಮಾಡುವುದು, ಕೆಂಪು ದೀಪ ಇದ್ದಾಗಲೂ ಗಾಡಿ ನಿಲ್ಲಿಸದಿರುವುದು, ಏಕಮುಖ ಸಂಚಾರ ನಿಯಮ ಉಲ್ಲಂಘನೆ, ಎಲ್ಲೆಂದರಲ್ಲಿ ಗಾಡಿ ಪಾರ್ಕ್ ಮಾಡುವುದು (ಸೈಕ್ಲಿಂಗ್ ಲೇನ್‌ನ ದುರ್ಗತಿ ನೆನಪಿಸಿಕೊಳ್ಳಿ), ಸಿಗ್ನಲ್ ದೀಪ ಹಸಿರಾದ ಕಾಲು ಕ್ಷಣದಲ್ಲಿಯೇ ಹಾರ್ನ್ ಮಾಡುವುದು, ಎಡಗಡೆ ಓವರ್ಟೇಕ್ ಮಾಡುವುದು, ಹೆಲ್ಮೆಟ್–ಸೀಟ್ಬೆಲ್ಟ್ ಹಾಕದಿರುವುದು, ಅತಿಯಾದ ವೇಗ ಹೀಗೆ ಸಂಚಾರ ನಿಯಮ ಉಲ್ಲಂಘಿಸುವ ಇವರು ಕೇವಲ ನಿಯಮ ಉಲ್ಲಂಘನೆ ಮಾಡುತ್ತಿಲ್ಲ, ಬೇರೆಯವರ ಪ್ರಾಣಕ್ಕೇ ಸಂಚಕಾರ ತರುತ್ತಿದ್ದಾರೆ.

ಬಸ್ಸು, ರೈಲುಗಳಲ್ಲಿ ಸಂಚರಿಸುವಾಗ ಅಲ್ಲಿಯೂ ಗಲೀಜು ಮಾಡುವುದು ಜನ್ಮಸಿದ್ಧ ಹಕ್ಕು ಎನ್ನುವುದನ್ನು ನಂಬಿದ್ದಾರೆ. ಜೊತೆಗೆ ಈಗ ಹೊಸರೀತಿಯ ನಡವಳಿಕೆ ರೇಜಿಗೆ ಹುಟ್ಟಿಸುತ್ತಿದೆ. ಇಯರ್ ಫೋನ್ ಬಳಸುವ ಅವಕಾಶವಿದ್ದರೂ ಬಳಸದೆಯೇ, ಮೊಬೈಲ್‌ನಲ್ಲಿ ಜೋರಾಗಿ ಹಾಡು ಅಥವಾ ವಿಡಿಯೋಗಳನ್ನು ಹಾಕಿ ಬೇರೆಯವರಿಗೆ ತೊಂದರೆ ನೀಡುವುದು. ಇದನ್ನೇ, ಸಿನಿಮಾ, ನಾಟಕ, ತರಗತಿ, ಪ್ರವಾಸಿತಾಣ, ಉದ್ಯಾನವನಗಳಲ್ಲೂ ಮಾಡುತ್ತಾರೆ. ಇನ್ನು ಚಲಿಸುತ್ತಿರುವ ರೈಲು, ಬಸ್ಸುಗಳಿಗೆ ಕಲ್ಲು ಎಸೆಯುವ ವಿಕೃತರೂ ಇದ್ದಾರೆ.

ಶಾಲಾ–ಕಾಲೇಜುಗಳಲ್ಲಿ ಹೋಗಿ ಒಮ್ಮೆ ನೋಡಿ. ಅಲ್ಲಿ ಟೈಲ್ಸ್‌ಗಳು, ಸ್ವಿಚ್ ಬೋರ್ಡ್‌ಗಳು ಒಡೆದುಹೋಗಿರುತ್ತವೆ. ಫ್ಯಾನ್‌ಗಳ ರೆಕ್ಕೆಗಳು ಬೆಂಡಾಗಿರುತ್ತವೆ. ಡೆಸ್ಕ್‌ಗಳು, ಬೆಂಚುಗಳು ಮುರಿದಿರುತ್ತವೆ. ಶಿಕ್ಷಣ ಪಡೆಯಲು ಹೋಗಿರುವವರು ಇವರೆಲ್ಲ!

ಆಹಾರ ಪೋಲು ಮಾಡುವುದರಲ್ಲಿ ಇಂದು ಎಲ್ಲರದೂ ಎತ್ತಿದ ಕೈ. ಮನೆ, ಹೋಟೆಲು ಮತ್ತು ಮದುವೆ ಇತ್ಯಾದಿ ಸಮಾರಂಭಗಳಲ್ಲಿ ಎಲೆಗಳಲ್ಲಿ ಜನ ಪ್ರತಿಷ್ಠೆಗಾಗಿ ಹಾಕಿಸಿಕೊಂಡೋ, ಕೊಂಡುಕೊಂಡೋ ನಂತರ ಕಸದ ಬುಟ್ಟಿಗೆ ಎಸೆಯುತ್ತಾರೆ. ತಮ್ಮ ಹೊಟ್ಟೆಯ ಅಳತೆ, ರುಚಿಗ್ರಂಥಿಯ ಸ್ವಭಾವದ ಅಂದಾಜು ಇಲ್ಲದವರ ಹಾಗೆ.

ಈಗ ಉಚಿತ ವಿದ್ಯುತ್ ದೊರೆಯುತ್ತದೆಯಾದ್ದರಿಂದ ಮನೆಗಳಲ್ಲಿ ದೀಪಗಳನ್ನು, ಫ್ಯಾನುಗಳನ್ನು ಆರಿಸುವ ಗೋಜಿಗೇ ಹೋಗುವುದಿಲ್ಲ. ಇಂದಿನ ತರಗತಿ ಕೊಠಡಿಗಳಲ್ಲಿ ಫ್ಯಾನ್ ಮತ್ತು ದೀಪಗಳ ಸೌಲಭ್ಯ ನೀಡುತ್ತಿದ್ದಾರೆ. ತರಗತಿ ಮುಗಿದು ಹೊರಗೆ ಹೋಗುವಾಗ, ಅದನ್ನು ಆರಿಸಿ ಹೊರಹೋಗಬೇಕೆಂಬ ಪ್ರಜ್ಞೆ ವಿದ್ಯಾರ್ಥಿಗಳಲ್ಲಿ ಇಲ್ಲ.

ನಾಗರಿಕ ಪ್ರಜ್ಞೆ ಎಂದಾಕ್ಷಣ ಜಪಾನು ಮತ್ತು ಪಾಶ್ಚಮಾತ್ಯ ದೇಶಗಳೆಡೆ ನೋಡುತ್ತಾ ನಾವೂ ಹಾಗೆಯೇ ಆಗಬಹುದು ಎಂಬುದರ ಬಗ್ಗೆ ನಾವು ಯೋಚಿಸುವುದೇ ಇಲ್ಲ. ಇತ್ತೀಚೆಗೆ ವಿದೇಶಕ್ಕೆ ಪ್ರವಾಸ ಹೋದ ನನ್ನ ಸ್ನೇಹಿತೆಯೊಬ್ಬರು, ಹೆಚ್ಚು ಭಾರತೀಯರೇ ಭೇಟಿ ನೀಡುವ ಭಾರತೀಯ ಶೈಲಿಯ ಹೋಟೆಲ್‌ನಲ್ಲಿ ಇದ್ದ ಶೌಚಾಲಯದ ದುರವಸ್ಥೆಯ ಬಗ್ಗೆ ಹೇಳುತ್ತಾ, ನಾವೇಕೆ ಹೀಗೆ... ಎಂದು ಕೇಳಿಕೊಂಡೆ ಎಂದರು. ಅಮೆರಿಕೆಯಲ್ಲಿ ತೆಲುಗು ಚಿತ್ರವೊಂದರ ಪ್ರದರ್ಶನದ ನಂತರ ಚಿತ್ರಮಂದಿರದ ಅವಸ್ಥೆ ವೈರಲ್ ಆಗಿದ್ದನ್ನು ನೀವೂ ನೋಡಿರುತ್ತೀರಿ.


ಶಾಲೆ ಮತ್ತು ಮನೆಗಳಲ್ಲಿ ಶಿಕ್ಷಕರು, ಪೋಷಕರು ಇವನ್ನು ಹೇಳಿ ಕೊಡಲೇಬೇಕು. ನಾಗರಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕಾದ್ದು, ಬೆಳಸಬೇಕಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಮೈಸೂರಿನ ಡಾ.ಮಣಿಕರ್ಣಿಕಾ ಇದರ ಬಗ್ಗೆ ಚೊಕ್ಕಟವಾದ ಪುಸ್ತಕವನ್ನೇ ಬರೆದಿದ್ದಾರೆ. ನಾವು ಮಾಡಿಕೊಳ್ಳುವ ಇಂತಹ ಬದಲಾವಣೆಗಳು ದೇಶದ ಮರ್ಯಾದೆ ಕಾಪಾಡಿ, ನಮ್ಮನ್ನೂ ಗೌರವಾನ್ವಿತರ ಸಾಲಿನಲ್ಲಿ ನಿಲ್ಲಿಸುತ್ತವೆ.

ದೇಶದ ಪ್ರಥಮ ಯೋಗ ಜಿಲ್ಲೆ ಮೈಸೂರು!

ಮೈಸೂರು,ಜೂ.18(ಆರ್‌ಕೆ)–ಮೈಸೂರು ಜಿಲ್ಲೆಯನ್ನು ದೇಶದ ಮೊದಲ 'ಯೋಗ ಜಿಲ್ಲೆ' ಎಂದು ಅಧಿಕೃತವಾಗಿ ಘೋಷಿಸುವ ಸಂಬಂಧ ಕರ್ನಾಟಕ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ಪ್ರಸ್ತಾವ ಮಾನ್ಯವಾದಲ್ಲಿ ಜಿಲ್ಲೆಯ ಪ್ರತಿ ಮನೆಯಲ್ಲಿ ಕನಿಷ್ಠ ಒಬ್ಬ ಸದಸ್ಯ ಯೋಗ ಕಲಿತು ನಿರಂತರವಾಗಿ ಅಭ್ಯಾಸ ಮಾಡುತ್ತಾರೆ ಎಂದು ಆಯುಷ್ (ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸೆ, ಯುನಾನಿ ಸಿದ್ಧ ಮತ್ತು ಹೋಮಿಯೋಪತಿ) ಸಚಿವಾಲಯದ ಅಧಿ ಕಾರಿಗಳು ತಮ್ಮ ಪ್ರಸ್ತಾವನೆಯಲ್ಲಿ ದೃಢಪಡಿಸಿದ್ದಾರೆ.

ಕಳೆದ ವರ್ಷ 2024ರಲ್ಲಿ ಸಮೀಕ್ಷೆಗೆಂದು ಮೈಸೂರಿಗೆ ಬಂದಿದ್ದ ಕೇಂದ್ರದ ಅಧಿಕಾರಿಗಳ ತಂಡ, ಯೋಗ ಜಿಲ್ಲೆ ಮಾನ್ಯ ಮಾಡಲು ಅಗತ್ಯವಾಗಿ ಬೇಕಿರುವ ಮಾನದಂಡಗಳಲ್ಲಿ ಕನಿಷ್ಠ 50 ಪ್ರತಿಶತ ಕುಟುಂಬಗಳು ಯೋಗವನ್ನು ಸಕ್ರಿಯವಾಗಿ ಅಭ್ಯಾಸ ಮಾಡುತ್ತಿದ್ದು, ಯೋಗಕ್ಕೆ ಮೈಸೂರಲ್ಲಿ ಪೂರಕ ವಾತಾವರಣವಿದೆ ಎಂಬುದನ್ನು ಖಚಿತಪಡಿಸಿಕೊಂಡಿದ್ದರು.

ಇದರ ಭಾಗವಾಗಿ ಈ ವರ್ಷ ಜೂನ್ 21ರಂದು ಮೈಸೂರು ಅರಮನೆ ಆವರಣದಲ್ಲಿ 'ಯೋಗ ಮಹಾಕುಂಭ' ಹೆಸರಿನಲ್ಲಿ ಬೃಹತ್ ಯೋಗ ಪ್ರದರ್ಶನ ನಡೆಯಲಿದ್ದು, ಸುಮಾರು 15,000 ಮಂದಿ ಭಾಗವಹಿಸುವ ನಿರೀಕ್ಷೆ ಇದೆ.



2022ರಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದನ್ನು, ಇಲ್ಲಿ ಸ್ಮರಿಸಬಹುದಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ, ಮೈಸೂರಲ್ಲಿ 'ಯೋಗ ವಿಶ್ವವಿದ್ಯಾನಿಲಯ' ಸ್ಥಾಪನೆ ಮತ್ತು 'ಯೋಗ ಜಿಲ್ಲೆ' ಟ್ಯಾಗ್ ಪಡೆಯಲು 2017ರಲ್ಲೇ ಪ್ರಸ್ತಾವನೆ ಸಲ್ಲಿಸ ಲಾಗಿತ್ತು. ಇದೀಗ ಪ್ರಕ್ರಿಯೆಗೆ ಮರು ಚಾಲನೆ ನೀಡಲಾಗಿದೆ ಎಂದರು. ಕಳೆದ ವರ್ಷ ಆಯುಷ್ ಸಚಿವಾಲಯದ ಅಧಿಕಾರಿಗಳು ಭೇಟಿ ನೀಡಿದ ನಂತರ ಈ ಯೋಜನೆಗೆ ವೇಗ ಪಡೆದುಕೊಂಡಿದ್ದು, ಅತೀ ಶೀಘ್ರ ಅನುಮೋ ದನೆ ನಿರೀಕ್ಷಿಸಲಾಗಿದೆ. ಪ್ರತೀ ವರ್ಷ ವಿದೇಶಿಗರೂ ಸೇರಿ 25,000 ಮಂದಿ ಯೋಗ ಕಲಿಯಲೆಂದು ಮೈಸೂರಿಗೆ ಭೇಟಿ ನೀಡುತ್ತಿರುವುದರಿಂದ ಯೋಗ ವಿಶ್ವವಿದ್ಯಾನಿಲಯ ಸ್ಥಾಪಿಸಿ ವಿವಿಧ ಕೋರ್ಸ್‌ಗಳ ತೆರೆದು ಸೂಕ್ತ ತರಬೇತಿ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಗಳಲ್ಲಿರುವ 22 ಆಯುಷ್ಮಾನ್ ಆರೋಗ್ಯ ಮಂದಿರ (ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು)ಗಳಲ್ಲಿ ಬೋಧಕರು ಯೋಗ ಚಿಕಿತ್ಸೆ ಮೂಲಕ ಹಲವು ಖಾಯಿಲೆಗಳನ್ನು ಗುಣಪಡಿಸುತ್ತಿದ್ದಾರೆ. ಮೈಸೂರನ್ನು 'ಯೋಗ ಜಿಲ್ಲೆ' ಎಂದು ಮಾನ್ಯ ಮಾಡಿದಲ್ಲಿ ಅಗತ್ಯ ಮೂಲ ಸೌಲಭ್ಯ ಪಡೆದುಕೊಂಡು ಪೂರ್ಣ ಪ್ರಮಾಣದ ಚಿಕಿತ್ಸಾ ಸೌಲಭ್ಯವನ್ನು ನಾಗರಿಕರಿಗೆ ನೀಡಬಹುದಾಗಿದೆ ಎಂದು ಡಾ.ರೇಣುಕಾದೇವಿ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಗೆ ನಾಮಪತ್ರ ಸಲ್ಲಿಕೆ ಅಂತ್ಯ

ಕಡೇ ದಿನ 28 ಮಂದಿ ಉಮೇದುವಾರಿಕೆ ಸಲ್ಲಿಕೆ ; ಇಂದು ಪರಿಶೀಲನೆ



• ಒಟ್ಟಾರೆ 48 ನಾಮಪತ್ರ ಸಲ್ಲಿಕೆ • ಹಾಲಿ, ಮಾಜಿ ಶಾಸಕರು, ಹೊಸಬರು ಕಣಕ್ಕೆ

ಮೈಸೂರು, ಜೂ.18(ಜಿಎ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಜಿದ್ದಾಜಿದ್ದಿ ಆರಂಭವಾಗಿದ್ದು, ನಾಮಪತ್ರ ಸಲ್ಲಿಕೆಯ ಕಡೇ ದಿನವಾದ ಇಂದು 28 ಮಂದಿ ನಾಮಪತ್ರ ಸಲ್ಲಿಸಿದರು.





ಮೈಸೂರಿನ ಜಿಲ್ಲಾ ಕಚೇರಿಗಳ ಸಮುಚ್ಚಯದಲ್ಲಿರುವ ಉಪ ವಿಭಾಗಾಧಿಕಾರಿಗಳೂ ಆದ ಚುನಾವಣಾಧಿಕಾರಿ ಆಶಪ್ಪ ಅವರಲ್ಲಿ ಬುಧವಾರ ಶಾಸಕರಾದ ಜಿ.ಡಿ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ಹೆಚ್.ವಿ. ರಾಜೀವ್, (ಕೆಳಚಿತ್ರದಲ್ಲಿ) ಸಿ. ಬಸವೇಗೌಡ, ದೊಡ್ಡಸ್ವಾಮೀಗೌಡ ತಮ್ಮ ನಾಮಪತ್ರ ಸಲ್ಲಿಸಿದರು.

ಜೂ.26ಕ್ಕೆ ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಬುಧವಾರ ಘಟಾನುಘಟಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಕಳೆದ ಎರಡು ದಿನ ಹಲವರು ನಾಮಪತ್ರ ಸಲ್ಲಿಸಿದರು. ಆದರೆ, ಇಂದು ಅತೀ ಹೆಚ್ಚು, 28 ನಾಮಪತ್ರ ಸಲ್ಲಿಕೆಯಾಗಿವೆ. ಒಟ್ಟಾರೆ 48 ನಾಮಪತ್ರ ಸಲ್ಲಿಕೆಯಾಗಿದ್ದು, ನಾಳೆ ನಾಮಪತ್ರಗಳ ಪರಿಶೀಲನೆ ಪ್ರಕ್ರಿಯೆ ನಡೆಯಲಿದೆ.

ಯಾವುದೇ ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಕಡಿಮೆ ಇಲ್ಲದಂತೆ ಸಹಕಾರ ಕ್ಷೇತ್ರದ ಚುನಾವಣೆಯಲ್ಲಿ ಪೈಪೋಟಿ, ಜಿದ್ದಾಜಿದ್ದಿ ನಡೆದಿದೆ. ಈ ಮೂಲಕ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಹಾಲಿ, ಮಾಜಿ ಶಾಸಕರು, ಸಹಕಾರಿ ಧುರೀಣರು ಸೇರಿದಂತೆ ಹೊಸ ಮುಖಗಳು ಈ ಬಾರಿಯ ಚುನಾವಣಾ ಕಣದಲ್ಲಿ ಕಾಣಿಸಿಕೊಂಡಿದ್ದಾರೆ. ಮೈಸೂರಿನ ಜಿಲ್ಲಾ ಕಚೇರಿಗಳ ಸಮುಚ್ಚಯದಲ್ಲಿರುವ ಉಪ ವಿಭಾಗಾಧಿಕಾರಿಗಳ ಕೊಠಡಿಯಲ್ಲಿ ಹಾಲಿ, ಮಾಜಿ ಶಾಸಕರು, ಮಾಜಿ ನಿರ್ದೇಶಕರು, ಹಲವು ಹೊಸಬರು ಚುನಾವಣಾಧಿಕಾರಿ ಹಾಗೂ ಉಪ ವಿಭಾಗಾಧಿಕಾರಿಯೂ ಆದ ಆಶಪ್ಪ ಅವರಲ್ಲಿ ತಮ್ಮ ನಾಮಪತ್ರ ಸಲ್ಲಿಸಿ, ಸಹಕಾರ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಕ್ಷೇತ್ರದಿಂದ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಅಧ್ಯಕ್ಷರೂ ಆದ ಶಾಸಕ ಅನಿಲ್ ಚಿಕ್ಕಮಾದು ತಮ್ಮ ಬೆಂಬಲಿಗರಾದ ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಜಿಪಂ ಮಾಜಿ ಸದಸ್ಯ ರವಿ, ಜೀನಳ್ಳಿ ರಾಜು,ಕ್ಯಾತನಹಳ್ಳಿ ನಾಗರಾಜು, ಸತೀಶ್ ಗೌಡ, ಮಹದೇವಪ್ಪ, ಪಾಷ ಜೊತೆ ಬಂದು ನಾಮಪತ್ರ ಸಲ್ಲಿಸಿದರು.

ಹುಣಸೂರು ತಾಲೂಕು ಕ್ಷೇತ್ರದಿಂದ ಅಪೆಕ್ಸ್ ಬ್ಯಾಂಕ್ ಮಾಜಿ ಉಪಾಧ್ಯಕ್ಷರೂ ಆದ ಶಾಸಕ ಜಿ.ಡಿ.ಹರೀಶ್‌ಗೌಡ, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್ ಮತ್ತಿತರರೊಂದಿಗೆ ನಾಮಪತ್ರ ಸಲ್ಲಿಸಿದರು. ನಂಜನಗೂಡು ತಾಲೂಕು ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಬಿ.ಎನ್.ಸದಾನಂದ ಡೆಲಿಗೇಟ್ಸ್‌ಗಳ ಜತೆಗೆ ಆಗಮಿಸಿ ನಾಮಪತ್ರ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಚಿನ್ನಂಬಳ್ಳಿ ಕೆ.ರಾಜು ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕರ್ನಾಟಕ ಮಹರ್ಷಿ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಂಜನಗೂಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ಕುರುಹಟ್ಟಿ ಮಹೇಶ್ ಮತ್ತಿತರರ ಜೊತೆಗೂಡಿ ನಾಮಪತ್ರ ಸಲ್ಲಿಸಿದರು.




> ತಾಲೂಕಿನ ಜನತೆಯ ಆಶೀರ್ವಾದದಿಂದ ಎರಡನೇ ಬಾರಿ ಶಾಸಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈಗ ಸಹಕಾರ ಕ್ಷೇತ್ರಕ್ಕೂ ಕಾಲಿಟ್ಟಿದ್ದು, ಪಕ್ಷಾತೀತವಾಗಿ ಮತದಾರರು ಸಹಕಾರ ನೀಡುತ್ತಿದ್ದಾರೆ. ನಮ್ಮ ತಾಲೂಕಿನಲ್ಲಿ ಯಾವುದೇ ಕೈಗಾರಿಕೆಗಳಿಲ್ಲ ಎಲ್ಲರೂ ಕೃಷಿ ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮೊದಲ ಬಾರಿ ಸಹಕಾರ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು, ಅವರ ಪರ ಕೆಲಸ ಮಾಡಲು ನಿರ್ಧರಿಸಿದ್ದೇನೆ. ಪ್ರತಿನಿಧಿಗಳು ಸಹ ಸಾಥ್ ನೀಡಿದ್ದಾರೆ. ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಎಲ್ಲಾ ಶಾಸಕರು ಬೆಂಬಲ ಸೂಚಿಸಿದ್ದಾರೆ. ಶಾಸಕರಾಗಿ ಅನುದಾನ ನೀಡಬಹುದು. ಆದರೆ ಸಹಕಾರ ಕ್ಷೇತ್ರದ ಮೂಲಕ ರೈತರಿಗೆ ಸಾಲ–ಸೌಲಭ್ಯ ನೀಡಲು, ಉದ್ಯೋಗ ಸೃಷ್ಟಿಸಬಹುದಾಗಿದೆ.
> -ಅನಿಲ್ ಚಿಕ್ಕಮಾದು, ಹೆಚ್.ಡಿ.ಕೋಟೆ ಶಾಸಕ

ತಿ.ನರಸೀಪುರ ತಾಲೂಕು ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಮಾಜಿ ಶಾಸಕರಾದ ಸುನೀತಾ ವೀರಪ್ಪಗೌಡ ಅವರು ವೈ.ಎನ್. ಶಂಕರೇಗೌಡ ಮತ್ತಿತರರೊಂದಿಗೆ ಆಗಮಿಸಿ ತಮ್ಮ ನಾಮಪತ್ರ ಸಲ್ಲಿಸಿದರೆ, ಜಾ.ದಳ ಬೆಂಬಲಿತ ಅಭ್ಯರ್ಥಿಯಾಗಿ ಟಿ.ಪಿ.ಬೋರೇಗೌಡ ಮುಖಂಡರಾದ ಸುಬ್ರಹ್ಮಣ್ಯ, ಮಲ್ಲಣ್ಣ, ಚಂದ್ರಶೇಖರ್, ಫಣೀಶ್ ಕುಮಾರ್ ಅವರೊಂದಿಗೆ ತಮ್ಮ ನಾಮಪತ್ರ ಸಲ್ಲಿಸಿದರು.

ಮತ್ತೊಬ್ಬ ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ತಮ್ಮ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದ್ದು,

> ಅನೇಕ ವರ್ಷಗಳಿಂದ ಡಿಸಿಸಿ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸಿದ್ದೇನೆ. ಬ್ಯಾಂಕ್‌ನ ಅಧ್ಯಕ್ಷನಾಗಿದ್ದಾಗ ಅತೀ ಹೆಚ್ಚು ರೈತರಿಗೆ ಸಾಲ ನೀಡಿದ್ದೇವೆ. ಯಾವುದೇ ತಂತ್ರಗಾರಿಕೆ ಮಾಡಿಲ್ಲ. ಇದು ತಂತ್ರಗಾರಿಕೆ ಮಾಡುವ ಚುನಾವಣೆಯೂ ಅಲ್ಲ. ಇಲ್ಲಿ ಎಲ್ಲರೂ ಒಂದೇ ಜಾತಿ. ಈ ಬಾರಿಯೂ ಸಹಕಾರಿಗಳು ಬೆಂಬಲ ನೀಡುತ್ತಾರೆ ಎಂಬ ವಿಶ್ವಾಸ ಇದೆ. ಸಹಕಾರ ಕ್ಷೇತ್ರದಲ್ಲಿ ಯಾರದೇ ಹಿಡಿತವಿಲ್ಲ. ನಾವು ಸಹಕಾರಿಗಳ, ರೈತರ ಪರವಾಗಿ ಕೆಲಸ ಮಾಡಿದ್ದೇವೆಯೇ ಹೊರತು, ನಮ್ಮ ಯಾವುದೇ ಹಿಡಿತವಿಲ್ಲ. 2018ರಲ್ಲಿ ನಾನು ನಿರ್ದೇಶಕನಾಗಿದ್ದಾಗ ಬ್ಯಾಂಕಿನಲ್ಲಿ ಭಾರಿ ಅಕ್ರಮವಾಗಿತ್ತು. ಅದರ ವಿರುದ್ಧ ಹೋರಾಟ ಮಾಡಿದ್ದೇನೆ. ನಾನು ಅಕ್ರಮ ಮಾಡಿದ್ದರೆ, ಸರ್ಕಾರ ನಿಮ್ಮದೇ, ಸಿಬಿಐ, ನ್ಯಾಯಾಂಗ ಸೇರಿದಂತೆ ಯಾವುದೇ ಇಲಾಖೆಯಿಂದ ತನಿಖೆ ಮಾಡಿಸಿ ನಾನು ಅದಕ್ಕೆ ತಲೆಬಾಗುತ್ತೇನೆ. ನನಗೆ ಹಿನ್ನಡೆ ಉಂಟುಮಾಡುವ ಉದ್ದೇಶದಿಂದ ಒಂದೂವರೆ ವರ್ಷದಿಂದ ಚುನಾವಣೆ ಮಾಡಲಿಲ್ಲ. ಸಹಕಾರಿ ಕ್ಷೇತ್ರಕ್ಕೆ ಯಾವುದೇ ಅನುದಾನವಿಲ್ಲ. ಇದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು.
> -ಜಿ.ಡಿ.ಹರೀಶ್ ಗೌಡ, ಶಾಸಕರು ಹಾಗೂ ಅಪೆಕ್ಸ್ ಬ್ಯಾಂಕ್ ಮಾಜಿ ಉಪಾಧ್ಯಕ್ಷ

ಕೆಆರ್.ನಗರ ತಾಲೂಕು ಕ್ಷೇತ್ರದಿಂದ ಅಮಿತ್ ವಿ.ದೇವರಹಟ್ಟಿ, ಶಾಸಕ ಜಿ.ಡಿ.ಹರೀಶ್ ಗೌಡ, ಮೈಮುಲ್ ಮಾಜಿ ನಿರ್ದೇಶಕ ಎ.ಟಿ.ಸೋಮಶೇಖರ್ ಅವರೊಂದಿಗೆ ಬಂದು ನಾಮಪತ್ರ ಸಲ್ಲಿಸಿದರೆ, ಶಾಸಕ ಡಿ.ರವಿಶಂಕರ್ ಅವರ ತಂದೆ ದೊಡ್ಡಸ್ವಾಮೇಗೌಡ ಅವರು ಡೆಲಿಗೇಟ್ಸ್‌ಗಳೊಂದಿಗೆ ಆಗಮಿಸಿ ನಾಮಪತ್ರವನ್ನು ಸಲ್ಲಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರು ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಹಕಾರ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು. ಅವರಿಗೆ ಡಾ.ಎಂ.ಬಿ. ಮಂಜೇಗೌಡ, ಶ್ರೀನಿವಾಸ್, ಮಹದೇವ ಸ್ವಾಮಿ, ಪಂಚಾಕ್ಷರಿ, ವಿಜಯ್, ನಾಗರಾಜು, ಚಿಕ್ಕೇಗೌಡ ಅವರು ಸಾಥ್ ನೀಡಿದರು. ಮೊನ್ನೆಯಷ್ಟೇ ಒಂದು ನಾಮಪತ್ರ ಸಲ್ಲಿಸಿದ್ದ ಜಿ.ಎನ್.ಮಂಜುನಾಥ್ ಇಂದು ಮತ್ತೊಂದು ಸೆಟ್ ನಾಮಪತ್ರ ಸಲ್ಲಿಸಿದರು.

ಸಾರ್ವಜನಿಕರಲ್ಲಿ ಸುರಕ್ಷೆ ಸಂದೇಶ; ಪೊಲೀಸರಿಂದ ಲಾಠಿ ಡ್ರಿಲ್



ಮೈಸೂರು ನಗರ ಪೊಲೀಸರಿಂದ ಗಾಂಧಿ ವೃತ್ತದಲ್ಲಿ ಲಾಠಿ ಡ್ರಿಲ್ ನಡೆಸಲಾಯಿತು.

ಮೈಸೂರು, ಜೂ.18(ಎಂಕೆ)– ನಗರದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ಜೊತೆಗೆ ಸಾರ್ವಜನಿಕರಲ್ಲಿ ಧೈರ್ಯ ತುಂಬುವ ದೃಷ್ಟಿಯಿಂದ ಮೈಸೂರು ನಗರ ಪೊಲೀಸ್ ವತಿಯಿಂದ ಬುಧವಾರ ಲಾಠಿ ಡ್ರಿಲ್ ನಡೆಸಲಾಯಿತು.

ಡಿಸಿಪಿ(ಅಪರಾಧ ಮತ್ತು ಸಂಚಾರ) ಸುಂದರ್ ರಾಜ್ ನೇತೃತ್ವದಲ್ಲಿ ಗಾಂಧಿ ವೃತ್ತ ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಯರಗನಹಳ್ಳಿ ವೃತ್ತದಲ್ಲಿ ಲಾಠಿ ಡ್ರಿಲ್ ನಡೆಸಲಾಯಿತು. ನೂರಾರು ಸಂಖ್ಯೆಯ ಚಾಮುಂಡಿ ಕಮಾಂಡೋ ಹಾಗೂ ಸಿಎಆರ್ ಸಿಬ್ಬಂದಿ ಲಾಠಿ ಬೀಸಿ ನಿಮ್ಮ ರಕ್ಷಣೆಗೆ ನಾವಿದ್ದೇವೆ ಎಂದು ಸಾರ್ವಜನಿಕರಲ್ಲಿ ಸಂದೇಶ ನೀಡಿದರು. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಡಿಸಿಪಿ ಸುಂದರ್‌ರಾಜ್, ಮೈಸೂರು ನಗರದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಈ ಲಾಠಿ ಡ್ರಿಲ್ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಲ್ಲಿರುವ ಭಯವನ್ನು ಹೋಗಲಾಡಿಸುವ ದೃಷ್ಟಿಯಿಂದ ಡ್ರಿಲ್ ನಡೆಸಲಾಗುತ್ತಿದೆ. ಜನಸ್ನೇಹಿ ಪೊಲೀಸ್ ವ್ಯವಸ್ಥೆ ಸದಾ ಜನರೊಂದಿಗೆ ಇರಲಿದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ತಿಳಿಸಿದರು.

ಧಾರ್ಮಿಕ ಕಾರ್ಯಗಳಲ್ಲಿ ಗೊಂದಲ ನಿವಾರಿಸಲು ಸೂಚನೆ

ಮೈಸೂರು, ಜೂ.18(ಎಂಕೆ)– ಧಾರ್ಮಿಕ ದತ್ತಿ ಇಲಾಖೆಯ ದೇವಾಲಯಗಳಲ್ಲಿ ನಡೆಯುವ ರಥೋತ್ಸವ, ಜಾತ್ರೆ, ಹಬ್ಬ–ಹರಿದಿನಗಳಲ್ಲಿ ಸಂದರ್ಭಾನುಸಾರ ಸೇವಾ ಕೈಂಕರ್ಯ ನಡೆಸಲು ಕ್ರಮವಹಿಸುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಧಾರ್ಮಿಕ ದತ್ತಿ ಇಲಾಖೆ ಆಯುಕ್ತರಿಗೆ ಪತ್ರ ಮುಖೇನ ಸೂಚನೆ ನೀಡಿದ್ದಾರೆ.

ಧಾರ್ಮಿಕ ದತ್ತಿ ಇಲಾಖೆಯ ದೇವಾಲಯಗಳಲ್ಲಿ ನಡೆಯುವ ರಥೋತ್ಸವ, ಜಾತ್ರೆ, ಹಬ್ಬ–ಹರಿದಿನಗಳ ಸಂದರ್ಭದಲ್ಲಿ ಆಯಾ ದೇವಾಲಯದ ಅರ್ಚಕರು, ಭಟ್ಟರು, ನೌಕರರು ಹಾಗೂ ಕಾವಲುಗಾರರು ಸಹ ಕಾರಕ್ಕೆ ತಮ್ಮ ತಮ್ಮ ರಕ್ತ ಸಂಬಂಧಿಗಳು ಹಾಗೂ ಕುಟುಂಬಸ್ಥರನ್ನು ಇಟ್ಟುಕೊಂಡು ಸೇವಾ ಕೈಂಕರ್ಯ ನಡೆಸುತ್ತಿರುವುದರಿಂದ ಹಲವು ಗೊಂದಲಗಳು ಉಂಟಾಗುತ್ತಿದ್ದು, ಇದನ್ನು ಸರಿಪಡಿಸುವಂತೆ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಪತ್ರದ ಹಿನ್ನೆಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರಿಗೆ ಪತ್ರ ಬರೆದಿರುವ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಮಾಲಾ, ಈ ಗೊಂದಲವನ್ನು ಬಗೆಹರಿಸಲು ಸಂದರ್ಭಾನುಸಾರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ವ್ಯವಸ್ಥಾಪಕ ಸಮಿತಿ ಅಧ್ಯಕ್ಷ ಅಥವಾ ತಹಸೀಲ್ದಾರರ ಅನುಮೋದನೆಯೊಂದಿಗೆ ಕಾರ್ಯನಿರ್ವಹಿಸುವಂತೆ ಸುತ್ತೋಲೆ ಹೊರಡಿಸಿ, ದೇವಾಲಯದ ಅರ್ಚಕರು, ನೌಕರರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿದ್ದಾರೆ.

ಇನ್ನರ್‌ವ್ಹೀಲ್ ಕ್ಲಬ್‌ನಿಂದ ಸಸಿ ನೆಡುವ ಕಾರ್ಯಕ್ರಮ



ಮೈಸೂರಿನ ಅಶೋಕಪುರಂ ರೈಲ್ವೆ ಕಾರ್ಯಾಗಾರದ ಎದುರು ಶ್ರೀರಾಂಪುರ 2ನೇ ಹಂತದಲ್ಲಿ ಸೋಮವಾರ ಇನ್ನರ್‌ವ್ಹೀಲ್ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್ ಹಾಗೂ ರಾಜೀವ್ ಸ್ನೇಹ ಬಳಗದ ಜಂಟಿ ಆಶ್ರಯದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು. ಬೇವು, ಹಲಸು, ಸೀಬೆ ಸೇರಿದಂತೆ ವಿವಿಧ ಪ್ರಭೇದದ ಸುಮಾರು 30 ಸಸಿಗಳನ್ನು ನೆಡಲಾಯಿತು. ಕ್ಲಬ್ ಅಧ್ಯಕ್ಷೆ ಸಂಧ್ಯಾ ಸುರೇಶ್, ಜಂಟಿ ಕಾರ್ಯದರ್ಶಿ ಜಯಲಕ್ಷ್ಮೀ ರಾಜೀವ ಸೇರಿದಂತೆ ಕ್ಲಬ್ ಸದಸ್ಯರು ಪಾಲ್ಗೊಂಡಿದ್ದರು.

ಏರ್ ಇಂಡಿಯಾ ವಿಮಾನ ಅಪಘಾತ: 190 ಜನರ ಗುರುತು ಪತ್ತೆ

159 ಮೃತದೇಹ ಕುಟುಂಬಸ್ಥರಿಗೆ ಹಸ್ತಾಂತರ

ಅಹಮದಾಬಾದ್: ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನದಲ್ಲಿ 270 ಜನ ಸಾವನ್ನಪ್ಪಿದ 1 ವಾರದ ನಂತರ, ಡಿಎನ್‌ಎ ಹೊಂದಾಣಿಕೆಯ ಮೂಲಕ ಇದುವರೆಗೆ 190 ಜನರನ್ನು ಗುರುತಿಸಲಾಗಿದ್ದು, 159 ಮೃತದೇಹಗಳನ್ನು ಅವರ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಇಂದು ಬೆಳಗ್ಗೆವರೆಗೆ 190 ಡಿಎನ್‌ಎ ಮಾದರಿಗಳನ್ನು ಹೊಂದಿಸಲಾಗಿದೆ ಮತ್ತು 159 ಶವಗಳನ್ನು ಈಗಾಗಲೇ ಆಯಾ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅಹಮದಾಬಾದ್ ಸಿವಿಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಕೇಶ್ ಜೋಶಿ ತಿಳಿಸಿದ್ದಾರೆ.ಅ

ಶೀಘ್ರದಲ್ಲೇ ಉಳಿದ ಶವಗಳನ್ನು ಅವರ ಪ್ರೀತಿಪಾತ್ರರಿಗೆ ಹಸ್ತಾಂತರಿಸಲಾಗುವುದು. ಉಳಿದ ಕುಟುಂಬಗಳು ಪ್ರಸ್ತುತ ಆಸ್ಪತ್ರೆ ಆಡಳಿತದೊಂದಿಗೆ ಸಂಪರ್ಕದಲ್ಲಿವೆ ಎಂದು ಹೇಳಿದ್ದಾರೆ. ಜೂನ್ 12 ರಂದು ಮಧ್ಯಾಹ್ನ 1.39ಕ್ಕೆ 242 ಜನರನ್ನು ಹೊತ್ತೊಯ್ಯುತ್ತಿದ್ದ ಏರ್ ಇಂಡಿಯಾದ ಬೋಯಿಂಗ್ 787–8 ಡ್ರೀಮ್‌ಲೈನರ್ ವಿಮಾನವು ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ವೈದ್ಯಕೀಯ ಕಾಲೇಜು ಸಂಕೀರ್ಣಕ್ಕೆ ಅಪ್ಪಳಿಸಿತ್ತು.

ಪತನಗೊಂಡ ಏರ್ ಇಂಡಿಯಾ ವಿಮಾನದಲ್ಲಿದ್ದ 242 ಮಂದಿಯ ಪೈಕಿ 241 ಮಂದಿ ಮೃತಪಟ್ಟಿದ್ದರೆ, ವಿಮಾನ ಡಿಕ್ಕಿ ಹೊಡೆದ ಸ್ಥಳದಲ್ಲಿದ್ದ ಎಂಬಿಬಿಎಸ್ ವಿದ್ಯಾರ್ಥಿಗಳೂ ಸೇರಿ 29 ಮಂದಿ ಮೃತಪಟ್ಟಿದ್ದರು.

ಜೂ.21ರಿಂದ 'ಕಲಾ ಸಾಹಿತ್ಯಕ ಪರ್ವ ; ಶಬ್ದ'

ಮೈಸೂರು,ಜೂ.18(ಪಿಎಂ)– ಜೆಎಸ್ ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿಯ ಕಲಾ ಮತ್ತು ಸಾಹಿತ್ಯಕ ಸಂಘದ ಸಂಪಾದಕ ಮಂಡಳಿ ವತಿಯಿಂದ ವಾರ್ಷಿಕ 'ಕಲಾ ಸಾಹಿತ್ಯಕ ಪರ್ವ ; ಶಬ್ದ'–2025 ಅನ್ನು ಜೂ.21 ಮತ್ತು 22ರಂದು ಸದರಿ ವಿವಿಯ ಆವರಣದಲ್ಲಿ (ಜೆಸಿ ಕಾಲೇಜು ಆವರಣ) ಆಯೋಜಿಸಿದೆ. ಇದರಲ್ಲಿ ಖ್ಯಾತ ಅಂಕಣಕಾರ ಹೆಚ್.ಡುಂಡಿ ರಾಜ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಕಲಾ, ಕನ್ನಡ ಮತ್ತು ಆಂಗ್ಲ ವಿಭಾಗ ಗಳಲ್ಲಿ ಹಲವು ಸ್ಪರ್ಧೆಗಳು ನಡೆಯಲಿದ್ದು, ಯಾವುದೇ ವಯೋಮಿತಿ ಮತ್ತು ನೋಂದಣಿ ಶುಲ್ಕ ಇರುವುದಿಲ್ಲ. ಒಟ್ಟು 55 ಸಾವಿರ ರೂ.ವರೆಗೆ ನಗದು ಬಹುಮಾನ ಗೆಲ್ಲುವ ಅವಕಾಶವಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 76196 18003, 94803 83163 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಗಿಡ ನೆಡುವ ಕಾರ್ಯಕ್ರಮ

ಮೈಸೂರು, ಜೂ.18(ಪಿಎಂ)– ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವ ಮಾನವ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಜೂ.19 ರಂದು ಬೆಳಗ್ಗೆ 10.30ಕ್ಕೆ ಮಹಾರಾಜ ಕಾಲೇಜು ಹೊಸ ಕಟ್ಟಡದ ಮುಂಭಾಗದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ. ಮಾಲತಿ ಪ್ರಿಯಾ, ಮೈಸೂರು ವಿವಿ ಹಣಕಾಸು ಅಧಿಕಾರಿ ರೇಖಾ, ಡಿಸಿಪಿ ಕೆಎಸ್. ಸುಂದರ್ ರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮತ್ತಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.


ರಾಹುಲ್ ಗಾಂಧಿ ಹುಟ್ಟುಹಬ್ಬದ ಪ್ರಯುಕ್ತ

ಮೈಸೂರಿನಲ್ಲಿಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ.18(ಪಿಎಂ)– ಕಾಂಗ್ರೆಸ್ ನಾಯಕರೂ ಆದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಹುಟ್ಟುಹಬ್ಬದ ಪ್ರಯುಕ್ತ ಜೂ.19ರಂದು ಬೆಳಗ್ಗೆ 9ಕ್ಕೆ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರಿನ ಪಡುವಾರಹಳ್ಳಿಯ ದಂಡಿನ ಮಾರಮ್ಮ ದೇವಸ್ಥಾನ ಬಳಿ ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಸಹಕಾರದಲ್ಲಿ ಈ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಎಂ.ನಿಶಾಂತ್ ಪಟೇಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಪಾಲಿಕೆ ಪ್ರಧಾನ ಕಚೇರಿ ಆವರಣ ಈಗ ಆಕರ್ಷಣೀಯ ತಾಣ; ಮುದ ನೀಡುತ್ತಿದೆ 'ಗ್ಲೋ ಗಾರ್ಡನ್'

• ವಿಶೇಷ ರೀತಿ ವಿನ್ಯಾಸಗೊಳಿಸಿದ ವನ್ಯಜೀವಿಗಳು ಕಣ್ಮನ ಸೆಳೆಯುತ್ತಿವೆ • ಪಾರಂಪರಿಕ ಪಾಲಿಕೆ ಕಟ್ಟಡಕ್ಕೆ ವಿಶೇಷ ಮೆರುಗು



● ಮೋಹನ್ ಕಾಯಕ

ಮೈಸೂರು, ಜೂ.18– ಸಾಂಸ್ಕೃತಿಕ ನಗರಿ ಮೈಸೂರಿನ ಹೃದಯ ಭಾಗದಲ್ಲಿ ವನ್ಯಜೀವಿಗಳ ಕಲರವ... ರಾತ್ರಿ ವೇಳೆ ಬಣ್ಣದ ಬೆಳಕಲ್ಲಿ ಮಿಂಚಿದರೆ, ಹಗಲಲ್ಲಿ ಹಸಿರು ಗಿಡಗಳ ನಡುವೆ ಕಣ್ಮನ ಸೆಳೆಯಲಿವೆ ಆನೆ, ಜಿಂಕೆ, ಅಳಿಲು...!

ಹೌದು! ಮೈಸೂರು ಮಹಾನಗರ ನಗರಪಾಲಿಕೆ ಮುಖ್ಯ ಕಚೇರಿ ಆವರಣದಲ್ಲಿ ಹೊಸ ಆಕರ್ಷಣೆಯ 'ಗ್ಲೋ ಗಾರ್ಡನ್' ರೂಪ ತಾಳಿದ್ದು, ಗಾರ್ಡನ್‌ನಲ್ಲಿ ಹೊಳೆಯುವ ಚೆರ್ರಿ ಮರಗಳು, ಅಲಂಕಾರಿಕ ಗಿಡಗಳ ನಡುವೆ ಮುದ್ದಾದ ಜಿಂಕೆಗಳು, ಮೊಲ ಮತ್ತು ಅಳಿಲು ಆಟವಾಡುತ್ತಿವೆ. ಆನೆಗಳೆರಡು ದ್ವಾರದಲ್ಲಿ ನಿಂತು ಗೀಳಿಡುತ್ತಿದ್ದರೆ, ಹುಲಿಯೊಂದು ಬೇಟೆಗಾಗಿ ಹೊಂಚು ಹಾಕುತ್ತಿದೆ...

ಅರೆ...! ಮೃಗಾಲಯದಿಂದ ಏನಾದರೂ ತಪ್ಪಿಸಿಕೊಂಡು ಬಂದ್‌ಬಿಟ್ಟಿವೆಯಾ...? ಅಥವಾ ಯಾರಾದರೂ ಇಲ್ಲಿಗೆ ತಂದು ಬಿಟ್ಟಿರಬಹುದಾ...? ಎಂದುಕೊಳ್ಳುವ ಮುನ್ನ ಒಮ್ಮೆ ಭೇಟಿ ನೀಡಿ ಕಣ್ತುಂಬಿಕೊಳ್ಳುವುದು ಒಳಿತು. ಅಷ್ಟಕ್ಕೂ ಇಲ್ಲಿರುವ ವನ್ಯಜೀವಿಗಳಿಗೆ ಜೀವ ಇಲ್ಲದಿದ್ದರೂ ನೋಡುಗರ ಕಣ್ಮನ ಸೆಳೆಯುವ ಮೂಲಕ ಜೀವಂತವಾಗಿವೆ.

ಪ್ರವಾಸಿಗರ ನೆಚ್ಚಿನ ತಾಣವಾದ ಮೈಸೂರನ್ನು ಮತ್ತಷ್ಟು ಆಕರ್ಷಣೀಯವಾಗಿಸಲು ಮುಂದಾಗಿರುವ ಮೈಸೂರು ನಗರಪಾಲಿಕೆ, 'ಗ್ಲೋ ಗಾರ್ಡನ್' ರೂಪಿಸುವ ಮೂಲಕ ಪಾರಂಪರಿಕ ಪಾಲಿಕೆ ಕಟ್ಟಡಕ್ಕೆ ವಿಶೇಷ ಮೆರುಗು ನೀಡಿದೆ. ಮಂಗಳೂರು ನಂತರ 'ಗ್ಲೋ ಗಾರ್ಡನ್' ಅಭಿವೃದ್ಧಿಪಡಿಸುತ್ತಿರುವ ರಾಜ್ಯದ 2ನೇ ನಗರ ಎಂಬ ಖ್ಯಾತಿಗೂ ಮೈಸೂರು ಅಣಿಯಾಗಿದೆ.

ನಗರಪಾಲಿಕೆ ವಿದ್ಯುತ್ ವಿಭಾಗದ ವತಿಯಿಂದ ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ 'ಗ್ಲೋ ಗಾರ್ಡನ್' ಅಭಿವೃದ್ಧಿಪಡಿಸಲಾಗಿದ್ದು, ಮೈಸೂರಿನ ಪರಂಪರೆಗೆ ಅನುಗುಣವಾಗಿ ವನ್ಯಜೀವಿಗಳ ಲೈಟಿಂಗ್ ಮಾದರಿಗಳನ್ನು ಸ್ಥಾಪಿಸಲಾಗಿದೆ. ಗುತ್ತಿಗೆದಾರರಾದ ಮೆ.ಲೆಕ್ಸಾ ಲೈಟಿಂಗ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಪ್ರಾಣಿ–ಪಕ್ಷಿಗಳನ್ನು ವಿನ್ಯಾಸಗೊಳಿಸಿದ್ದು, ರಾತ್ರಿ ವೇಳೆ ಬೆಳಗುವ ಮೂಲಕ ಜನಾಕರ್ಷಣೆಯಾಗಿ ಕಂಗೊಳಿಸುತ್ತಿವೆ.



15 ಮಾದರಿಗಳು: 'ಗ್ಲೋ ಗಾರ್ಡನ್'ನಲ್ಲಿ 3 ಜಿಂಕೆ(2 ಮರಿ, 1 ದೊಡ್ಡ ಜಿಂಕೆ), 2 ಆನೆ, 1 ಮೊಲ, 1 ಅಳಿಲು, 1 ಹುಲಿ ಜೊತೆಗೆ 3 ಕಲರ್ ಸ್ಟೋನ್ ಪಕ್ಷಿಗಳು ಹಾಗೂ 3 ಚೆರ್ರಿ ಗಿಡಗಳು ಸೇರಿ 15 ಮಾದರಿಗಳನ್ನು ಅಲಂಕರಿಸಲಾಗಿದೆ. ಅವುಗಳಲ್ಲಿ 2 ಆನೆಗಳು ಪಾಲಿಕೆಯ ಮುಖ್ಯದ್ವಾರದಲ್ಲಿದ್ದರೆ, ಉಳಿದವುಗಳನ್ನು ಗಾರ್ಡನ್‌ನಲ್ಲಿ ಇರಿಸಲಾಗಿದೆ.

ಬಹು ಆಕರ್ಷಣೆ: ಹಗಲಿನಲ್ಲಿ ಹಸಿರಿನ ಗಿಡಗಳ ನಡುವೆ ಆಕರ್ಷಣೀಯವಾಗಿ ಕಾಣುವ ವನ್ಯಜೀವಿಗಳ ಮಾದರಿಗಳು, ರಾತ್ರಿ ವೇಳೆ ಬೆಳಗಲಿವೆ. ಸಂಪೂರ್ಣವಾಗಿ ಎಲ್‌ಇಡಿ ಲೈಟ್‌ಗಳಿಂದ ವಿನ್ಯಾಸಗೊಳಿಸಿದ್ದು, ವಿದ್ಯುತ್ ಉಳಿತಾಯದ ಕಡೆಗೂ ಗಮನ ಹರಿಸಲಾಗಿದೆ.

ಮೈಸೂರು ಪರಂಪರೆ ಬಿಂಬಿಸಲಿದೆ 'ಗ್ಲೋ ಗಾರ್ಡನ್'

> ಪ್ರವಾಸಿಗರು ಅದರಲ್ಲೂ ಮಕ್ಕಳ ಮನಸೆಳೆಯುವ 'ಗ್ಲೋ ಗಾರ್ಡನ್' ಅನ್ನು ಮೈಸೂರು ಪರಂಪರೆಗೆ ಅನುಗುಣವಾಗಿ ರೂಪಿಸಲಾಗಿದೆ. ನಗರದ ಕೇಂದ್ರ ಭಾಗದಲ್ಲಿರುವ ಪಾಲಿಕೆಯ ಮುಖ್ಯ ಕಚೇರಿ ಎದುರು ಮೊದಲ ಪ್ರಾಯೋಗಿಕ ಪ್ರಯತ್ನವನ್ನು ಮಾಡಲಾಗಿದೆ. ಪ್ರಾಣಿಗಳ ಮಾದರಿಗಳನ್ನು ಅಳವಡಿಸಿರುವ ಜಾಗದಲ್ಲಿ ಹುಲ್ಲು ಬೆಳೆಸಿ, ವನ್ಯಜೀವಿಗಳು ವಿಹರಿಸುತ್ತಿರುವಂತೆಯೇ ರೂಪಿಸಲಾಗುವುದು. ಮಕ್ಕಳಿಗೆ 'ಗ್ಲೋ ಗಾರ್ಡನ್' ಮೂಲಕ ಪ್ರಾಣಿಗಳ ಪರಿಚಯವೂ ಆಗಲಿದ್ದು ಮುಂದಿನ ದಿನಗಳಲ್ಲಿ ನಗರದ ಪ್ರಮುಖ ವೃತ್ತಗಳು ಹಾಗೂ ಪಾರ್ಕ್‌ಗಳಲ್ಲಿ ಅಭಿವೃದ್ಧಿಪಡಿಸುವ ಯೋಜನೆ ಇದೆ.
> – ಎ.ಇ.ದೀಪಕ್, ಕಾರ್ಯಪಾಲಕ ಇಂಜಿನಿಯರ್(ವಿದ್ಯುತ್ ವಿಭಾಗ), ಮೈಸೂರು ನಗರಪಾಲಿಕೆ



ಮೊದಲ ಪ್ರಾಯೋಗಿಕ ಪ್ರಯತ್ನ: ರಾಜ್ಯದಲ್ಲಿ ಮಂಗಳೂರಿನ ಬಳಿಕ ಮೈಸೂರಿನಲ್ಲಿ 'ಗ್ಲೋ ಗಾರ್ಡನ್' ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಪಾಲಿಕೆ ಮುಖ್ಯ ಕಚೇರಿ ಎದುರು ಮೊದಲ ಪ್ರಾಯೋಗಿಕ ಪ್ರಯತ್ನ ಮಾಡಲಾಗಿದೆ ಎಂದು ನಗರಪಾಲಿಕೆ ವಿದ್ಯುತ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಎ.ಇ. ದೀಪಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಎಲ್ಲಾ ಪ್ರಾಣಿ ಮತ್ತು ಪಕ್ಷಿ ಮಾದರಿಗಳು ಎಲ್‌ಇಡಿ ಲೈಟ್‌ನಿಂದ ಬೆಳಗಲಿದ್ದು, ಮಂಗಳೂರು ಮತ್ತು ಪುಣೆಯಿಂದ ವಿನ್ಯಾಸಗೊಳಿಸಿ ತರಿಸಲಾಗಿದೆ. ಮಂಗಳೂರು ಸ್ಮಾರ್ಟ್ ಸಿಟಿ, ಪುಣೆ, ಬಾಂಬೆಯಲ್ಲಿ 'ಗ್ಲೋ ಗಾರ್ಡನ್' ಇದ್ದು, ಅದೇ ರೀತಿ ಮೈಸೂರಲ್ಲೂ ಅಭಿವೃದ್ಧಿಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಪ್ರಮುಖ ದಿನಗಳಲ್ಲಿ ಬೆಳಗಲಿವೆ: ನಾಡಹಬ್ಬ ಮೈಸೂರು ದಸರಾ ಸೇರಿದಂತೆ ರಾಷ್ಟ್ರೀಯ ಹಬ್ಬಗಳು ಹಾಗೂ ಪ್ರಮುಖ ದಿನಗಳಲ್ಲಿ 'ಗ್ಲೋ ಗಾರ್ಡನ್'ನಲ್ಲಿನ ಪ್ರಾಣಿಗಳು ಬೆಳಗಲಿವೆ. ಸಂಜೆ 6 ಗಂಟೆಯಿಂದ ರಾತ್ರಿ 9 ಗಂಟೆಯವರೆಗೂ ಬೆಳಗಲಿದ್ದು, ಪ್ರವಾಸಿಗರು, ಮೈಸೂರಿಗರು ಹಾಗೂ ಮಕ್ಕಳ ಆಕರ್ಷಣೆಯಾಗಲಿದೆ ಎಂದರು.

ಮೈಸೂರು ಮಿತ್ರ ಗುರುವಾರ 19 ಜೂನ್ 2025

ತಮಿಳು ಕಾಲೋನಿಗೆ ಮುಸ್ಲಿಂ ನಿವಾಸಿಗಳ ಅಕ್ರಮ ಪ್ರವೇಶ

ಪರಿಸ್ಥಿತಿ ಶಾಂತಗೊಳಿಸಿದ ಉಪವಿಭಾಗಾಧಿಕಾರಿ



ಚಿಕ್ಕಮಂಡ್ಯ ಕೆರೆ ಅಂಗಳದಲ್ಲಿ ಅಧಿಕಾರಿಗಳೊಂದಿಗೆ ಮಾತಿನ ಚಕಮಕಿ ನಡೆಸುತ್ತಿರುವುದು.

ಮಂಡ್ಯ, ಜೂ.18– ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಿಸಲಾಗಿದ್ದ ತಮಿಳು ಕಾಲೋನಿ ವಸತಿಗೃಹಗಳಿಗೆ ಮುಸ್ಲಿಮರು ಏಕಾಏಕಿ ಪ್ರವೇಶ ಮಾಡಿ ಹೈಡ್ರಾಮ ಸೃಷ್ಟಿಸಿದ ಘಟನೆ ಬುಧವಾರ ಸಂಜೆ ಮಂಡ್ಯದಲ್ಲಿ ನಡೆಯಿತು.

ನಗರದ ಚಿಕ್ಕಮಂಡ್ಯ ಕೆರೆ ಅಂಗಳದಲ್ಲಿ ತಮಿಳು ಕಾಲೋನಿ ನಿವಾಸಿಗಳಿಗಾಗಿ 576 ಮನೆಗಳ ವಸತಿ ಸಂಕೀರ್ಣವನ್ನು ಸ್ಲಂಬೋರ್ಡ್ ನಿರ್ಮಿಸಿ ನಿವಾಸಿಗಳ ಸ್ಥಳಾಂತರ ಪ್ರಕ್ರಿಯೆ ವಿಳಂಬವಾಗಿತ್ತು. ಆದರೆ ಇಂದು ಸಂಜೆ ನೂರಾರು ಸಂಖ್ಯೆಯ ಮುಸ್ಲಿಮರು ವಸತಿ ಸಂಕೀರ್ಣಕ್ಕೆ ನುಗ್ಗಿ ತಮಗೆ ಬೇಕಾದ ಮನೆಗಳ ಬೀಗ ಒಡೆದು ಅಕ್ರಮವಾಗಿ ಪ್ರವೇಶ ಮಾಡಿದ್ದರು.

ಕೈಯಲ್ಲಿ ಆಧಾರ್ ಕಾರ್ಡ್‌ಗಳನ್ನು ಹಿಡಿದುಕೊಂಡು ಬಂದಿದ್ದ ಮುಸ್ಲಿಂ ಸಮುದಾಯದ ಮಹಿಳೆಯರು, ಮಕ್ಕಳು, ವೃದ್ಧರು, ಯುವಕರು ನಮಗೆ ಮನೆಯಿಲ್ಲ. ಆದ್ದರಿಂದ ನಿವೇಶನರಹಿತರಿಗೆ ಮನೆಗಳ ವಿತರಿಸಬೇಕು. ನಮಗೆ ಮನೆಗಳ ವಿತರಿಸಿ ಎಂದು ಪಟ್ಟು ಹಿಡಿದರು.

ಮಾಹಿತಿ ತಿಳಿದ ಉಪವಿಭಾಗಾಧಿಕಾರಿ ಶಿವಮೂರ್ತಿ ಹಾಗೂ ಡಿವೈಎಸ್ಪಿ ಲಕ್ಷ್ಮೀನಾರಾಯಣ ನೇತೃತ್ವದಲ್ಲಿ ಪೊಲೀಸರು ಅಕ್ರಮ ಪ್ರವೇಶ ಮಾಡಿರುವ ಮುಸ್ಲಿಂ ಸಮುದಾಯದವರನ್ನು ಮನೆಯಿಂದ ಹೊರ ಬರುವಂತೆ ಸೂಚಿಸಿದಾಗ ಪೊಲೀಸರು ಹಾಗೂ ಮುಸ್ಲಿಂ ಕುಟುಂಬಗಳೊಂದಿಗೆ ಮಾತಿನ ಚಕಮಕಿ, ವಾಗ್ವಾದಗಳು ನಡೆದವು. ನಂತರ ಉಪವಿಭಾಗಾಧಿಕಾರಿಗಳು ಮುಸ್ಲಿಂ ಕುಟುಂಬಗಳೊಂದಿಗೆ ಮಾತುಕತೆ ನಡೆಸಿ ಮನವೊಲಿಸುವಲ್ಲಿ ಯಶಸ್ವಿಯಾದ ನಂತರ ಅಲ್ಲಿಂದ ತೆರಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕೆಲವರು ತಪ್ಪು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತ ಕುಟುಂಬಗಳು ಏಕಾಏಕಿ ಪ್ರವೇಶ ಮಾಡಿದ್ದಾರೆ. ಮನೆಗಳು ಹಂಚಿಕೆಯಾಗುತ್ತಿವೆ ಎಂಬ ತಪ್ಪು ಮಾಹಿತಿಯೇ ಈ ಘಟನೆಗೆ ಕಾರಣವಾಗಿದೆ ಎಂದು ಉಪವಿಭಾಗಾಧಿಕಾರಿ ಶಿವಮೂರ್ತಿ, ಪತ್ರಕರ್ತರಿಗೆ ತಿಳಿಸಿದರು. ಮುಂದಿನ 10 ದಿನಗಳಲ್ಲಿ ಸಮಸ್ಯೆ ಇತ್ಯರ್ಥಪಡಿಸುವ ಭರವಸೆ ನೀಡಲಾಗಿದ್ದು, ಶಾಸಕ ರವಿಕುಮಾರ್ ಅವರೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಹೇಳಿದರು.

ವಿದ್ಯಾರ್ಥಿನಿ, ವಯೋವೃದ್ಧರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ

ಚಾಲಕ, ನಿರ್ವಾಹಕ ವಿರುದ್ಧ ಐಚನಹಳ್ಳಿ ಗ್ರಾಮಸ್ಥರ ಪ್ರತಿಭಟನೆ



ಬಸ್ ಕಂಡಕ್ಟರ್ ಮತ್ತು ಡ್ರೈವರ್ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ, ಜೂ.18– ಮಾರ್ಗಮಧ್ಯೆ ಅವಾಚ್ಯ ಶಬ್ದಗಳಿಂದ ವಿದ್ಯಾರ್ಥಿನಿಯರು ಮತ್ತು ವಯೋವೃದ್ಧರನ್ನು ನಿಂದಿಸಿ ಬಸ್ಸಿನಿಂದ ಇಳಿಯುವಂತೆ ಒತ್ತಾಯಿಸಿದ ಬಸ್ ಕಂಡಕ್ಟರ್ ಮತ್ತು ಡ್ರೈವರ್ ವಿರುದ್ಧ ಐಚನಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆಯಿಂದ ಮೋದೂರು–ಬೂಕನಕೆರೆ ಮಾರ್ಗವಾಗಿ ಐಚನಹಳ್ಳಿ ಗ್ರಾಮಕ್ಕೆ ಹೋಗದೇ ಮಾರ್ಗ ಮಧ್ಯೆ ಆ ಗ್ರಾಮಕ್ಕೆ ಹೋಗುವಂತಹ ಐವರು ಕಾಲೇಜು ವಿದ್ಯಾರ್ಥಿನಿಯರು ಸೇರಿ ಸುಮಾರು ಎಂಟು ಮಂದಿ ಪ್ರಯಾಣಿಕರಿದ್ದರೂ ಸಹ ಗ್ರಾಮಕ್ಕೆ ಹೋಗಲು ಬಸ್ಸಿನ ಕಂಡಕ್ಟರ್ ಪ್ರಭಾಕರ್ ಮತ್ತು ಡ್ರೈವರ್ ಅನಿಲ್ ನಿರಾಕರಿಸಿ ವಿದ್ಯಾರ್ಥಿನಿಯರೊಂದಿಗೆ ವಾಗ್ವಾದ ನಡೆಸಿದ್ದಾರೆ.

ಐದಾರು ಜನರಿಗೋಸ್ಕರ ಐಚನಹಳ್ಳಿ ಗ್ರಾಮಕ್ಕೆ ಹೋಗೋಕೆ ಆಗಲ್ಲ. ಡಿಸೇಲ್ ನಿಮ್ಮಪ್ಪ ತಂದು ಕೊಡುತ್ತಾನಾ ಅಥವಾ ನೀರು ಹಾಕಿಕೊಂಡು ಓಡಿಸೋದಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಕೆಳಕ್ಕೆ ತಳ್ಳಲು ಪ್ರಯತ್ನಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು. ಕೆಳಕ್ಕೆ ಇಳಿಯಲು ನಿರಾಕರಿಸಿದ ಹೆಣ್ಣು ಮಕ್ಕಳು, ವಯೋವೃದ್ಧರನ್ನು ವಾಪಸ್ ಕೆ.ಆರ್.ಪೇಟೆ ಕಡೆಗೆ ಕರೆದುಕೊಂಡು ಹೋಗುತ್ತಿದ್ದರು. ಈ ಸಂಗತಿಯನ್ನು ವಿದ್ಯಾರ್ಥಿನಿಯರು ತಮ್ಮ ಪೋಷಕರಿಗೆ ಮೊಬೈಲ್ ಮೂಲಕ ಮಾಹಿತಿ ನೀಡಿದ್ದಾರೆ.

ಕೂಡಲೇ ಬೈಕುಗಳಲ್ಲಿ ಐಚನಹಳ್ಳಿ ಗ್ರಾಮಸ್ಥರು ತೆರಳಿ ಬೊಮ್ಮೇಗೌಡನಕೊಪ್ಪಲು ಗ್ರಾಮದ ಬಳಿ ಬಸ್ಸನ್ನು ತಡೆಹಿಡಿದು ಐಚನಹಳ್ಳಿಗೆ ಏಕೆ ಬಸ್ ಓಡಿಸುವುದಿಲ್ಲ. ರೂಟ್ ಗಾಡಿಯನ್ನು ಏಕೆ ಅರ್ಧದಿಂದ ವಾಪಸ್ ತೆಗೆದುಕೊಂಡು ಹೋಗುತ್ತಿದ್ದೀರಿ. ಅಲ್ಲದೆ ಮಕ್ಕಳನ್ನು ಏಕೆ ವಾಪಸ್ ಕರೆದುಕೊಂಡು ಹೋಗುತ್ತಿದ್ದೀರಿ ಎಂದು ಪ್ರಶ್ನಿಸಿದಾಗ ಪ್ರತಿಭಟನಾಕಾರರಿಂದ ತಪ್ಪಿಸಿಕೊಂಡು ಬಸ್ಸನ್ನು ಬೊಮ್ಮೇಗೌಡನಕೊಪ್ಪಲು ಬಳಿಯೇ ನಿಲ್ಲಿಸಿ ಚಾಲಕ ಅನಿಲ್, ನಿರ್ವಾಹಕ ಪ್ರಭಾಕರ್ ಸ್ಥಳದಿಂದ ಪರಾರಿಯಾಗಿದ್ದಾರೆ.

ಗ್ರಾಮದ ಮುಖಂಡ ಮನು ಮಾತನಾಡಿ, ಈ ಸಾರಿಗೆ ಬಸ್ ನೌಕರರು ಇದೇ ರೀತಿ ಹಲವು ಬಾರಿ ನಮ್ಮ ಗ್ರಾಮದ ವಿದ್ಯಾರ್ಥಿಗಳು ಮತ್ತು ವಯೋವೃದ್ಧರನ್ನು ಮಾರ್ಗ ಮಧ್ಯೆ ಕೆಳಗಿಳಿಸಿ ಹೋಗುವ ಮೂಲಕ ಪ್ರಯಾಣಿಕರ ಮೇಲೆ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿದರು.

ಸಾರಿಗೆ ಅಧಿಕಾರಿಗೆ ತರಾಟೆ: ಐಚನಹಳ್ಳಿ ಗ್ರಾಮಸ್ಥರ ಪ್ರತಿಭಟನೆ ವಿಚಾರ ತಿಳಿದು ಸ್ಥಳಕ್ಕೆ ಬಂದ ಕೆ.ಆರ್.ಪೇಟೆ ಡಿಪೋ ಇನ್ಸ್‌ಪೆಕ್ಟರ್ ರವಿ, ಬಸ್ಸನ್ನು ತೆಗೆದುಕೊಂಡು ಹೋಗಲು ಪ್ರಯತ್ನಿಸಿದಾಗ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡು ಸ್ಥಳಕ್ಕೆ ಬಸ್ ಡ್ರೈವರ್ ಮತ್ತು ಕಂಡಕ್ಟರ್ ಕರೆಸಬೇಕು. ಅಲ್ಲಿಯವರೆಗೆ ಬಸ್ ತೆಗೆದುಕೊಂಡು ಹೋಗಲು ಬಿಡುವುದಿಲ್ಲ. ಇಲ್ಲದಿದ್ದರೆ ಕರ್ತವ್ಯಲೋಪ ಆರೋಪದ ಮೇರೆಗೆ ಸ್ಥಳದಲ್ಲೆ ಇಬ್ಬರನ್ನೂ ಅಮಾನತ್ತು ಮಾಡಿ ಆದೇಶ ಹೊರಡಿಸಬೇಕು. ಅಲ್ಲಿಯವರೆಗೆ ಬಸ್ಸನ್ನು ತೆಗೆದುಕೊಂಡು ಹೋಗಕೂಡದು ಎಂದು ಪಟ್ಟು ಹಿಡಿದಿರುವ ಗ್ರಾಮಸ್ಥರು ಪ್ರತಿಭಟನೆಯನ್ನು ಮುಂದುವರೆಸಿದರು.

ಶಾಸಕರ ತರಾಟೆ: ಐಚನಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿರುವ ಸುದ್ದಿ ತಿಳಿದ ಶಾಸಕ ಹೆಚ್.ಟಿ. ಮಂಜು, ಸಾರಿಗೆ ಅಧಿಕಾರಿ ರವಿಯವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ತರಾಟೆಗೆ ತೆಗೆದುಕೊಂಡು ಸದರಿ ಬಸ್ ಪ್ರತಿನಿತ್ಯ ಗ್ರಾಮಕ್ಕೆ ಹೋಗಬೇಕು, ಇಂದು ವಿದ್ಯಾರ್ಥಿನಿ ಮತ್ತು ವಯೋವೃದ್ಧರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಚಾಲಕ, ನಿರ್ವಾಹಕನ ವಿರುದ್ಧ ಕ್ರಮ ಜರುಗಿಸುವಂತೆ ಆದೇಶಿಸಿದರು.

ರಾತ್ರಿ 9 ಗಂಟೆ ಸಮಯದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆನಂದೇಗೌಡ ಸ್ಥಳಕ್ಕೆ ಧಾವಿಸಿ ಸಾರಿಗೆ ಅಧಿಕಾರಿಯೊಂದಿಗೆ ಪ್ರತಿಭಟನಾಕಾರರೊಂದಿಗೆ ಸಮಾಲೋಚಿಸಿ ಆಗಿರುವ ಪ್ರಮಾದಕ್ಕೆ ವಿಷಾದ ವ್ಯಕ್ತಪಡಿಸಿ ಸಾರಿಗೆ ಅಧಿಕಾರಿಯಿಂದ ಮುಚ್ಚಳಿಕೆ ಪತ್ರ ಹಾಗೂ ಚಾಲಕ, ನಿರ್ವಾಹಕರನ್ನು ಅಮಾನತುಗೊಳಿಸುವುದಾಗಿ ನೀಡಿದ ಭರವಸೆ ಮೇರೆಗೆ ಗ್ರಾಮಸ್ಥರು ಪ್ರತಿಭಟನೆಯನ್ನು ಅಂತ್ಯಗೊಳಿಸಿ ಅದೇ ಬಸ್ಸಿನಲ್ಲಿ ತಮ್ಮ ಗ್ರಾಮಕ್ಕೆ ತೆರಳಿದರು.

ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳಾದ ನಿಸರ್ಗ, ಭೂಮಿಕಾ, ರಜಿನಿ, ಮುಖಂಡರಾದ ರಾಮಕೃಷ್ಣೇಗೌಡ, ಮನು, ಕೃಷ್ಣ, ಶ್ರೀನಿವಾಸ್, ಪುಷ್ಪ, ಗಿರೀಶ್, ಕಮಲಮ್ಮ, ಭರತ್, ಚೇತನ್, ಪ್ರಜ್ವಲ್, ಶಿವಮಲ್ಲ, ನವೀನ್, ದರ್ಶನ್, ಅಭಿ, ಕಾಂತರಾಜು ಸೇರಿದಂತೆ ನೂರಾರು ಐಚನಹಳ್ಳಿ ಗ್ರಾಮಸ್ಥರು ಹಾಗೂ ಬೊಮ್ಮೇಗೌಡನಕೊಪ್ಪಲು ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಸಂಘವನ್ನು ಅಭಿವೃದ್ಧಿಪಡಿಸಲು ಕರೆ



ಅಧ್ಯಕ್ಷ, ಉಪಾಧ್ಯಕ್ಷೆ, ನಿರ್ದೇಶಕರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸನ್ಮಾನಿಸಿದರು.

ಪಾಂಡವಪುರ, ಜೂ.18–ತಾಲೂಕಿನ ಎಂ.ಶೆಟ್ಟಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಅಧ್ಯಕ್ಷ ಸುರೇಶ್ ಹಾಗೂ ಉಪಾಧ್ಯಕ್ಷೆ ಎಸ್.ಆರ್.ಮಂಜುಳ ಹಾಗೂ ಎಲ್ಲಾ ನಿರ್ದೇಶಕರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹಾಗೂ ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್ ಅವರು ಅಭಿನಂದಿಸಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಸಹಕಾರ ಸಂಘಗಳು ದೇವಸ್ಥಾನ ಇದ್ದಂತೆ, ಇಲ್ಲಿ ಎಲ್ಲರು ಶ್ರದ್ಧೆ, ಪ್ರಾಮಾಣಿಕತೆಯಿಂದ ಕೆಲಸ ಮಾಡಿ ಸಂಘವನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್ ಮಾತನಾಡಿ, ಶಿವಕುಮಾರ್ ತಮ್ಮ ಅಧಿಕಾರ ಅವಧಿಯಲ್ಲಿ ಡೇರಿಗಳ ಅಭಿವೃದ್ಧಿಪಡಿಸಬೇಕೆಂಬ ಸಾಕಷ್ಟು ಹಂಬಲ ಹೊಂದಿದ್ದಾರೆ. ಹಾಗಾಗಿ ಡೇರಿಗಳಲ್ಲಿ ಎಲ್ಲಾ ಆಡಳಿತ ಮಂಡಳಿಯವರು, ಅಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ಮಾಡಿಕೊಂಡು ಒಕ್ಕೂಟದಿಂದ ದೊರೆಯುವ ಸೌಲಭ್ಯಗಳನ್ನು ಪಡೆದು ಡೇರಿಗಳ ಅಭಿವೃದ್ಧಿಪಡಿಸುವ ಕೆಲಸ ಮಾಡಬೇಕು, ಯಾವುದೇ ಕಾರಣಕ್ಕೂ ಸಹಕಾರ ಸಂಘದಲ್ಲಿ ರಾಜಕೀಯ ಮಾಡಬಾರದು ಎಂದು ತಿಳಿಸಿದರು. ಇದೇ ವೇಳೆ ಎಂ.ಶೆಟ್ಟಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮಾರ್ಗ ವಿಸ್ತರಣಾಧಿಕಾರಿ ಪ್ರಜ್ವಲ್ ಗೌಡ, ನಿರ್ದೇಶಕರಾದ ಶಿವಸ್ವಾಮಿ, ಕೆಂಪೇಗೌಡ, ಪ್ರದೀಪ್, ಸುಶೀಲಮ್ಮ, ಪವಿತ್ರ, ಲಕ್ಷ್ಮಮ್ಮ, ವಿನೋದ್ ಕುಮಾರ್, ರಾಜೇಶ್, ಗ್ರಾಪಂ ಸದಸ್ಯರಾದ ಎಸ್.ಕೆ.ತಮ್ಮೇಗೌಡ, ಕೆಂಪಶೆಟ್ಟಿ ಹಾಜರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಏಕೀಕರಣ ಸಮಿತಿ ಪ್ರತಿಭಟನೆ ನಡೆಸಿತು.

ಮದ್ದೂರು, ಜೂ.18– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಏಕೀಕರಣ ಸಮಿತಿ ಮದ್ದೂರು ತಾಲೂಕು ಘಟಕ, ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿತು.

ತಾಲೂಕು ಕಚೇರಿ ಆವರಣಕ್ಕೆ ಸೇರಿದ ಸಂಘದ ಕಾರ್ಯಕರ್ತರು, ರಾಜ್ಯ ಸರ್ಕಾರ, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಎಚ್.ಜಿ.ಪ್ರಭುಲಿಂಗ ಮಾತನಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ರೈತರ ಬಗ್ಗೆ ಕಾಳಜಿ ಇಲ್ಲವಾಗಿದೆ. ದುಬಾರಿ ರಸಗೊಬ್ಬರ, ಕೃಷಿ ಕೂಲಿ ಕಾರ್ಮಿಕರ ಕೊರತೆ, ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಬೆಳೆಗೆ ಬೆಲೆ ದೊರೆಯದಿರುವುದು. ಇನ್ನೊಂದೆಡೆ ಬ್ಯಾಂಕ್, ಸಹಕಾರ ಸಂಘಗಳು ಹಾಗೂ ಖಾಸಗಿ ಸಾಲಗಳಿಂದ ಮುಕ್ತನಾಗದಿರುವುದರಿಂದ ರೈತರು ಕೃಷಿಯಿಂದ ವಿಮುಖನಾಗುವ ಸಾಧ್ಯತೆಗಳು ಇರುವುದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರ ಪರವಾಗಿ ಚಿಂತಿಸಿ ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಮುಖಂಡರಾದ ಕೀಳಘಟ್ಟ ನಂಜುಂಡಯ್ಯ, ಸೊ.ಸಿ.ಪ್ರಕಾಶ್ ಮಾತನಾಡಿ, ರಸಗೊಬ್ಬರಗಳ ಮೇಲಿನ ಸಬ್ಸಿಡಿ ಹೆಚ್ಚಿಸಬೇಕು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸರ್ಕಾರಗಳ ವಿರುದ್ಧ ಉಗ್ರ ಹೋರಾಟವನ್ನು ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ತಹಸೀಲ್ದಾರ್ ಸ್ಮಿತಾ ರಾಮುರವರಿಗೆ ಮನವಿ ಪತ್ರ ಸಲ್ಲಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಮಂಜೇಶ್‌ಗೌಡ, ಮದ್ದೂರು ತಾಲೂಕು ಅಧ್ಯಕ್ಷ ಎಚ್.ಜಿ.ಪ್ರಭುಲಿಂಗು, ಮಳವಳ್ಳಿ ತಾಲೂಕು ಅಧ್ಯಕ್ಷ ಬಸವರಾಜು, ಮುಖಂಡರಾದ ಸೊ.ಸಿ.ಪ್ರಕಾಶ್, ಕೀಳಘಟ್ಟ ನಂಜುಂಡಯ್ಯ, ಮುಖಂಡರಾದ ಅಂದಾನಿಗೌಡ, ಕೆ.ಜಿ.ಉಮೇಶ್, ಹುರಗಲವಾಡಿ ಉಮೇಶ್, ರಾಮಕೃಷ್ಣಯ್ಯ, ಅಣ್ಣೂರು ಮಹೇಂದ್ರ, ಪುಟ್ಟಸ್ವಾಮಿ, ಮಲ್ಲೇಶ್, ಸೀತಾರಾಮ, ಶ್ರೀನಿವಾಸ್, ಶಿವಲಿಂಗಯ್ಯ, ವೆಂಕಟೇಶ್, ಚೆನ್ನಪ್ಪ, ಜಯರಾಮ, ಶಿವಲಿಂಗಯ್ಯ, ಬಿಳಿಗೌಡ, ರಾಮಸ್ವಾಮಿ ಪ್ರತಿಭಟನೆಯಲ್ಲಿ ಹಾಜರಿದ್ದರು.

ಬೆಳಗೊಳ ಗ್ರಾಪಂ ಅಧ್ಯಕ್ಷರಾಗಿ ರವಿಕುಮಾರ್ ಆಯ್ಕೆ



ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಬಿ.ರವಿಕುಮಾರ್ ಅವಿರೋಧ ಆಯ್ಕೆಯಾಗಿದ್ದಾರೆ. ಗ್ರಾ.ಪಂ ಮಾಜಿ ಅಧ್ಯಕ್ಷ ಬಿ.ವಿ ಸುರೇಶ್, ಪುಟ್ಟರಾಜು, ಸದಸ್ಯರಾದ ಅರವಿಂದ್, ರಜನಿಕಾಂತ್, ಶಿವಕುಮಾರ್, ಕೃಷ್ಣ, ನಾಗಣ್ಣ, ಆರ್ಮುಗಂ, ಕಾಂತ್‌ರಾಜು, ಪ್ರಭಾ ಸುರೇಶ್, ಅಶ್ವಿನಿ ರವಿಕುಮಾರ್ ರಾಧ ಬಿಎಂ ಸ್ವಾಮೀಗೌಡ, ವಿಷಕಂಠೇಗೌಡ ಇತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಅತ್ಯಾಧುನಿಕ ಜಿಮ್ ಉಪಕರಣಗಳ ಸರಬರಾಜಿಗೆ ಯುವ ಸಬಲೀಕರಣ ಕ್ರೀಡಾ ಇಲಾಖೆ ಆಯುಕ್ತರ ಆದೇಶ

ಮೈಸೂರು, ಜೂ.18(ಎಸ್‌ಪಿಎನ್)– 2025–26ನೇ ಸಾಲಿನಲ್ಲಿ ಯುವಶಕ್ತಿ ಕೇಂದ್ರ ಕಾರ್ಯಕ್ರಮದಡಿ ಅತ್ಯಾಧುನಿಕ ಜಿಮ್ ಉಪಕರಣಗಳನ್ನು ಸರಬರಾಜು ಮಾಡಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರು ಆದೇಶಿಸಿದ್ದಾರೆ.

ಯುವನೀತಿ ಅನುಷ್ಠಾನ ಅಡಿಯಲ್ಲಿ ಯುವಜನರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಯುವಶಕ್ತಿ ಕೇಂದ್ರ ಯೋಜನೆಯಡಿ ಮೂಲಸೌಕರ್ಯಕ್ಕಾಗಿ ಕ್ರಿಯಾಯೋಜನೆಯು ಅನುಮೋದನೆಗೆ ಒಳಪಟ್ಟಿದ್ದು, ಒಟ್ಟು 75 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಈ ಅನುದಾನವನ್ನು ಇಲಾಖೆಯಿಂದ ನಿರ್ವಹಿಸುವ ಜಿಲ್ಲಾ ಮತ್ತು ತಾಲೂಕು ಕ್ರೀಡಾಂಗಣ, ಕ್ರೀಡಾ ಶಾಲೆ, ವಸತಿ ನಿಲಯ ಮತ್ತು ಸರ್ಕಾರಿ ಕಾಲೇಜುಗಳಿಗೆ ಒದಗಿಸಲು ಒಂದು ಕೇಂದ್ರಕ್ಕೆ 15 ಲಕ್ಷಗಳ ವೆಚ್ಚದಲ್ಲಿ ಜಿಮ್ ಉಪಕರಣಗಳನ್ನು ಖರೀದಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಅಲ್ಲದೆ, 2016ರ ನ.19ರ ಆದೇಶದಲ್ಲಿ ಯುವಶಕ್ತಿ ಕೇಂದ್ರ ಯೋಜನೆಯ ಮಾರ್ಗಸೂಚಿಗಳನ್ನು ಪರಿಷ್ಕರಿಸಿದ್ದು, ಅದರಲ್ಲಿ ಯುವಶಕ್ತಿ ಕೇಂದ್ರಗಳನ್ನು ಸ್ಥಾಪನೆ ಮಾಡಲು ಇಲಾಖೆಯ ಕ್ರೀಡಾಂಗಣಗಳು, ಕ್ರೀಡಾಶಾಲೆ/ನಿಲಯ ಹಾಗೂ ಸರ್ಕಾರಿ ಕಾಲೇಜುಗಳನ್ನು ಆಯ್ಕೆ ಮಾಡುವುದರ ಜೊತೆಗೆ ಪೊಲೀಸ್ ತರಬೇತಿ ಶಾಲೆಯನ್ನು ಸೇರ್ಪಡೆ ಮಾಡಿಕೊಳ್ಳತಕ್ಕದ್ದು, ಇಲಾಖಾ ಅಧೀನದಲ್ಲಿ ಜಿಲ್ಲಾ ಹಂತದಲ್ಲಿ 25X25 ಚದರಡಿ ಇರುವ ಸ್ಥಳಾವಕಾಶವನ್ನು ಹೊಂದಿರುವ ಬಗ್ಗೆ ಖಾತರಿಪಡಿಸಿಕೊಂಡು ಉಲ್ಲೇಖಿತ ಸರ್ಕಾರಿ ಆದೇಶಗಳಿಗೆ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಗಮನಹರಿಸಿ ನಿಯಮಾನುಸಾರ ಆಯ್ಕೆ ಮಾಡಿ ಜಿಲ್ಲಾವಾರು ಬೇಡಿಕೆಗಳನ್ನು 7 ದಿನಗಳೊಳಗಾಗಿ ಅಂಚೆ, ಇ–ಮೇಲ್ ಮೂಲಕ ಕೇಂದ್ರ ಕಚೇರಿ ಕಳುಹಿಸತಕ್ಕದ್ದು ಎಂದಿದ್ದಾರೆ.

ಏರ್ ಇಂಡಿಯಾ ವಿಮಾನ ಅಪಘಾತ

ಬದುಕುಳಿದ ವ್ಯಕ್ತಿ ಆಸ್ಪತ್ರೆಯಿಂದ ಡಿಸ್ಚಾರ್ಜ್; ಸಹೋದರನ ಅಂತ್ಯಕ್ರಿಯೆಯಲ್ಲಿ ಭಾಗಿ

ಅಹಮದಾಬಾದ್: ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಬದುಕುಳಿದ ಏಕೈಕ ವ್ಯಕ್ತಿ ವಿಶ್ವಾಸ್ ಕುಮಾರ್ ರಮೇಶ್ ಅವರು ಅಹಮದಾಬಾದ್ ಸಿವಿಲ್ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದು, ಅದೇ ವಿಮಾನದಲ್ಲಿ ತನ್ನೊಂದಿಗೆ ಪ್ರಯಾಣಿಸುತ್ತಿದ್ದ ಅವರ ಸಹೋದರ ಮೃತಪಟ್ಟಿದ್ದು, ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದರು ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಲೀಸೆಸ್ಟರ್‌ನ 40 ವರ್ಷದ ಭಾರತೀಯ ಮೂಲದ ಬ್ರಿಟಿಷ್ ಉದ್ಯಮಿ ವಿಶ್ವಾಸ್ ಅವರನ್ನು ಮಂಗಳವಾರ ಸಂಜೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಯಿತು ಎಂದು ಅವರು ಹೇಳಿದ್ದಾರೆ.

ಡಿಎನ್‌ಎ ಪರೀಕ್ಷೆ ಮೂಲಕ ವಿಶ್ವಾಸ್ ಅವರ ಸಹೋದರ ಅಜಯ್ ಅವರ ಮೃತದೇಹದ ಗುರುತನ್ನು ದೃಢಪಡಿಸಿದ ನಂತರ ಬುಧವಾರ ಬೆಳಗ್ಗೆ ಕುಟುಂಬಕ್ಕೆ ಹಸ್ತಾಂತರಿಸಲಾಯಿತು ಎಂದು ಅಹಮದಾಬಾದ್ ಸಿವಿಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಕೇಶ್ ಜೋಶಿ ವರದಿಗಾರರಿಗೆ ತಿಳಿಸಿದ್ದಾರೆ.

ವಿಶ್ವಾಸ್ ಅವರ ಕುಟುಂಬವು ಈಗಾಗಲೇ ಯುನೈಟೆಡ್ ಕಿಂಗ್‌ಡಮ್‌ನಿಂದ ಇಲ್ಲಿಗೆ ಬಂದಿದೆ. ಅವರು ಚೇತರಿಸಿಕೊಂಡ ನಂತರ, ಮಂಗಳವಾರ ಸಂಜೆ 7.30ಕ್ಕೆ ನಾವು ವಿಶ್ವಾಸ್‌ಗೆ ಡಿಸ್ಚಾರ್ಜ್ ಮಾಡಿದ್ದೇವೆ ಮತ್ತು ಡಿಎನ್‌ಎ ಹೊಂದಾಣಿಕೆಯ ನಂತರ ಅವರ ಸಹೋದರನ ಮೃತದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಯಿತು ಎಂದು ಅವರು ಹೇಳಿದ್ದಾರೆ.

ಇಂಜಿನಿಯರ್ ಲೋಕಾಯುಕ್ತ ಬಲೆಗೆ



ಯಾರಪ್ಪ ರೆಡ್ಡಿ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ ಹಿರಿಯ ಅಧಿಕಾರಿಯೊಬ್ಬರು ಬುಧವಾರ 10 ಲಕ್ಷ ರೂ. ಲಂಚ ಪಡೆಯುತ್ತಿದ್ದ ವೇಳೆ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಬಿಬಿಎಂಪಿಯ ಸಿ.ವಿ. ರಾಮನ್ ನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಎಚ್.ವಿ.ಯಾರಪ್ಪ ರೆಡ್ಡಿ ಬಾಕಿ ಬಿಲ್ ಬಿಡುಗಡೆ ಮಾಡಲು ಗುತ್ತಿಗೆದಾರರಿಂದ ಲಂಚ ಕೇಳುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. ದೂರುದಾರರಾದ ಹೇಮಂತ್ ಜಿ ಎಂ, ಬಿಬಿಎಂಪಿ ಕಾರ್ಯನಿರ್ವಾಹಕ ಇಂಜಿನಿಯರ್ ತಮ್ಮ ಬಾಕಿ ಬಿಲ್ ಬಿಡುಗಡೆ ಮಾಡಲು ಲಂಚ ಕೇಳಿದ್ದಾರೆ ಎಂದು ಆರೋಪಿಸಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಮೇರೆಗೆ ಕಾರ್ಯನಿರ್ವಹಿಸಿದ ಲೋಕಾಯುಕ್ತ ಪೊಲೀಸರು, ಎಚ್ ವಿ ಯಾರಪ್ಪ ರೆಡ್ಡಿ ಅವರನ್ನು ಬಂಧಿಸಿದ್ದಾರೆ.

ಮೂರನೇ ಪುಟದಿಂದ

ಹಳ್ಳಕ್ಕೆ ಉರುಳಿದ ಶಾಲಾ ವಾಹನ; 20 ಮಕ್ಕಳಿಗೆ ಗಾಯ



ಗಾಯಗೊಂಡ ಮಕ್ಕಳಿಗೆ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿರುವುದನ್ನು ಕಾಣಬಹುದು.

ಸ್ವಲ್ಪ ತೊಂದರೆ ಇದೆ. ಬ್ರೇಕ್ ಹಾಕಿದಾಗ ಸ್ಕಿಡ್ ಆಗಿ ಉರುಳಿತು. ನಾನು 35ರಿಂದ 40 ಕಿ.ಮೀ. ವೇಗದಲ್ಲೇ ಬರುತ್ತಿದ್ದೆ. ಬೇಕಿದ್ದರೆ ಮಕ್ಕಳನ್ನೇ ಕೇಳಿ ನೋಡಿ ಎಂದು ತಿಳಿಸಿದರು. ಘಟನೆ ಸಂಭವಿಸುತ್ತಿದ್ದಂತೆಯೇ ಅದೇ ಮಾರ್ಗವಾಗಿ ಬರುತ್ತಿದ್ದ ರವೀಗೌಡ, ಸಾಗರ್, ವಿಜಯಕುಮಾರ್‌ಗೌಡ, ನವೀನ್‌ಗೌಡ ಮತ್ತಿತರರು ಗಾಯಗೊಂಡಿದ್ದ ಮಕ್ಕಳನ್ನು ವಾಹನದಿಂದ ಹೊರ ಕರೆತಂದು ತಮ್ಮ ಕಾರುಗಳಲ್ಲಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪಿರಿಯಾಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು, ಮಕ್ಕಳಿಗೆ ಚಿಕಿತ್ಸೆ ಕೊಡಿಸಿದ ಬಳಿಕ ಅವರ ಪೋಷಕರೊಂದಿಗೆ ಕಳುಹಿಸಿಕೊಡಲು ಸಹಕರಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ತೆರಳಿ, ಮಕ್ಕಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ತಿಳಿಸಿದರು.

ಶಿಕ್ಷಕರ ವಾರ್ಷಿಕ ವೇತನ ಬಡ್ತಿಗೆ ತಡೆ

ಸಂಸ್ಥೆಗಳ ಅನುದಾನವನ್ನೇ ಕಡಿತ ಮಾಡುವ ಆದೇಶವನ್ನು ಶಿಕ್ಷಣ ಇಲಾಖೆ ಮಾಡಿದೆ. ವಿಷಯವಾರು ಫಲಿತಾಂಶ ನೋಡಿ ಶಿಕ್ಷಕರ ವಾರ್ಷಿಕ ಬಡ್ತಿ, ವೇತನಾನುದಾನ ತಡೆಗೆ ಸರ್ಕಾರ ನಿರ್ಧಾರ ಮಾಡಿದೆ. ಬಿಇಓಗಳು ಎಲ್ಲವನ್ನೂ ಪರಿಶೀಲಿಸಿ ಆಯುಕ್ತರಿಗೆ ವರದಿ ನೀಡಬೇಕು ಎಂದು ಸೂಚಿಸಲಾಗಿದೆ.

ಶಾಲೆಗಳ ಮೇಲೆ ಕ್ರಮ: 60%ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಅನುದಾನಿತ ಶಾಲೆಗಳ ವಿಷಯವಾರು ಶಿಕ್ಷಕರ ವಾರ್ಷಿಕ ಬಡ್ತಿ ತಡೆಹಿಡಿಯುವುದು. ವಿಷಯವಾರು ನಿರಂತರವಾಗಿ 3 ವರ್ಷ 60% ಕ್ಕಿಂತ ಕಡಿಮೆ ಫಲಿತಾಂಶ ಬಂದಿದ್ದರೆ ಅಂತ ಶಿಕ್ಷಕರ ವೇತನಾನುದಾನ ತಡೆಹಿಡಿಯಲಾಗುತ್ತದೆ. ಒಂದು ಶಾಲೆಯೂ ಸತತ 5 ವರ್ಷಗಳಲ್ಲಿ 50% ಫಲಿತಾಂಶ ಬಾರದಿದ್ದರೆ ಶಾಲೆಯ ಅನುದಾನವನ್ನೇ ತಡೆಹಿಡಿಯುವುದು.

ಸಾಹಿತ್ಯ ಅಕಾಡೆಮಿ ಯುವ ಪುರಸ್ಕಾರ

ಆಧುನಿಕ ಕನ್ನಡ ಸಾಹಿತ್ಯದ ಕುರಿತು ಅಪಾರ ಜ್ಞಾನ ಹೊಂದಿದ್ದಾರೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಲೇಖಕರ ಜೊತೆ ಕನ್ನಡ ಸಾಹಿತ್ಯ ಕುರಿತು ಗಂಟೆಗಟ್ಟಲೆ ನಿರರ್ಗಳವಾಗಿ ಚರ್ಚಿಸಬಲ್ಲ ಪಾಂಡಿತ್ಯ ಹೊಂದಿರುವ ದಿಲೀಪ್ ಅವರು ಪ್ರೊ.ಜಿ.ಎಚ್. ನಾಯಕ ಮತ್ತು ಪ್ರೊ.ಮಹೇಶ್ವರಿ ಅವರ ಶಿಷ್ಯ. ದಿಲೀಪ್ ಅವರಿಗೆ ಕೇರಳ ಸೆಂಟ್ರಲ್ ಅಕಾಡೆಮಿ ನಡೆಸಿದ ಸಂಶೋಧನಾ ಪ್ರಬಂಧಕ್ಕೆ ದ್ವಿತೀಯ ಬಹುಮಾನ, ಚನ್ನವೀರ ಕಣವಿ ಕಾವ್ಯ ಪ್ರಶಸ್ತಿ, ಮಂಗಳಾ ಮುದ್ದುಮಾದಪ್ಪ ದತ್ತಿ ಪ್ರಶಸ್ತಿ, ಹಾಸನದ ಜನಮಿತ್ರ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿಗಳು ದೊರೆತಿವೆ. ಚಾಮರಾಜನಗರದವರೇ ಆದ ಕವಿ ಸ್ವಾಮಿ ಪೊನ್ನಾಚಿ ಅವರ ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪ್ರಶಸ್ತಿ ಲಭಿಸಿತ್ತು. ಈಗ ಚಾ.ನಗರ ಜಿಲ್ಲೆಗೆ ವಿಮರ್ಶೆಗೆ ಈ ಪ್ರಶಸ್ತಿ ಸಂದಿರುವುದು ವಿಶೇಷ. ಮಲೆ ಮಾದಪ್ಪ ಓಡಾಡಿದ ಜಾಗೃತ ನೆಲ ಇದು. ಈ ನೆಲದವನಾದ ನನಗೆ ಪ್ರಶಸ್ತಿ ಬಂದಿದ್ದು ತುಂಬಾ ಸಂತಸ ತಂದಿದೆ. ಪ್ರೊ. ಜಿ.ಎಚ್.ನಾಯಕ್, ವೆಂಕಟಾಚಲ ಶಾಸ್ತ್ರಿ, ತಾರಾನಾಥ, ಪ್ರೊ. ಓಎಲ್ ನಾಗಭೂಷಣಸ್ವಾಮಿ, ಪಂಡಿತಾರಾಧ್ಯ ಅವರಿಗೆ ನಾನು ಕೃತಜ್ಞ, ನನ್ನ ತಂದೆ, ತಾಯಿ ಮತ್ತು ನನ್ನ ತಮ್ಮನಿಗೆ ಈ ಪ್ರಶಸ್ತಿ ಅರ್ಪಿಸುತ್ತೇನೆ ಎಂದು ಪ್ರಶಸ್ತಿ ವಿಜೇತ ಆರ್.ದಿಲೀಪ್‌ಕುಮಾರ್ ಪ್ರತಿಕ್ರಿಯೆ ನೀಡಿದ್ದಾರೆ.

ಟ್ರಂಪ್‌ಗೂ ಖಮೇನಿ ಡೋಂಟ್ ಕೇರ್

ತಿಳಿದಿರುವವರು ಎಂದಿಗೂ ಈ ರಾಷ್ಟ್ರದೊಂದಿಗೆ ಬೆದರಿಕೆಯ ಭಾಷೆಯಲ್ಲಿ ಮಾತನಾಡುವುದಿಲ್ಲ ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಮಂಗಳವಾರ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಮತ್ತು ಇಸ್ರೇಲ್‌ಗೆ ಖಮೀನಿ ಸುಲಭವಾದ ಗುರಿ ಎಂದು ಹೇಳಿದ ನಂತರ, ಇರಾನ್ ಬೇಷರತ್ತಾಗಿ ಶರಣಾಗುವಂತೆ ಸೂಚಿಸಿದ್ದರು. ಅಮೆರಿಕದ ಯಾವುದೇ ಮಿಲಿಟರಿ ಹಸ್ತಕ್ಷೇಪವು ನಿಸ್ಸಂದೇಹವಾಗಿ ಸರಿಪಡಿಸಲಾಗದ ಹಾನಿಗೆ ಕಾರಣವಾಗುತ್ತದೆ ಎಂಬುದು ಅಮೆರಿಕನ್ನರು ತಿಳಿದಿರಬೇಕು ಎಂದು ಖಮೇನಿ ಹೇಳಿದ್ದಾರೆ.

9ರಿಂದ 10 ಗಂಟೆಗೆ ಹೆಚ್ಚಳ ಚಿಂತನೆ

ಕಂಪನಿಗಳು, ಹೋಟೆಲ್ ಮಾಲೀಕರು ಕಾನೂನು ತಿದ್ದುಪಡಿಯನ್ನು ಬೆಂಬಲಿಸಿವೆ. ವಾರದಲ್ಲಿ 2 ದಿನ ರಜೆ ಸಿಗಲಿದೆ, ಹೆಚ್ಚುವರಿ ದುಡಿಮೆ ಹೇಗೆ ಆಗುತ್ತೆ. ಕಾರ್ಮಿಕ ಸಂಘಟನೆಗಳಿಗೆ ಇದು ಅರ್ಥ ಆಗುತ್ತಿಲ್ಲ ಎಂದು ಹೋಟೆಲ್ ಮಾಲೀಕ ಪಿ.ಸಿ.ರಾವ್ ಹೇಳಿದ್ದಾರೆ.

ಕಾರ್ಮಿಕ ಕಾನೂನಿನ ತಿದ್ದುಪಡಿ ಪ್ರಸ್ತಾಪ

- ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961ರ ಸೆಕ್ಷನ್ 7ಕ್ಕೆ ತಿದ್ದುಪಡಿ ಪ್ರಸ್ತಾಪ
- ಸದ್ಯ ಕೆಲಸದ ಅವಧಿ ದಿನಕ್ಕೆ ಒಂಬತ್ತು ಗಂಟೆಯನ್ನು ಮೀರಬಾರದು; ಗರಿಷ್ಠ ಒಟಿ 10 ಗಂಟೆಗಳನ್ನು ಮೀರಬಾರದು
- ಆದರೆ ಇದೀಗ ಕೆಲಸದ ಅವಧಿಯನ್ನು ದಿನಕ್ಕೆ ಗರಿಷ್ಠ 10 ಗಂಟೆ, ಒಟಿಯನ್ನ ದಿನಕ್ಕೆ ಗರಿಷ್ಠ 12 ಗಂಟೆಗಳಿಗೆ ವಿಸ್ತರಿಸಲು ಸರ್ಕಾರ ಚಿಂತನೆ
- ಮೂರು ತಿಂಗಳಲ್ಲಿ ಹೆಚ್ಚುವರಿ ಕೆಲಸದ ಗರಿಷ್ಠ ಮಿತಿಯು 50ರಿಂದ 144 ಗಂಟೆಗೆ ಹೆಚ್ಚಳಕ್ಕೆ ಪ್ಲ್ಯಾನ್
- ಶನಿವಾರ, ಭಾನುವಾರ ರಜೆ ನೀಡುವ ಬಗ್ಗೆಯೂ ಪ್ರಸ್ತಾಪ
- ಸದ್ಯ ಚರ್ಚಾ ಹಂತದಲ್ಲಿ ಇರುವ ತಿದ್ದುಪಡಿ ಪ್ರಸ್ತಾಪ, ಕಾನೂನು ರೂಪ ಸಿಗಬೇಕಾದರೆ ಸಂಪುಟ ಸಭೆಯಲ್ಲಿ ಚರ್ಚಿಸಬೇಕು.

ಡಿಕೆ ಡಿಕೆ ಅಂತ ಕೂಗೋದಲ್ಲ, ಮುಂದೆಯೂ ನನಗೆ ಅವಕಾಶ ಕೊಡಿ

ಮತ್ತೆ ಸಿಎಂ ಆಸೆ ಬಿಚ್ಚಿಟ್ಟ ಡಿಕೆಶಿ



ಬೆಂಗಳೂರು: ಡಿಸಿಎಂ ಡಿಕೆ ಶಿವಕುಮಾರ್ ಮತ್ತೊಮ್ಮೆ ಪರೋಕ್ಷವಾಗಿ ಸಿಎಂ ಸ್ಥಾನ ಆಸೆಯನ್ನು ಹೊರ ಹಾಕಿದ್ದಾರೆ. ಅಷ್ಟೇ ಅಲ್ಲ ಡಿಕೆ ಶಿವಕುಮಾರ್‌ಗೆ ನೀವು ಶಕ್ತಿ ಕೊಡಬೇಕು ಎಂಬ ಮನವಿ ಮಾಡುವ ಮೂಲಕ ಸಿಎಂ ಸ್ಥಾನಕ್ಕೆ ನನ್ನನ್ನ ಕೂರಿಸಿ ಎಂಬ ಪರೋಕ್ಷವಾಗಿ ಸಂದೇಶ ಕಳುಹಿಸಿದ್ದಾರೆ.

ಅರಮನೆ ಮೈದಾನದಲ್ಲಿ ಇವತ್ತು ಕೆಪಿಟಿಸಿಎಲ್ ನೌಕರರ ಸಂಘದ ವಜ್ರ ಮಹೋತ್ಸವ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದ ವೇಳೆ ಡಿಕೆ ಶಿವಕುಮಾರ್ ಭಾಷಣ ಮಾಡಲು ಬಂದ ಕೂಡಲೇ ವಿದ್ಯುತ್ ಇಲಾಖೆ ಸಿಬ್ಬಂದಿಗಳು, ನೌಕರರು ಡಿಕೆ ಡಿಕೆ ಅಂತ ಘೋಷಣೆ ಕೂಗಿದರು. ಈ ವೇಳೆ ಮಾತನಾಡಿದ ಡಿ.ಕೆ.ಶಿವಕುಮಾರ್, ಈಗ ಡಿಕೆ ಡಿಕೆ ಅನ್ನೋದು ಅಲ್ಲ. ಎಲೆಕ್ಷನ್‌ನಲ್ಲಿ ಇನ್ನೊಂದು ಸಾರಿ ಡಿಕೆ ಶಿವಕುಮಾರ್ ತಂದು ಕೂರಿಸಿದ ಮೇಲೆ ಈ ಘೋಷಣೆ ಕೂಗಿ ಎಂದರು.

ಮಾತು ಮುಂದುವರೆಸಿದ ಡಿಕೆಶಿ, ತಾವು ಇಂಧನ ಇಲಾಖೆ ಸಚಿವನಾಗಿದ್ದಾಗ ಮಾಡಿದ ಸಾಧನೆ ವಿವರಿಸಿದರು. ನೀವು ಮನಸ್ಸು ಮಾಡಿದರೆ ಡಿ.ಕೆ. ಶಿವಕುಮಾರ್‌ನನ್ನು ಮೇಲಕ್ಕೆ ಎತ್ತಬಹುದು. ಕೆಳಗೂ ಇಳಿಸಬಹುದು. ಅಷ್ಟು ಶಕ್ತಿ ನಿಮಗೆ ಇದೆ. ನಾವು ನಿಮಗೆ ಎಲ್ಲಾ ಮಾಡಿದ್ದೇವೆ. ನಿಮಗೆ ನಮ್ಮ ಮೇಲೆ ಉಪಕಾರ ಸ್ಮರಣೆ ಇರಬೇಕು. ಬರೀ ಡಿಕೆ ಡಿಕೆ ಅನ್ನೋದಲ್ಲ. ಈ ಸರ್ಕಾರವನ್ನು ತಂದು ಕೂರಿಸಬೇಕು ಎನ್ನುವ ಮೂಲಕ ಸಿಎಂ ಸ್ಥಾನಕ್ಕೆ ಆಶೀರ್ವಾದ ಮಾಡಬೇಕೆಂದು ಪರೋಕ್ಷವಾಗಿ ಹೇಳಿದರು.

ಆರ್‌ಎಸ್‌ಎಸ್, ಬಜರಂಗದಳ ವಿರುದ್ಧ ಟೀಕೆ: ಸಿದ್ದರಾಮಯ್ಯಗೆ ನೋಟಿಸ್

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಾ ಸಂಘ ಹಾಗೂ ಬಜರಂಗದಳ ವಿರುದ್ಧ ಸದನದಲ್ಲೇ ವಾಗ್ದಾಳಿ ನಡೆಸಿದ್ದ ಸಿಎಂ ಸಿದ್ದರಾಮಯ್ಯಗೆ ಇದೀಗ ಸಂಕಷ್ಟ ಎದುರಾಗಿದೆ. ಅತೀಹೆಚ್ಚು ಅಪರಾಧ ಕೃತ್ಯಗಳಾಗುತ್ತಿರುವುದೇ ಆರ್‌ಎಸ್‌ಎಸ್ ಮತ್ತು ಬಜರಂಗದಳದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಸದನದಲ್ಲೇ ಬಹಿರಂಗವಾಗಿ ಟೀಕಿಸಿದ್ದರು. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯವು ಸಿಎಂ ಸಿದ್ದರಾಮಯ್ಯನವರಿಗೆ ನೋಟಿಸ್ ಜಾರಿ ಮಾಡಿದ್ದು, ಜೂ.26ರೊಳಗೆ ಕೋರ್ಟ್ ನೋಟಿಸ್‌ಗೆ ಉತ್ತರಿಸಬೇಕಿದೆ. ಈ ಹೇಳಿಕೆಯಿಂದ ಸದನದಲ್ಲಿ ಅಲ್ಲೋಲ ಕಲ್ಲೋಲವೇ ಆಗಿತ್ತು. ಬಿಜೆಪಿ ಶಾಸಕರು ಸಿಎಂ ಸಿದ್ದರಾಮಯ್ಯ ಹೇಳಿಕೆಯನ್ನು ಖಂಡಿಸಿ ವಾಗ್ದಾಳಿ ನಡೆಸಿದ್ದರು. ಅಲ್ಲದೇ ಜನರ ಭಾವನೆಗಳಿಗೆ ಧಕ್ಕೆ ಆರೋಪದಡಿ ಕಿರಣ್ ಎನ್ನುವರು ಸಿದ್ದರಾಮಯ್ಯ ವಿರುದ್ಧ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರು. ಆದರೆ, ಕೋರ್ಟ್, ಈ ಕೇಸ್ ದಾಖಲಿಸಿಕೊಳ್ಳುವ ಮುನ್ನ ಸಿದ್ದರಾಮಯ್ಯನವರ ವಾದ ಆಲಿಸಲು ಅವಕಾಶ ನೀಡಿದೆ. ಹೀಗಾಗಿ ಬಿಎನ್‌ಎಸ್‌ಎಸ್ ಸೆಕ್ಷನ್ 223 ಅಡಿಯಲ್ಲಿ ಸಿದ್ದರಾಮಯ್ಯಗೆ ನೋಟಿಸ್ ನೀಡಿದ್ದು, ಜೂ.26ರೊಳಗೆ ಕೋರ್ಟ್ ನೋಟಿಸ್‌ಗೆ ಉತ್ತರಿಸಬೇಕಿದೆ.

ಮಧುಚಂದ್ರಕ್ಕೆ ಕರೆದೊಯ್ದು ಪ್ರೇಯಿಸಿ ಹತ್ಯೆ

ಹುಬ್ಬಳ್ಳಿ: ಬೆಂಗಳೂರು ಮೂಲದ ಯುವತಿ ಗೋವಾದಲ್ಲಿ ಕೊಲೆಯಾಗಿದ್ದಾಳೆ. ಕೊಲೆ ಮಾಡಿದ ಆರೋಪಿ ಕೂಡ ಬೆಂಗಳೂರು ನಿವಾಸಿಯಾಗಿದ್ದಾನೆ. ಆದರೆ, ಆರೋಪಿ ಸಿಕ್ಕಿಬಿದ್ದಿದ್ದು ಹುಬ್ಬಳ್ಳಿಯಲ್ಲಿ. ಪ್ರೀತಿಸಿದ ಹುಡುಗಿಯ ಕತ್ತುಸೀಳಿ ಕೊಲೆ ಮಾಡಿದ ಪ್ರಿಯಕರ ಹುಬ್ಬಳ್ಳಿ ಪೊಲೀಸರ ಕೈಯ್ಯಲ್ಲಿ ಲಾಕ್ ಆಗಿದ್ದಾನೆ. ಬೆಂಗಳೂರಿನ ಲಿಂಗರಾಜಪುರ ಬಡಾವಣೆಯ ಡಾನ್ ಬಾಸ್ಕೋ ಶಾಲೆ ಸಮೀಪ ವಾಸವಾಗಿದ್ದ 22 ವರ್ಷದ ರೋಶನಿ ಗೋವಾದಲ್ಲಿ ಬರ್ಬರವಾಗಿ ಕೊಲೆಯಾಗಿದ್ದಾರೆ.

ಗೋವಾ ರಾಜ್ಯದ ಪೋಂಡಾ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರತಾಪನಗರ ಬಳಿಯಿರುವ ಅರಣ್ಯ ಪ್ರದೇಶದಲ್ಲಿ ಜೂನ್ 16ರಂದು ರೋಶನಿ ಶವ ಸಿಕ್ಕಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಗೋವಾ ಪೊಲೀಸರು, ರೋಶನಿ ಹಿನ್ನೆಲೆ ಕಲೆಹಾಕಲು ಆರಂಭಿಸಿದರು. ಆಗ, ಕೆಲ ದಿನಗಳ ಹಿಂದಷ್ಟೇ ರೋಶನಿ ತಾನು ವಾಸವಾಗಿರುವ ಲಿಂಗರಾಜಪುರ ಬಡಾವಣೆಯ ನಿವಾಸಿಯಾಗಿದ್ದ ಸಂಜಯ್ ಕೇವಿನ್ ಎಂಬುವನ ಜೊತೆ ಗೋವಾಕ್ಕೆ ಬಂದಿರುವ ವಿಚಾರ ಗೊತ್ತಾಗಿದೆ.

ರೋಶನಿ ಮತ್ತು ಸಂಜಯ್ ಕೇವಿನ್ ಪರಸ್ಪರ ಪ್ರೀತಿಸುತ್ತಿದ್ದರಂತೆ. ಮದುವೆಯಾಗಲು ಇಬ್ಬರು ನಿರ್ಧರಿಸಿದ್ದರಂತೆ. ಗೋವಾದಲ್ಲಿಯೇ ಮದುವೆಯಾಗಲು ನಿರ್ಧರಿಸಿ ಇಬ್ಬರು ಕೆಲ ದಿನಗಳ ಹಿಂದೆ ಗೋವಾಕ್ಕೆ ಬಂದಿದ್ದರಂತೆ. ಆದರೆ, ಇಬ್ಬರ ನಡುವೆ ಮನಸ್ತಾಪವಾಗಿದೆ. ಇದೇ ಕಾರಣದಿಂದ, ಪ್ರಿಯಕರ ಸಂಜಯ್ ಕೆವಿನ್ ಪ್ರೇಯಸಿ ರೋಶನಿಯನ್ನು ಕತ್ತು ಸೀಳಿ ಕೊಲೆ ಮಾಡಿ, ಈಗ ಸಿಕ್ಕಿ ಬಿದ್ದಿದ್ದಾನೆ.

ಜಾತಿಗಣತಿಯಲ್ಲಿ ಗ್ರಾಪಂ ಸದಸ್ಯರು, ಅಧಿಕಾರಿಗಳ ತೊಡಗಿಸಲು ಡಿಸಿಗೆ ಸೂಚನೆ ನೀಡುವಂತೆ ಸರ್ಕಾರಕ್ಕೆ ಮನವಿ

ಮೈಸೂರು, ಜೂ.18(ಎಂಕೆ)– ಕರ್ನಾಟಕದಲ್ಲಿ ನಡೆಸಲು ಉದ್ದೇಶಿಸಿರುವ ಸಾಮಾಜಿಕ-ಶೈಕ್ಷಣಿಕ ಗಣತಿಯ ನಿಖರತೆ ಹಾಗೂ ತ್ವರಿತ ಪ್ರಕ್ರಿಯೆಗಾಗಿ ರಾಜ್ಯದ ಎಲ್ಲಾ ಗ್ರಾಪಂ ಸದಸ್ಯರು, ಪಿಡಿಓ, ಕಾರ್ಯದರ್ಶಿ ಸೇರಿದಂತೆ ಇನ್ನಿತರೆ ಸಿಬ್ಬಂದಿಗಳನ್ನು ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳುವಂತೆ ಹಾಗೂ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡುವಂತೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.


ದಿನೇಶ್ ಗೂಳಿಗೌಡ

ಈ ಕುರಿತು ಸಿಎಂ, ಡಿಸಿಎಂ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, ರಾಜ್ಯದ ಜಾತಿ–ಸಮುದಾಯಗಳ ನಿಜವಾದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಯುವುದು ಸಾಮಾಜಿಕ-ಶೈಕ್ಷಣಿಕ ಗಣತಿ ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ. ಇದರಿಂದ ವೈಜ್ಞಾನಿಕವಾಗಿ ಮೀಸಲಾತಿ ಪರಿಷ್ಕರಿಸಲು ಹಾಗೂ ಕಲ್ಯಾಣ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ತಲುಪಿಸಲು ಸಹಾಯವಾಗುತ್ತದೆ. ಇದು ಸಂವಿಧಾನದ ಆಶಯದಂತೆ ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ. ಹಾಗಾಗಿ ಈಗ ನಿಗದಿತ ಅವಧಿಯಲ್ಲಿ ಈ ಸಮೀಕ್ಷೆ ಪೂರ್ಣಗೊಳಿಸಲು, ರಾಜ್ಯದಲ್ಲಿರುವ 5,950 ಗ್ರಾಪಂಗಳ 92.000 ಸದಸ್ಯರನ್ನು ಸಮೀಕ್ಷೆ ಕುರಿತು ಜನರಿಗೆ ಅರಿವು ಮೂಡಿಸಲು ಮತ್ತು ಸಹಕಾರ ಒದಗಿಸಲು ಬಳಸಿಕೊಳ್ಳುವುದು ಸೂಕ್ತವಾಗಿದೆ. ಜೊತೆಗೆ ಪಿಡಿಓ, ಕಾರ್ಯದರ್ಶಿ ಹಾಗೂ ಇನ್ನಿತರೆ ಸಿಬ್ಬಂದಿಯನ್ನು ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಪಾರದರ್ಶಕತೆ ಮತ್ತು ನಿಖರ–ವಸ್ತುನಿಷ್ಠ ದತ್ತಾಂಶವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಹಾಗೆಯೇ ಜನರಲ್ಲಿ ಸಮೀಕ್ಷೆ ಕುರಿತು ಜಾಗೃತಿ ಮೂಡಿಸಲು ವಿಶೇಷ ಗ್ರಾಮಸಭೆ ಮತ್ತು ವಾರ್ಡ್ ಸಭೆಗಳ ನಡೆಸುವಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಓಗಳಿಗೆ ಸೂಚನೆ ನೀಡುವಂತೆ ಪತ್ರದಲ್ಲಿ ಮನವಿ ಮಾಡಿರುವ ಅವರು, ಜಾಹೀರಾತು ನೀಡುವುದು, ಕರಪತ್ರಗಳನ್ನು ಹಂಚುವುದು. ಧ್ವನಿವರ್ಧಕಗಳ ಮೂಲಕ ಮಾಹಿತಿಯನ್ನು ಕೊಟ್ಟು ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಭಾಗಿಯಾಗುವಂತೆ ಮಾಡುವ ಮೂಲಕ ಸಮೀಕ್ಷೆಯನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

ಔಷಧೀಯ ಉದ್ಯಮಕ್ಕೆ ಸಂಬಂಧಿಸಿದ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಮೈಸೂರು, ಜೂ.18(ಜಿಎ)–ಮೈಸೂರಿನ ಬನ್ನಿಮಂಟಪ ರಸ್ತೆಯಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಪಿಎಚ್‌ಡಿ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಪಿಎಚ್‌ಡಿಸಿಸಿಐ) ಆರೋಗ್ಯ ಸಮಿತಿ, ಔಷಧೀಯ ಇಲಾಖೆ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ (ಜಿಐಐ), ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಜೆಎಸ್‌ಎಸ್‌ಎಚ್‌ಇಆರ್) ಮತ್ತು ಭಾರತೀಯ ಔಷಧ ಸಂಘ (ಐಪಿಎ) ಮೈಸೂರು ಶಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ರಾಷ್ಟ್ರೀಯ ಮಟ್ಟದ ಸಮ್ಮೇಳನಕ್ಕೆ ಭಾರತೀಯ ಔಷಧೀಯ ಸಂಘದ ಕರ್ನಾಟಕ ರಾಜ್ಯ ಶಾಖೆ ಅಧ್ಯಕ್ಷ ಡಾ.ಖಾಲಿದ್ ಅಹ್ಮದ್ ಖಾನ್ ಚಾಲನೆ ನೀಡಿದರು.


ಮೈಸೂರಿನ ಬನ್ನಿಮಂಟಪ ರಸ್ತೆಯಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಮಟ್ಟದ ಸಮ್ಮೇಳನಕ್ಕೆ ಭಾರತೀಯ ಔಷಧೀಯ ಸಂಘದ ಕರ್ನಾಟಕ ರಾಜ್ಯ ಶಾಖೆ ಅಧ್ಯಕ್ಷ ಡಾ.ಖಾಲಿದ್ ಅಹ್ಮದ್ ಖಾನ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪರಿಷ್ಕೃತ ಗುಣಮಟ್ಟದ ಚೌಕಟ್ಟನ್ನು ಅನುಷ್ಠಾನಗೊಳಿಸುವಲ್ಲಿ ಒಳಗೊಂಡಿರುವ ಆರ್ಥಿಕ ಹೊರೆಯಿಂದಾಗಿ, ಎಂಎಸ್‌ಎಂಇ ಸಂಸ್ಥೆಗಳಿಗೆ ಡಿಸೆಂಬರ್ 2025ರವರೆಗೆ ಸಮಯ ನೀಡಲಾಗಿದೆ 250 ಕೋಟಿ ಇಲ್ಲವೇ ಅಥವಾ ಅದಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಹೊಂದಿರುವ ಸಣ್ಣ ಮತ್ತು ಮಧ್ಯಮ ಔಷಧ ಉದ್ಯಮಗಳಿಗೆ ಪರಿಷ್ಕೃತ ವೇಳಾಪಟ್ಟಿಯನ್ನು ಉತ್ತಮ ಉತ್ಪಾದನಾ ಅಭ್ಯಾಸಗಳು (ಜಿಎಂಪಿ)– ಅನುಷ್ಠಾನಗೊಳಿಸುವ ಗಡುವನ್ನು ಸರ್ಕಾರ ಈ ವರ್ಷದ ಅಂತ್ಯದವರೆಗೆ ವಿಸ್ತರಿಸಿದೆ ಎಂದು ತಿಳಿಸಿದರು.

250 ಕೋಟಿ ರೂ.ಗಿಂತ ಹೆಚ್ಚಿನ ವಹಿವಾಟು ಹೊಂದಿರುವ ಉದ್ಯಮ ಸಂಸ್ಥೆಗಳು ಮತ್ತು ಹೊಸದಾಗಿ ಸ್ಥಾಪಿಸಲಾದ ಸ್ಥಾವರಗಳು ಪರಿಷ್ಕೃತ ವೇಳಾಪಟ್ಟಿ ಅನ್ನು ತಕ್ಷಣವೇ ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಮಾರ್ಗಸೂಚಿಗಳು ಡಬ್ಲ್ಯೂಎಚ್‌ಒ ಮತ್ತು ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿರುತ್ತವೆ. ಒಟ್ಟು ಗುಣಮಟ್ಟ ನಿರ್ವಹಣೆ ಮತ್ತು ಬಲವಾದ ಔಷಧೀಯ ವ್ಯವಸ್ಥೆಗಳಿಗೆ ಒತ್ತು ನೀಡುತ್ತವೆ ಎಂದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಆರ್‌ಪಿಟಿಯುಎಎಸ್ ಅನ್ನು ಪ್ರಾರಂಭಿಸಿದ್ದಕ್ಕಾಗಿ ಔಷಧ ಇಲಾಖೆಯನ್ನು ಶ್ಲಾಘಿಸಿ, ಜಿಎಂಪಿಯನ್ನು ನಿಯಂತ್ರಣವಾಗಿ ಪರಿಗಣಿಸದೆ ಮೂಲಭೂತ ಜವಾಬ್ದಾರಿಯಾಗಿ ಪರಿಗಣಿಸುವಂತೆ ಉದ್ಯಮವನ್ನು ಒತ್ತಾಯಿಸಿದರು.

ಕರ್ನಾಟಕದ ಮಾಜಿ ಔಷಧ ನಿಯಂತ್ರಕ ಅಮರೇಶ್ ತುಂಬಿಗಿ, ಪರಿಷ್ಕೃತ ವೇಳಾಪಟ್ಟಿ ಅಡಿಯಲ್ಲಿ ತಪಾಸಣೆ ಕಾರ್ಯವಿಧಾನಗಳನ್ನು ಮತ್ತು ನಿಯಂತ್ರಕ ಪ್ರಕ್ರಿಯೆಗಳು ಹೇಗೆ ವಿಕಸನಗೊಂಡಿವೆ ಎಂಬುದನ್ನು ವಿವರಿಸಿದರು. ಸಮ್ಮೇಳನದಲ್ಲಿ ಐಪಿಎ ಮೈಸೂರು ಶಾಖೆ ಸದಸ್ಯರು, ವಿದ್ಯಾರ್ಥಿಗಳು ಮತ್ತು ಉದ್ಯಮಿಗಳು ಸೇರಿದಂತೆ 100ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್ ಕುಮಾರ್, ಪಿಎಚ್‌ಡಿಸಿಸಿಐನ ಜಂಟಿ ಕಾರ್ಯದರ್ಶಿ ಜತಿನ್ ನಾಗ್ಪಾಲ್, ಮೈಸೂರು ಆರ್‌ಸಿ2 ಫಾರ್ಮಾ ಸೆಲ್ಯೂಷನ್ಸ್ ಸಂಸ್ಥಾಪಕ ಡಾ.ಹೆಚ್.ವಿ.ರಘುನಂದನ್, ಔಷಧೀಯ ಇಲಾಖೆ ಅಧೀನ ಕಾರ್ಯದರ್ಶಿ ಧರ್ಮೇಂದ್ರಕುಮಾರ್ ಯಾದವ್, ಐಪಿಎ ಮೈಸೂರು ಕಾರ್ಯದರ್ಶಿ ಡಾ.ಆರ್.ಎಸ್.ಸವಿತಾ ಇದ್ದರು.

ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆ ತೆರೆಯಲು ಕೆಎಂಎಫ್‌ಗೆ ಸೂಚನೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಹಿತಿ

ಬೆಂಗಳೂರು, ಜೂ. 18(ಕೆಎಂಶಿ)– ಮೆಟ್ರೋ ನಿಲ್ದಾಣಗಳಲ್ಲಿ ಉತ್ಪನ್ನಗಳ ಮಾರಾಟ ಮಳಿಗೆ ತೆರೆಯಲು ಬಿಎಂಆರ್‌ಸಿಎಲ್‌ಗೆ ಅರ್ಜಿ ಹಾಕುವಂತೆ ಕರ್ನಾಟಕ ಹಾಲು ಒಕ್ಕೂಟಕ್ಕೆ (ಕೆಎಂಎಫ್) ಸೂಚಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಮೆಟ್ರೋ ನಿಲ್ದಾಣದ 8 ಕಡೆಗಳಲ್ಲಿ ನಂದಿನಿ ಮಳಿಗೆ ತೆರೆಯಲು ಅವಕಾಶ ನೀಡುವಂತೆ ಬಿಎಂಆರ್‌ಸಿಎಲ್‌ಗೆ ನಿರ್ದೇಶನ ನೀಡಲಾಗಿದೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆ ತೆರೆಯಲು ಬಿಎಂಆರ್‌ಸಿಎಲ್ ಟೆಂಡರ್ ಕರೆದಿತ್ತು ಅಮೂಲ್ ಹೊರತುಪಡಿಸಿ ಬೇರೆ ಯಾರೂ ಅರ್ಜಿ ಹಾಕಿರಲಿಲ್ಲ, ಕೆಎಂಎಫ್ ಸಹ ಅರ್ಜಿ ಹಾಕಿರಲಿಲ್ಲ, ಅರ್ಜಿ ಹಾಕುವಂತೆ ಸೂಚಿಸಲಾಗಿದೆ ಎಂದರು.

ಮೆಟ್ರೋದ 10 ಕಡೆಗಳಲ್ಲಿ ಮಳಿಗೆ ಸ್ಥಾಪನೆಗೆ ಜಾಗತಿಕ ಟೆಂಡರ್ ಕರೆಯಲಾಗಿತ್ತು, ಅಮೂಲ್ ಸಂಸ್ಥೆ ಅರ್ಜಿ ಹಾಕಿ ಎರಡು ಕಡೆ ಮಳಿಗೆ ತೆರೆದಿದೆ, ಈ ಮಳಿಗೆಗಳನ್ನು ಮುಚ್ಚಿಸುವುದು ಸರಿಯಲ್ಲ, ಉಳಿದ 8 ಸ್ಥಳಗಳಲ್ಲಿ ಕೆಎಂಎಫ್ ಮಳಿಗೆಗೆ ಅವಕಾಶ ನೀಡಿ ಎಂಬ ಸೂಚನೆ ನೀಡಿದ್ದೇನೆ.




ಬೆಂಗಳೂರು ನಗರದಲ್ಲಿ ಪಕ್ಷ ಸಂಘಟನೆ ಹಾಗೂ ಪಾಲಿಕೆ ಚುನಾವಣೆ ಕುರಿತು ಕಾಂಗ್ರೆಸ್ ಶಾಸಕರ ಜೊತೆ ಚರ್ಚಿಸಲಾಗಿದೆ, ಗ್ರೇಟರ್ ಬೆಂಗಳೂರಿನಲ್ಲಿ ಎಷ್ಟು ಪಾಲಿಕೆಗಳನ್ನು ರಚನೆ ಮಾಡಬೇಕೆಂಬ ವಿಚಾರ ಚರ್ಚಿಸಿದ್ದು, ವಿರೋಧ ಪಕ್ಷದ ನಾಯಕರೊಂದಿಗೆ ಮಾತುಕತೆ ಬಾಕಿ ಇದೆ, ಅವರ ವಿಶ್ವಾಸ ಪಡೆದು ತೀರ್ಮಾನ ಮಾಡಲಾಗುವುದು. ಸ್ವಚ್ಛ ಬೆಂಗಳೂರು ಕಾರ್ಯಕ್ರಮದಡಿ ಕಸ ವಿಲೇವಾರಿಗೆ ಸಹಾಯವಾಣಿ ಸಂಖ್ಯೆ ಬಿಡುಗಡೆ ಮಾಡಿದ್ದು, ಸಾರ್ವಜನಿಕರು ಕಸ ಇರುವ ಜಾಗದ ಫೋಟೋ ಈ ಸಂಖ್ಯೆಗೆ ರವಾನಿಸಿದರೆ ಒಂದು ವಾರದಲ್ಲಿ ಕಸ ವಿಲೇವಾರಿ ಮಾಡಲಾಗುವುದು.

ರಸ್ತೆ ಗುಂಡಿ ಮುಚ್ಚುವ ವಿಚಾರವಾಗಿ ಶಾಸಕರು ತಮ್ಮ ಕ್ಷೇತ್ರಗಳ ವಾರ್ಡ್‌ಗಳಲ್ಲಿ ಗಮನಹರಿಸಬೇಕು, ಕಾಮಗಾರಿಗೆ ಅನುದಾನ ನೀಡಲಾಗುತ್ತಿದೆ. ಬೆಂಗಳೂರಿನಲ್ಲಿ ಆಸ್ತಿ ಖಾತಾ ದಾಖಲೆ ಆಂದೋಲನ ನಡೆಯುತ್ತಿದ್ದು, ಜುಲೈನಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಕ್ಷೇತ್ರದಲ್ಲಿ ಪ್ರಾಯೋಗಿಕ ಯೋಜನೆ ಕೈಗೊಳ್ಳಲಾಗುವುದು, 25 ಸಾವಿರ ಆಸ್ತಿಗಳ ಖಾತಾ ದಾಖಲೆ ಸಿದ್ಧಗೊಂಡಿದ್ದು, ಇಡೀ ತಿಂಗಳು ಆಸ್ತಿ ಇ–ಖಾತಾ ದಾಖಲೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಲಾಗುವುದು.

ಬೆಂಗಳೂರಿನಲ್ಲಿ 25 ಲಕ್ಷ ಮನೆ ಆಸ್ತಿಗಳಿದ್ದು, ಈ ಪೈಕಿ 5 ಲಕ್ಷ ಮಂದಿ ದಾಖಲೆ ಅಪ್‌ಲೋಡ್ ಮಾಡಿದ್ದು, ಇನ್ನೂ 20 ಲಕ್ಷ ಆಸ್ತಿಗಳ ದಾಖಲೆ ಬಾಕಿ ಇದೆ. ಬಿ–ಖಾತಾ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿದ್ದು, ಕಾನೂನು ಆಯಾಮಗಳನ್ನು ಪರಿಶೀಲಿಸಿ ಅಧಿಕೃತ ಘೋಷಣೆ ಮಾಡಲಾಗುವುದು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಕೃತಿ ಬಿಡುಗಡೆ...


'ಬಡವರ ಬಂಧು ಗಂಧನಹಳ್ಳಿ ಎಂ.ಬಸವರಾಜು' ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಈ ವೇಳೆ ಸಚಿವರಾದ ಡಾ.ಎಂ.ಸಿ.ಸುಧಾಕರ್, ಭೈರತಿ ಸುರೇಶ್, ಈಶ್ವರ ಖಂಡ್ರೆ, ಶಾಸಕ ಡಿ.ರವಿಶಂಕರ್, ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಡಿ.ಬನುಮಯ್ಯ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ.ಕೆ.ಮೂರ್ತಿ, ಲೇಖಕ ಡಾ.ಸಿ.ಡಿ.ಪರಶುರಾಮ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ಕಾರ್ಯಾಗಾರ

ಮೈಸೂರು,ಜೂ.18– ಮೈಸೂರು ವಿಶ್ವವಿದ್ಯಾನಿಲಯ, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು, ಮಾನವ ಅಭಿವೃದ್ಧಿ ಮತ್ತು ಕಲ್ಯಾಣ ಸಂಘ ಮತ್ತು ಭಾರತೀಯ ಗೃಹ ವಿಜ್ಞಾನ ಸಂಘ, ಮೈಸೂರು ಪ್ರಾದೇಶಿಕ ಅಧ್ಯಯನ ಜಂಟಿಯಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಜೂ.19ರಂದು ಬೆಳಗ್ಗೆ 9 ಗಂಟೆಗೆ ಮಾನಸಗಂಗೋತ್ರಿಯ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್–1 ಅಲ್ಲಿ ಹದಿಹರೆಯದಲ್ಲಿ ಅಪಾಯಗಳು ಮತ್ತು ಸ್ಥಿತಿಸ್ಥಾಪಕತ್ವದ ಕವಲುದಾರಿಯಲ್ಲಿ ಜೀವನ ಕೌಶಲಗಳು ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿದೆ. ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ಮಂಜುನಾಥ್ ಕಾರ್ಯಾಗಾರ ಉದ್ಘಾಟಿಸಿ ಭಾಷಣ ಮಾಡಲಿದ್ದಾರೆ. ಹೆಚ್‌ಡಿಡಬ್ಲ್ಯೂಎ, ಹೆಚ್‌ಎಸ್‌ಎಐ–ಎಂಆರ್‌ಸಿ, ಆಹಾರ ವಿಜ್ಞಾನ–ಪೋಷಣೆ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ಕೋಮಲ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಗೌರವ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಎನ್.ಆರ್.ಕ್ಷೇತ್ರ ವ್ಯಾಪ್ತಿಯಲ್ಲಿ ಕಿಮೋಥೆರಪಿ ಕೇಂದ್ರ ಸ್ಥಾಪನೆಗೆ ಕ್ರಮ

ಶಾಸಕ ತನ್ವೀರ್ ಸೇಠ್‌ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಮೈಸೂರು, ಜೂ.18(ಎಂಕೆ)– ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಿಮೋಥೆರಪಿ ಕೇಂದ್ರ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ. 2025–26ನೇ ರಾಜ್ಯದ ಆಯವ್ಯಯ ಮಂಡನೆಯಲ್ಲಿ ಮುಖ್ಯಮಂತ್ರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಬೆಂಗಳೂರಿನ ಕಿದ್ವಾಯಿ ಮೆಮೊರಿಯಲ್ ಇನ್ಸ್ಟಿಟ್ಯೂಟ್ ಆಫ್ ಆಂಕೋಲಜಿ ಸಹಯೋಗದೊಂದಿಗೆ ಡೇ ಕೇರ್ ಕಿಮೋಥೆರಪಿ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಣೆ ಮಾಡಿದ್ದಾರೆ. ಮೈಸೂರು ನಗರದಲ್ಲಿ ಸುಮಾರು 3 ಸಾವಿರ ಹಾಸಿಗೆಗಳ ಎಲ್ಲಾ ವಿಧದ ಸರ್ಕಾರಿ ಆಸ್ಪತ್ರೆಗಳು ಒಂದೇ ಭಾಗದಲ್ಲಿ ಕೇಂದ್ರೀಕೃತವಾಗಿದ್ದು, ನರಸಿಂಹರಾಜ ಕ್ಷೇತ್ರದ ಸಾರ್ವಜನಿಕರು ಸರ್ಕಾರದ ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಡೇ ಕೇರ್ ಕಿಮೋಥೆರಪಿ ಕೇಂದ್ರ ಸ್ಥಾಪಿಸುವಂತೆ ಶಾಸಕ ತನ್ವೀರ್ ಸೇಠ್ ಅವರು ಮಾಡಿದ ಮನವಿಗೆ ಸ್ಪಂದಿಸಿರುವ ಆರೋಗ್ಯ ಸಚಿವರು, ಮುಂದಿನ ದಿನಗಳಲ್ಲಿ ಎನ್.ಆರ್.ಕ್ಷೇತ್ರ ವ್ಯಾಪ್ತಿಯಲ್ಲಿ ಶಾಶ್ವತ ಡೇ ಕೇರ್ ಕಿಮೋಥೆರಪಿ ಕೇಂದ್ರ ಸ್ಥಾಪನೆಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.



ರಾಷ್ಟ್ರೀಯ ಪ್ರಧಾನಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.18– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರದ ವತಿಯಿಂದ 2025ನೇ ಸಾಲಿನ ರಾಷ್ಟ್ರೀಯ ಪ್ರಧಾನಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗಾಗಿ ರಾಷ್ಟ್ರದಾದ್ಯಂತ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

31.07.2025ಕ್ಕೆ ಅನ್ವಯವಾಗುವಂತೆ 5 ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿರುವ ಮಕ್ಕಳು ಜಿಲ್ಲೆಯಲ್ಲಿ ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ ಹಾಗೂ ಕ್ರೀಡೆ, ಸಮಾಜ ಸೇವೆ, ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಕಲೆ, ಸಂಸ್ಕೃತಿ ಮತ್ತು ನೂತನ ಆವಿಷ್ಕಾರಗಳನ್ನು ಮಾಡಿ ಉತ್ತಮ ಸಾಧನೆ ಮಾಡಿರುವ ಎಲ್ಲಾ ಮಕ್ಕಳು ಅರ್ಹರಾಗಿರುತ್ತಾರೆ. ಆಸಕ್ತರು ಜುಲೈ 31 ರೊಳಗೆ https://awards.gov.in ಮೂಲಕ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ನಂ.ಸಿಎ–15:17, ಮೊದಲನೇ ಮಹಡಿ, ಅಂಜನಾದ್ರಿ ಮುಖ್ಯ ರಸ್ತೆ, ವಿಜಯನಗರ 4ನೇ ಹಂತ, 2ನೇ ಫೇಸ್, ಮೈಸೂರು–32 ದೂ. ಸಂಖ್ಯೆ:0821–2543003 ಇ–ಮೇಲ್: dcpumysore@gmail.com ಅನ್ನು ಸಂಪರ್ಕಿಸಿ.

ಸಮಾಜಮುಖಿಯಾಗಿ ಎನ್.ಭಾಸ್ಕರ್ ಹುಟ್ಟುಹಬ್ಬ ಆಚರಣೆ

ಸರ್ಕಾರಿ ಶಾಲಾ ಮಕ್ಕಳಿಗೆ ಸ್ವೆಟರ್, ಪತ್ರಕರ್ತರಿಗೆ ಜರ್ಕಿನ್ ವಿತರಣೆ; ಹಿತೈಷಿಗಳು, ಅಭಿಮಾನಿಗಳಿಂದ ಅಭಿನಂದನೆ




ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರು ತಮ್ಮ 53ನೇ ಹುಟ್ಟುಹಬ್ಬವನ್ನು ಸಮಾಜಮುಖಿ ಸೇವಾ ಕಾರ್ಯಗಳೊಂದಿಗೆ ಆಚರಿಸಿಕೊಂಡರು. ಈ ವೇಳೆ ಹಿತೈಷಿಗಳು ಅವರನ್ನು ಅಭಿನಂದಿಸಿದರು.

ಮೈಸೂರು: ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ, ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅವರು ತಮ್ಮ 53ನೇ ಹುಟ್ಟುಹಬ್ಬವನ್ನು ಸಮಾಜಮುಖಿಯಾಗಿ ಆಚರಿಸಿಕೊಂಡರು.

ಎನ್.ಭಾಸ್ಕರ್ ಸ್ನೇಹ ಬಳಗದ ವತಿಯಿಂದ ಅಶೋಕಪುರಂ ಎನ್‌ಟಿಎಂ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ 300ಕ್ಕೂ ಹೆಚ್ಚು ಶಾಲಾ ಮಕ್ಕಳಿಗೆ ಸ್ವೆಟರ್ ಮತ್ತು ಮೈಸೂರಿನ ಆಯ್ದ ಪತ್ರಕರ್ತರಿಗೆ ಜರ್ಕಿನ್ ವಿತರಿಸಿದರು.

ಎನ್.ಭಾಸ್ಕರ್ ಅವರ ಸ್ನೇಹಿತರು, ಹಿತೈಷಿಗಳು, ಅಭಿಮಾನಿಗಳು, ವಕೀಲರು, ರಾಜಕೀಯ ನಾಯಕರು ಬೃಹತ್ ಹಾರ ಹಾಕಿ ಅಭಿನಂದಿಸಿದರು. ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಅದ್ಧೂರಿಯಾಗಿ ಹುಟ್ಟುಹಬ್ಬ ಆಚರಿಸಿಕೊಂಡರು.

ಬಳಿಕ ಮಾತನಾಡಿದ ಎನ್.ಭಾಸ್ಕರ್, ನಾನು ಓದಿದ ಶಾಲೆ ಆವರಣದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡಿರುವುದು ಖುಷಿ ತಂದಿದೆ. ನಮ್ಮ ನಾಯಕರಾದ ವಿ.ಶ್ರೀನಿವಾಸಪ್ರಸಾದ್ ಅವರು ನಿಧನರಾದ ಬಳಿಕ ಎನ್‌ಟಿಎಂ ಶಾಲೆಗೆ ಕೊಡುಗೆ ನೀಡಬೇಕೆಂಬ ಆಸೆ ಇತ್ತು. ಆ ಆಸೆಯನ್ನು ತನ್ನ ಹುಟ್ಟುಹಬ್ಬದ ನಿಮಿತ್ತ ಮಕ್ಕಳಿಗೆ ಸ್ವೆಟರ್ ವಿತರಿಸುವ ಮೂಲಕ ಈಡೇರಿಸಿಕೊಂಡಿದ್ದೇನೆ ಎಂದರು. ಮುದ್ರಣ ಮತ್ತು ದೃಶ್ಯ ಮಾಧ್ಯಮಗಳ ಪತ್ರಕರ್ತರು ಮಳೆ, ಗಾಳಿ, ಚಳಿ ಎನ್ನದೇ ಕೆಲಸ ಮಾಡುತ್ತಾರೆ. ಮಳೆಗಾಲ–ಚಳಿಗಾಲದಲ್ಲಿ ಅನುಕೂಲವಾಗುವಂತೆ ಕೆಲವು ಪತ್ರಕರ್ತರಿಗೆ ಜರ್ಕಿನ್ ವಿತರಣೆ ಮಾಡಿದ್ದೇನೆ ಎಂದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ,

> "ಶಾಲಾ ಮಕ್ಕಳೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡದ್ದು ಸಂತಸ ತಂದಿದೆ. ವಕೀಲರು, ಹಿತೈಷಿಗಳು, ಸ್ನೇಹಿತರು, ವಿವಿಧ ಪಕ್ಷಗಳ ರಾಜಕೀಯ ಮುಖಂಡರ ಪಾಲ್ಗೊಂಡು ಶುಭ ಹಾರೈಸಿದ್ದು, ಅವರಿಗೆಲ್ಲಾ ಆಭಾರಿಯಾಗಿದ್ದೇನೆ.
> –ಎನ್.ಭಾಸ್ಕರ್

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಮುಖಂಡರಾದ ವಿ.ರಾಮಸ್ವಾಮಿ, ಭರತ್ ರಾಮಸ್ವಾಮಿ, ಯೋಗೇಶ್ ಉಪ್ಪಾರ್, ಮೋಹನ್‌ಕುಮಾರ್ ಗೌಡ, ರೇವಣ್ಣ, ಪ್ರಕಾಶ್, ದ್ಯಾವಪ್ಪನಾಯಕ, ಹೆಡತಲೆ ಮಂಜುನಾಥ್, ಉಮೇಶ್, ಸೋಮಶೇಖರ್, ಕಾಂತರಾಜ್ ಅರಸ್, ಲೇಖಕರಾದ ಸಿಹರ ಕುಮಾರ, ಸಿದ್ದಸ್ವಾಮಿ, ಎಂ.ವಿ ಚಂದ್ರಶೇಖರ್, ಸುರೇಶ್ ಪಾಳ್ಯ, ಹುಣಸೂರು ಬಸವಣ್ಣ, ರವೀಂದ್ರ, ಎನ್‌ಟಿಎಂ ಶಾಲೆಯ ಮುಖ್ಯೋಪಾಧ್ಯಾಯ ಸೋಮಶೇಖರ್, ಸೋಮಣ್ಣ, ಬಸವರಾಜು, ವಿಕ್ರಾಂತ್ ಪಿ.ದೇವೇಗೌಡ, ವಿಶ್ವೇಶ್ವರ, ಈಶ್ವರ್ ಅತಿಥಿಗಳಾಗಿ ಭಾಗವಹಿಸಿದ್ದರು. ಎಡಿಜಿಪಿ ತಿಮ್ಮಯ್ಯ ಸ್ವಾಗತಿಸಿದರು. ಗಾಯಕ ಅಮ್ಮ ರಾಮಚಂದ್ರ ಭೀಮಗೀತೆ ಹಾಡಿದರು.

ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಎ.ಆರ್.ಕಾಂತರಾಜ್, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಪುಟ್ಟರಸ, ಜಿಲ್ಲಾಧ್ಯಕ್ಷ ಕೆ.ಗಂಗಾಧರ್, ನಗರ ಘಟಕದ ಅಧ್ಯಕ್ಷ ಜೆ.ಪ್ರಭು, ಆದಿಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಕೆ.ಮುರಳಿ, ಕಾರ್ಯದರ್ಶಿ ಎಂ.ಕುಮಾರಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ, ಜಿಲ್ಲಾ ಕಾಂಗ್ರೆಸ್ ರೈತ ಘಟಕದ ಅಧ್ಯಕ್ಷ ಜಿ.ಮಹಾದೇವ, ಮೈಸೂರು ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಚರಣ್‌ರಾಜ್, ಯುವ ಮುಖಂಡರಾದ ನಿತಿನ್ ಪುಟ್ಟಸ್ವಾಮಿ, ಸದಾನಂದ, ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಹಾಜರಿದ್ದರು.

ದೇಶ – ವಿದೇಶ

ಇರಾನ್‌ನಲ್ಲಿರುವ ಭಾರತೀಯರ ಸ್ಥಳಾಂತರಕ್ಕೆ 'ಆಪರೇಷನ್ ಸಿಂಧು'

ನವದೆಹಲಿ: ಇರಾನ್ ಮತ್ತು ಇಸ್ರೇಲ್ ನಡುವೆ ಸಂಘರ್ಷ ತೀವ್ರಗೊಂಡ ಹಿನ್ನೆಲೆ ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳನ್ನು ಸ್ಥಳಾಂತರಗೊಳಿಸಲು 'ಆಪರೇಷನ್ ಸಿಂಧು' ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ(ಎಂಇಎ) ತಿಳಿಸಿದೆ. ವಿದೇಶಗಳಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಭಾರತವು ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ಅದು ತಿಳಿಸಿದೆ.



ಜೂನ್ 17ರಂದು ಇರಾನ್ ಮತ್ತು ಅರ್ಮೇನಿಯಾದಲ್ಲಿರುವ ನಮ್ಮ ನಿಯೋಗಗಳ ಮೇಲ್ವಿಚಾರಣೆಯಲ್ಲಿ ಉತ್ತರ ಇರಾನ್‌ನಿಂದ ಅರ್ಮೇನಿಯಾಗೆ ಬಂದ 110 ವಿದ್ಯಾರ್ಥಿಗಳನ್ನು ಸ್ಥಳಾಂತರಿಸಲಾಗಿದೆ. ವಿಶೇಷ ವಿಮಾನದಲ್ಲಿ ಅವರು ಯೆರೆವಾನ್‌ನಿಂದ ಹೊರಟಿದ್ದು, ಜೂನ್ 19ರ ಮುಂಜಾನೆ ದೆಹಲಿಗೆ ಆಗಮಿಸಲಿದ್ದಾರೆ ಎಂದು ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಇರಾನ್‌ನಲ್ಲಿ 4 ಸಾವಿರಕ್ಕೂ ಹೆಚ್ಚು ಭಾರತೀಯ ಪ್ರಜೆಗಳಿದ್ದು, ಅವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು.

ರುದ್ರಪ್ರಯಾಗದಲ್ಲಿ ಭೂಕುಸಿತ: ಇಬ್ಬರ ಸಾವು

ರುದ್ರಪ್ರಯಾಗ(ಉತ್ತರಾಖಂಡ್): ಕೇದಾರನಾಥದ ಜಂಗಲ್‌ಚಟ್ಟಿ ಘಾಟ್‌ನ ಚಾರಣ ಮಾರ್ಗದಲ್ಲಿ ಬುಧವಾರ ಸಂಭವಿಸಿದ ಭೂಕುಸಿತದಲ್ಲಿ, ಜನರನ್ನು ಡೋಲಿಯಲ್ಲಿ ಹೊತ್ತು ಸಾಗುವಾಗ ಇಬ್ಬರು ಮೃತಪಟ್ಟಿದ್ದು, ಯಾತ್ರಿಯೊಬ್ಬರು ಸೇರಿ ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಡೋಡಾ ಜಿಲ್ಲೆಯ ನಿತಿನ್‌ಕುಮಾರ್ ಮತ್ತು ಚಂದ್ರಶೇಖರ್ ಮೃತರು. ಗುಜರಾತ್‌ನ ಭಾವನಗರದ ಯಾತ್ರಿಕ ಆಕಾಶ್ ಚಿಟ್ರಿಯಾ, ಜಮ್ಮು ಮತ್ತು ಕಾಶ್ಮೀರದ ಡೋಲಿ ಹೊರುವ ಸಂದೀಪ್‌ಕುಮಾರ್, ನಿತಿನ್ ಮನ್ಹಾಸ್ ಗಾಯಗೊಂಡವರು. ಬುಧವಾರ ಬೆಳಿಗ್ಗೆ 11.20ರ ಸುಮಾರಿಗೆ ಬೆಟ್ಟ ಪ್ರದೇಶದಿಂದ ಉರುಳಿ ಬಂದ ಬಂಡೆಗಳು ಅಪ್ಪಳಿಸಿದ್ದರಿಂದ ಸಾವು–ನೋವು ಸಂಭವಿಸಿದೆ. ಪೊಲೀಸ್ ನಿಗಾದಲ್ಲಿ ಯಾತ್ರೆ ಮುಂದುವರೆದಿದೆ ಎಂದು ರುದ್ರಪ್ರಯಾಗ ಎಸ್‌ಪಿ ಅಕ್ಷಯ್ ಪ್ರಹ್ಲಾದ್ ಕೊಂಡೆ ತಿಳಿಸಿದ್ದಾರೆ.



ಕ್ರೊವೇಷ್ಯಾಕ್ಕೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ

ಝಾಗ್ರೆಬ್: ಮೂರು ರಾಷ್ಟ್ರಗಳ ಪ್ರವಾಸದ ಕೊನೆಯ ಹಂತವಾಗಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಕ್ರೊವೇಷ್ಯಾಕ್ಕೆ ಭೇಟಿ ನೀಡಿದ್ದಾರೆ. ಆ ಮೂಲಕ ಈ ದೇಶಕ್ಕೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆಗೆ ಮೋದಿ ಅವರದ್ದಾಗಿದೆ. ಕ್ರೊವೇಷ್ಯಾ ಗಣರಾಜ್ಯಕ್ಕೆ ನನ್ನ ಭೇಟಿ ಮತ್ತು ಅಧ್ಯಕ್ಷ ಜೋರನ್ ಮಿಲನೋವಿಕ್, ಪ್ರಧಾನಿ ಆಂಡ್ರೆಜ್ ಪ್ಲೆಂಕೋವಿಕ್ ಅವರೊಂದಿಗಿನ ಸಭೆಗಳನ್ನು ಎದುರು ನೋಡುತ್ತಿದ್ದೇನೆ ಎಂದು ಮೋದಿ ನವದೆಹಲಿಯಿಂದ ನಿರ್ಗಮಿಸುವ ಮೊದಲು ತಿಳಿಸಿದ್ದರು.



ಉಭಯ ದೇಶಗಳು ಶತಮಾನಗಳಷ್ಟು ಹಳೆಯದಾದ ನಿಕಟ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿವೆ. ಕ್ರೊವೇಷ್ಯಾಕ್ಕೆ ಭಾರತೀಯ ಪ್ರಧಾನ ಮಂತ್ರಿಯೊಬ್ಬರ ಮೊದಲ ಭೇಟಿಯಾಗಿರುವುದರಿಂದ, ಪರಸ್ಪರ ಆಸಕ್ತಿಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರಕ್ಕೆ ಇದು ಹೊಸ ಮಾರ್ಗಗಳನ್ನು ತೆರೆಯುತ್ತದೆ' ಎಂದು ಹೇಳಿದ್ದರು. ಕ್ರೊವೇಷ್ಯಾಕ್ಕೆ ಮುನ್ನ ಕೆನಡಾಕ್ಕೆ ಭೇಟಿ ನೀಡಿದ್ದ ಮೋದಿ ಅವರು ಅಲ್ಲಿ ಜಿ7 ಶೃಂಗಸಭೆಯಲ್ಲಿ ಭಾಗಿಯಾಗಿದ್ದಾರೆ. ಕೆನಡಾ ಪ್ರಧಾನಿ ಕಾರ್ನಿ ಸೇರಿದಂತೆ ಪ್ರಮುಖ ಜಾಗತಿಕ ನಾಯಕರೊಂದಿಗೆ ಭದ್ರತೆ, ತಂತ್ರಜ್ಞಾನ, ನಾವೀನ್ಯತೆ ಕುರಿತ ಪ್ರಮುಖ ವಿಷಯಗಳನ್ನು ಚರ್ಚಿಸಿದ್ದಾರೆ. ಕೆನಡಾ ಭೇಟಿಗೆ ಮೊದಲು ಮೋದಿ ಸೈಪ್ರಸ್‌ಗೆ ಭೇಟಿ ನೀಡಿದ್ದರು.

ಗುಜರಾತ್‌ನಲ್ಲಿ ಭಾರಿ ಮಳೆ: 22 ಮಂದಿ ಸಾವು

ಗಾಂಧಿನಗರ: ಗುಜರಾತ್‌ನ ಬೊಟಾಡ್ ಜಿಲ್ಲೆಯಲ್ಲಿ 9 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಕಾರು ನದಿಯಲ್ಲಿ ಕೊಚ್ಚಿ ಹೋದ ನಂತರ ಇಂದು ಒಂದೇ ದಿನದಲ್ಲಿ 4 ಜನರು ಸಾವನ್ನಪ್ಪಿದ್ದಾರೆ ಮತ್ತು ಮೂವರು ನಾಪತ್ತೆಯಾಗಿದ್ದಾರೆ ಎಂದು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾರು ಅಪಘಾತದಲ್ಲಿ ಇಬ್ಬರು ಪ್ರಯಾಣಿಕರನ್ನು ರಕ್ಷಿಸಲಾಗಿದೆ. ಇನ್ನೂ ತೀವ್ರ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಮಂಗಳವಾರ ಗುಜರಾತ್ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಮಳೆಗೆ ಸಂಬಂಧಿಸಿದ ವಿವಿಧ ಘಟನೆಗಳಲ್ಲಿ 18 ಜನರು ಸಾವನ್ನಪ್ಪಿದ್ದು, ಇದೀಗ ಸಾವಿನ ಸಂಖ್ಯೆ 22ಕ್ಕೆ ಏರಿಕೆಯಾಗಿದೆ. ಸೌರಾಷ್ಟ್ರ ಮತ್ತು ಹತ್ತಿರದ ಪ್ರದೇಶಗಳಲ್ಲಿ ಭಾರಿ ಮಳೆಯು ವ್ಯಾಪಕ ಪ್ರವಾಹಕ್ಕೆ ಕಾರಣವಾಗಿದೆ. ಬಲವಾದ ಪ್ರವಾಹದಿಂದ ನಿವಾಸಿಗಳು ಕೊಚ್ಚಿ ಹೋಗುತ್ತಿರುವುದನ್ನು ತೋರಿಸುವ ಆತಂಕಕಾರಿ ದೃಶ್ಯಗಳು ಕಂಡುಬರುತ್ತಿವೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಅಧಿಕಾರಿಗಳು ಜನರನ್ನು ತುರ್ತು ಸ್ಥಳಾಂತರಿಸುವ ಪ್ರಯತ್ನಗಳನ್ನು ಪ್ರಾರಂಭಿಸಿದ್ದಾರೆ. ಜೀವಗಳನ್ನು ಉಳಿಸುವುದು, ಆಸ್ತಿಯನ್ನು ರಕ್ಷಿಸುವುದು ಮತ್ತು ಅಗತ್ಯ ಸಾಮಗ್ರಿಗಳ ನಿರಂತರತೆಯನ್ನು ಖಚಿತಪಡಿಸಿಕೊಳ್ಳುವುದರ ಮೇಲೆ ಅಧಿಕಾರಿಗಳು ಗಮನಹರಿಸಿದ್ದಾರೆ.



ಬಲೂಚಿಸ್ತಾನದಲ್ಲಿ ಮತ್ತೆ ಬಾಂಬ್ ಸ್ಫೋಟ; ಹಳಿ ತಪ್ಪಿದ ಜಾಫರ್ ಎಕ್ಸ್‌ಪ್ರೆಸ್

ಇಸ್ಲಾಮಾಬಾದ್: ಪಾಕಿಸ್ತಾನದ ರೈಲ್ವೆ ಹಳಿಯ ಬಳಿ ಬುಧವಾರ ಇರಿಸಲಾಗಿದ್ದ ಬಾಂಬ್ ಸ್ಫೋಟಗೊಂಡು ಜಾಫರ್ ಎಕ್ಸ್‌ಪ್ರೆಸ್ ರೈಲಿನ 6 ಬೋಗಿಗಳು ಹಳಿ ತಪ್ಪಿವೆ. ಬಲೂಚಿಸ್ತಾನದ ಅಸ್ಥಿರ ಪ್ರಾಂತ್ಯದ ಗಡಿಯಲ್ಲಿರುವ ಸಿಂಧ್ ಪ್ರಾಂತ್ಯದ ಜಾಕಬಾಬಾದ್ ಜಿಲ್ಲೆಯಲ್ಲಿ ಈ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ಯಾವುದೇ ಸಾವು–ನೋವುಗಳು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಾಕರ್ ಬಾಬಾದ್‌ನ ಜಾನುವಾರು ಮಾರುಕಟ್ಟೆ ಬಳಿಯ ರೈಲ್ವೆ ಹಳಿ ಬಳಿ ಸ್ಫೋಟ ಸಂಭವಿಸಿದ್ದು, ಜಾಕರ್ ಎಕ್ಸ್‌ಪ್ರೆಸ್‌ನ 6 ಬೋಗಿಗಳು ಹಳಿ ತಪ್ಪಿವೆ. ಸ್ಫೋಟದ ನಂತರ, ಆ ಪ್ರದೇಶ ಸುತ್ತುವರೆದಿರುವ ಪೊಲೀಸ್ ಪಡೆಯು ಭಾರಿ ಭದ್ರತೆ ಹೊಂದಿದೆ. ಸ್ಫೋಟದ ಸ್ವರೂಪ ನಿರ್ಧರಿಸಲು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸ್ಫೋಟದ ನಂತರ, ಮಾರ್ಗದಲ್ಲಿ ರೈಲು ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇನ್ನು ಸ್ಫೋಟಕ್ಕೆ ಸಂಬಂಧಿಸಿದಂತೆ ಯಾವುದೇ ಗುಂಪು ಇಲ್ಲಿವರೆಗೆ ಜವಾಬ್ದಾರಿ ಹೊತ್ತುಕೊಂಡಿಲ್ಲ. ಇತ್ತೀಚಿನ ತಿಂಗಳುಗಳಲ್ಲಿ ರೈಲು ಗುರಿಯಾಗಿಸಿಕೊಂಡು ನಡೆಸಿದ 1ನೇ ದಾಳಿ ಇದಾಗಿದೆ. ಮಾರ್ಚ್‌ನಲ್ಲಿ ಕ್ವೆಟ್ಟಾದಿಂದ ಪೇಶಾವರಕ್ಕೆ ಪ್ರಯಾಣಿಸುತ್ತಿದ್ದಾಗ ಬಲೂಚಿಸ್ತಾನದ ಬೋಲಾನ್ ಪ್ರದೇಶದಲ್ಲಿ ಜಾಕರ್ ಎಕ್ಸ್‌ಪ್ರೆಸ್ ಮೇಲೆ ದಾಳಿ ನಡೆದಿತ್ತು.



ಮೈಸೂರು ಮಿತ್ರ ಗುರುವಾರ 19 ಜೂನ್ 2025

ಕಾನೂನುಬಾಹಿರವಾಗಿ ಮಾಂಸದ ಮಳಿಗೆಗೆ ಅನುಮತಿ

ಸಿಬ್ಬಂದಿ ಬಶೀರ್ ಅಮಾನತಿಗೆ ನಗರ ಸಭೆ ನಿರ್ಧಾರ



ಮಡಿಕೇರಿ ನಗರ ಸಭೆಯ ಸಾಮಾನ್ಯ ಸಭೆ ಕಲಾವತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಡಿಕೇರಿ, ಜೂ.18– ಕಾನೂನುಬಾಹಿರವಾಗಿ ಮಾಂಸದ ಮಳಿಗೆಗೆ ಅನುಮತಿ ನೀಡಿದ ಆರೋಪದ ಮೇರೆಗೆ ನಗರ ಸಭೆಯ ದ್ವಿತೀಯ ದರ್ಜೆ ಸಹಾಯಕ ಹಾಗೂ ವಿಐಪಿ, ಮಾಂಸ ಮಾರುಕಟ್ಟೆಯ ಉಸ್ತುವಾರಿ ಸಿಬ್ಬಂದಿ ಬಶೀರ್‌ನನ್ನು ಅಮಾನತು ಮಾಡಲು ನಗರ ಸಭೆ ತೀರ್ಮಾನಿಸಿತು.

ಕಲಾವತಿಯವರ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಸಾಮಾನ್ಯ ಸಭೆಯ ಆರಂಭದಲ್ಲೇ ವಿಷಯ ಪ್ರಸ್ತಾಪಿಸಿದ ಸದಸ್ಯ ಮನ್ಸೂರ್, ನಗರದ ಮಾರುಕಟ್ಟೆ ಆವರಣದಲ್ಲಿ ಕೇವಲ ಒಂದು ಕುರಿ ಮಾಂಸ ಮಳಿಗೆಗೆ ಟೆಂಡರ್ ಕರೆಯಲಾಗಿದೆ. ಆದರೆ ಅದರ ಪಕ್ಕದಲ್ಲೇ ಇರುವ ಇನ್ನೊಂದು ಮಳಿಗೆಯನ್ನೂ ಕೂಡ ವ್ಯಾಪಾರಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹಾಗಾದರೆ ಆ ಮಳಿಗೆಯ ಹಣವನ್ನು ತಿನ್ನುತ್ತಿರುವವರು ಯಾರು? ಹಲವು ವರ್ಷಗಳಿಂದ ನಗರ ಸಭೆ ವಂಚಿಸಿಕೊಂಡು ಬಂದಿದ್ದರೂ ಸೂಕ್ತ ಕ್ರಮ ಏಕೆ ತೆಗೆದುಕೊಳ್ಳಲಿಲ್ಲ ಎಂದು ಪ್ರಶ್ನಿಸಿದರು. ಇದಕ್ಕೆ ಇತರ ಸದಸ್ಯರು ಕೂಡ ಪಕ್ಷಾತೀತವಾಗಿ ಧ್ವನಿಗೂಡಿಸಿ ಸೂಕ್ತ ಉತ್ತರ ನೀಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಸೂಕ್ತ ಉತ್ತರ ನೀಡುವಂತೆ ಸಿಬ್ಬಂದಿ ಬಶೀರ್‌ಗೆ ಅಧ್ಯಕ್ಷರು ಸೂಚಿಸಿದಾಗ ಮಾರುಕಟ್ಟೆಯಲ್ಲಿ ಕೇವಲ ಒಂದು ಕುರಿ ಮಾಂಸ ಮಳಿಗೆಗೆ ಮಾತ್ರವೇ ಟೆಂಡರ್ ಮಾಡಲಾಗಿದೆ. ಅದರ ಪಕ್ಕದಲ್ಲಿನ ಮಳಿಗೆಗೆ ಬಾಗಿಲು ಇಲ್ಲದ ಕಾರಣ ಆ ಮಳಿಗೆಯನ್ನು ಕುರಿ ಮಾಂಸ ತಯಾರಿ ಮಾಡಲು ಮಾತ್ರ ಟೆಂಡರ್ ಕರೆದವರು ಬಳಸುತ್ತಿದ್ದಾರೆ ಎಂದು ಉತ್ತರಿಸಿದರು. ಇದಕ್ಕೆ ಆಕ್ಷೇಪವೆತ್ತಿದ ಮನ್ಸೂರ್ ಸಭೆಗೆ ಸುಳ್ಳು ಮಾಹಿತಿ ನೀಡಿ ದಾರಿ ತಪ್ಪಿಸಲಾಗುತ್ತಿದೆ. ಮತ್ತೊಂದು ಮಳಿಗೆಯಲ್ಲೂ ವ್ಯಾಪಾರ ನಡೆಸುತ್ತಿರುವ ಬಗ್ಗೆ ವಿಡಿಯೋ ತರಿಸುವಂತೆ ಪಟ್ಟು ಹಿಡಿದರು.


ನಾಮ ನಿರ್ದೇಶಿತ ಸದಸ್ಯ ಯಾಕೂಬ್ ಮಾರುಕಟ್ಟೆಗೆ ವಿಡಿಯೋ ದೃಶ್ಯವನ್ನು ಪ್ರದರ್ಶಿಸಿ ಮತ್ತೊಂದು ಮಳಿಗೆಯಲ್ಲೂ ವ್ಯಾಪಾರ ನಡೆಸುತ್ತಿರುವುದನ್ನು ಸಭೆಯ ಮುಂದಿಟ್ಟರು. ಈ ಅವ್ಯವಹಾರ ಹಲವು ವರ್ಷಗಳಿಂದಲೂ ನಡೆಯುತ್ತಿದೆ ಎಂದು ಗಮನ ಸೆಳೆದರು.

ಮಾರುಕಟ್ಟೆ ಬಗ್ಗೆ ದೂರುಗಳು ಬಂದ ಸಂದರ್ಭವೇ ಬಶೀರ್ ಅವರನ್ನು ಆ ಕರ್ತವ್ಯದಿಂದ ಬಿಡುಗಡೆ ಮಾಡಿ ಸತ್ಯ ನಾರಾಯಣ ಹಾಗು ಹರಿಣಿ ಅವರಿಗೆ ಜವಾಬ್ದಾರಿ ನೀಡುವಂತೆ ಸೂಚಿಸಲಾಗಿತ್ತು. ಹೀಗಿದ್ದರೂ ಬಶೀರ್ ಆ ಇಬ್ಬರು ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಿರಲಿಲ್ಲ. ಅದ ಕಾರಣ ಆ ಇಬ್ಬರು ಅಧಿಕಾರಿಗಳು ಲಿಖಿತ ರೂಪದಲ್ಲಿ ಅಧಿಕಾರ ವಹಿಸದಿರುವ ಬಗ್ಗೆ ವರದಿ ನೀಡಿದ್ದಾರೆ ಎಂದು ಪೌರಾಯುಕ್ತ ರಮೇಶ್ ಸಭೆಯ ಗಮನಕ್ಕೆ ತಂದರು.

ಸಿಬ್ಬಂದಿ ಬಶೀರ್ ವಿರುದ್ಧ ತನಿಖೆ ನಡೆಸುವಂತೆ ಸದಸ್ಯರಾದ ಅರುಣ್ ಶೆಟ್ಟಿ, ಸತೀಶ್, ಬಶೀರ್, ಮನ್ಸೂರ್, ಯಾಕೂಬ್ ಸಹಿತ ಹಲವು ಸದಸ್ಯರು ಆಗ್ರಹಿಸಿದರು.

ಸಿಬ್ಬಂದಿ ಬಶೀರ್‌ನನ್ನು ತಕ್ಷಣವೇ ಕರ್ತವ್ಯದಿಂದ ವಜಾ ಮಾಡಿ ಆತನ ವಿರುದ್ಧ ತನಿಖೆಗೆ ಸೂಚಿಸುವಂತೆ ಆಗ್ರಹಿಸಿದರು. ಇತರ ಸದಸ್ಯರು ಕೂಡ ಇದಕ್ಕೆ ಧ್ವನಿಗೂಡಿಸಿದರು. ಸಭೆಯ ಅಧ್ಯಕ್ಷೆ ಕಲಾವತಿ ಅವರು ಸಿಬ್ಬಂದಿ ಬಶೀರ್‌ನನ್ನು ಕರ್ತವ್ಯದಿಂದ ಅಮಾನತು ಮಾಡಿ ತನಿಖೆ ನಡೆಸಲು ಸೂಚಿಸಿದರು.

ಮನೆಯಂಗಳದಲ್ಲಿ ಕಾಡಾನೆ ದಾಂಧಲೆ



ಫಸಲು ಬರಿತ ತೆಂಗಿನ ಮರವನ್ನು ಬೀಳಿಸಿರುವುದು.

ನಾಪೋಕ್ಲು, ಜೂ.18– ಇಲ್ಲಿಗೆ ಸಮೀಪದ ಮರಂದೋಡ ಗ್ರಾಮದಲ್ಲಿ ಕಾಡಾನೆ ಮನೆಯಂಗಳಕ್ಕೆ ಬುಧವಾರ ನುಸುಳಿ ಧಾಂದಲೆ ಮಾಡಿದ್ದು ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ಕಕ್ಕಬೆ ಕುಂಜಿಲ ಗ್ರಾಮ ಪಂಚಾಯಿತಿಯ ಮರಂದೋಡ ಗ್ರಾಮದ ನಿವಾಸಿ ಮುಸ್ತಫ ಅಹಮದ್ ಎಂಬವರ ತೋಟದಲ್ಲಿದ್ದ ಅಡ್ಡಾಡಿದ ಕಾಡಾನೆ ಕಾಫಿ, ಬಾಳೆ ಸೇರಿದಂತೆ ಗಿಡಗಳನ್ನು ಹಾನಿ ಮಾಡಿದ್ದಲ್ಲದೆ ಫಸಲು ಬರಿತ ತೆಂಗಿನ ಮರವನ್ನು ಬೀಳಿಸಿ ನಷ್ಟವನ್ನುಂಟು ಮಾಡಿದೆ. ಇದರಿಂದಾಗಿ ವಿದ್ಯುತ್ ತಂತಿಗಳು ತುಂಡಾಗಿ ವಿದ್ಯುತ್ ಸ್ಥಗಿತಗೊಂಡಿದೆ. ಮನೆಯಂಗಳಕ್ಕೆ ಬಂದಿರುವ ಕಾಡಾನೆಯ ಚಲನವಲನಗಳು ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿದ್ದು ಇದರಿಂದ ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು ಸಂಬಂಧಿಸಿದವರು ಸೂಕ್ತ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕಾರ್ಮಿಕ ಕುಳ್ಳನ ಮೇಲೆ ಕರಡಿ ದಾಳಿ: ತೀವ್ರ ಗಾಯ



ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸಂಕೇತ್ ಪೂವಯ್ಯ ಭೇಟಿ ನೀಡಿ ಗಾಯಾಳು ಕಾರ್ಮಿಕ ಕುಳ್ಳನ ಆರೋಗ್ಯ ವಿಚಾರಿಸಿದರು.

ಪೊನ್ನಂಪೇಟೆ, ಜೂ.18– ತಾಲೂಕಿನ ಜಾಗಲೆ ಎಂಬಲ್ಲಿ ಕರಡಿ ದಾಳಿಯಿಂದ ಕಾರ್ಮಿಕ ಕುಳ್ಳ (52) ಗಂಭೀರವಾಗಿ ಗಾಯಗೊಂಡಿರುವ ಘಟನೆಯೊಂದು ಮಂಗಳವಾರ ರಾತ್ರಿ ಸಂಭವಿಸಿದೆ.

ಆಲೆಮೇಂಗಡ ಬಿದ್ದಪ್ಪ ಎಂಬುವವರ ತೋಟದ ಲೈನ್ ಮನೆಯಲ್ಲಿ ಕಾಕು ಎಂಬುವರ ಪುತ್ರ ಕುಳ್ಳ ವಾಸವಾಗಿದ್ದರು. ಮಂಗಳವಾರ ರಾತ್ರಿ 11 ಗಂಟೆ ಸಮಯದಲ್ಲಿ ಮೂತ್ರ ವಿಸರ್ಜನೆಗೆ ಲೈನ್‌ಮನೆಯಿಂದ ಹೊರ ಬಂದಿರುವ ಸಂದರ್ಭ ಕರಡಿ ದಾಳಿ ಮಾಡಿದೆ. ಕುಳ್ಳನ ತಲೆ ಭಾಗಕ್ಕೆ ಗಂಭೀರ ಪೆಟ್ಟಾಗಿದ್ದು, ತಕ್ಷಣ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ತಲೆಯ ಹಣೆಯ ಮೇಲಿನ ಭಾಗ ಸೀಳಿ ಹೋಗಿದ್ದರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯಕೀಯ ಮೂಲಗಳು ತಿಳಿಸಿವೆ.

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಮೈಸೂರು ಆಸ್ಪತ್ರೆಗೆ ತೆರಳಿ ಗಾಯಾಳುವಿನ ಆರೋಗ್ಯ ವಿಚಾರಿಸಿ, ವೈದ್ಯರೊಂದಿಗೆ ಚಿಕಿತ್ಸೆ ಬಗ್ಗೆ ಸಮಾಲೋಚನೆ ನಡೆಸಿದರು. ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಸಂಬಂಧ ಶಾಸಕ ಎ.ಎಸ್. ಪೊನ್ನಣ್ಣರೊಂದಿಗೆ ಸಮಾಲೋಚಿಸಿರುವುದಾಗಿ ಹೇಳಿದರು.

ಅತ್ತೂರು ಕೊಲ್ಲಿಯಲ್ಲಿ 6 ಗುಡಿಸಲು ತೆರವುಗೊಳಿಸಿದ ಅರಣ್ಯ ಇಲಾಖೆ



ಅರಣ್ಯ ಪ್ರದೇಶಕ್ಕೆ ಅಕ್ರಮ ಪ್ರವೇಶ ಮಾಡಿ ನಿರ್ಮಿಸಿಕೊಂಡಿದ್ದ 6 ಗುಡಿಸಲುಗಳನ್ನು ಅರಣ್ಯ ಇಲಾಖೆ ತೆರವುಗೊಳಿಸಿತು.

ಮಡಿಕೇರಿ, ಜೂ.18–ನಾಗರಹೊಳೆ ವನ್ಯಜೀವಿ ವಲಯ ವ್ಯಾಪ್ತಿಯ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶಕ್ಕೆ ಅಕ್ರಮ ಪ್ರವೇಶ ಮಾಡಿ ಹೆಚ್ಚುವರಿಯಾಗಿ ನಿರ್ಮಿಸಿಕೊಂಡಿದ್ದ 6 ಗುಡಿಸಲುಗಳನ್ನು ಪೊಲೀಸ್ ಇಲಾಖೆ ಸಹಕಾರದಲ್ಲಿ ಅರಣ್ಯ ಇಲಾಖೆ ತೆರವು ಮಾಡಿದೆ.

ಹೊಸದಾಗಿ ನಿರ್ಮಿಸಿದ್ದ 6 ಗುಡಿಸಲುಗಳನ್ನು ತೆರವುಗೊಳಿಸುವಂತೆ ಆದಿವಾಸಿ ಮುಖಂಡರಿಗೆ ಅರಣ್ಯ ಇಲಾಖೆ ನೋಟೀಸ್ ಜಾರಿ ಮಾಡಿತ್ತು. ಮಾತ್ರವಲ್ಲದೇ ಕಾರ್ಯಾಚರಣೆಗೂ ಮುನ್ನ ಸ್ವಯಂಪ್ರೇರಿತರಾಗಿ ಹೊಸ ಗುಡಿಸಲುಗಳನ್ನು ತೆರವುಗೊಳಿಸಲು ಅವಕಾಶ ನೀಡಲಾಗಿತ್ತು. ಆದರೆ ಆದಿವಾಸಿಗಳು ಗುಡಿಸಲುಗಳನ್ನು ತೆರವು ಮಾಡಲು ನಿರಾಕರಿಸಿ ಅರಣ್ಯ ಮತ್ತು ಪೊಲೀಸ್ ಸಿಬ್ಬಂದಿಗಳಿಗೆ ಅರಣ್ಯಕ್ಕೆ ಪ್ರವೇಶ ಮಾಡದಂತೆ ತಡೆಯೊಡ್ಡಿದ್ದರು. ಆದರೆ ಅರಣ್ಯ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿಗಳು ಬೇರೆ ಮಾರ್ಗದ ಮೂಲಕ ಪ್ರವೇಶಿಸಿ ಕಾರ್ಯಾಚರಣೆ ಆರಂಭಿಸಿದರು. ಈ ವೇಳೆ ಆದಿವಾಸಿಗಳು ಅರಣ್ಯ ಹಾಗೂ ಪೊಲೀಸ್ ಇಲಾಖೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ ಕಾರ್ಯಾಚರಣೆಗೆ ಅಡ್ಡಿಪಡಿಸಲು ಯತ್ನಿಸಿದರು.

ಅತ್ತುರೂ ಕೊಲ್ಲಿ ಹಾಡಿಯ ಶಿವು ಮಾತನಾಡಿ ಅರಣ್ಯ ಇಲಾಖೆ ಏಕಾಏಕಿ ಹಾಡಿಗೆ ನುಗ್ಗಿ ಮಳೆಯಿಂದ ರಕ್ಷಿಸಿಕೊಳಲು ನಿರ್ಮಿಸಿಕೊಂಡಿದ್ದ ಗುಡಿಸಲುಗಳನ್ನು ಕಿತ್ತುಹಾಕಿ ದೌರ್ಜನ್ಯವೆಸಗಿದ್ದಾರೆ. ಅರಣ್ಯ ಹಕ್ಕು ಕಾಯಿದೆ, 2019ರ ಸುಪ್ರೀಂ ಕೋರ್ಟ್ ಆದೇಶ, ಬುಡಕಟ್ಟು ವ್ಯವಹಾರ ಇಲಾಖೆಯ ದಾಖಲೆಗಳನ್ನು ಕಡೆಗಣಿಸಿ ಮೇಲಧಿಕಾರಿಗಳ ಆದೇಶ ಪಾಲಿಸಬೇಕು ಎಂದು ಗುಡಿಸಲುಗಳನ್ನು ತೆರವುಗೊಳಿಸಿದ್ದಾರೆ. ನಮ್ಮ ವಿರೋಧದ ನಡುವೆಯೂ ಆದಿವಾಸಿಗಳ ಬದುಕಿಗೆ ಆಶ್ರಯಕ್ಕಾಗಿ ಇರುವಂತಹ ಗುಡಿಸಲುಗಳನ್ನು ಸಂಪೂರ್ಣವಾಗಿ ನೆಲಸಮ ಮಾಡಿ ಟಾರ್ಪಾಲ್ ಹಾಗೂ ಇತರ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಮುಂದಿನ ದಿನಗಳಲ್ಲಿ ಅರಣ್ಯ ಹಾಗೂ ಪೊಲೀಸ್ ಇಲಾಖೆ ವಿರುದ್ಧ ಪ್ರಕರಣ ದಾಖಲಿಸಲು ಮುಂದಾಗುತ್ತೇವೆ ಎಂದು ಹೇಳಿದರು.

ನಾಗರ ಹೊಳೆ ವನ್ಯಜೀವಿ ಉಪ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜೆ.ಅನನ್ಯ ಕುಮಾರ್ ಮಾತನಾಡಿ, ನಾಗರಹೊಳೆ ವನ್ಯಜೀವಿ ಅರಣ್ಯದ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಮೇ.5ರಂದು ಆದಿವಾಸಿಗಳು ಅಕ್ರಮ ಪ್ರವೇಶ ಮಾಡಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದೀಗ ಹೊಸದಾಗಿ 6 ಶೆಡ್ ನಿರ್ಮಿಸಿರುವುದನ್ನು ತೆರವುಗೊಳಿಸಿದ್ದೇವೆ. ಈ ಹಿಂದೆಯೇ ಹೊಸದಾಗಿ ಕಾರ್ಯ ಚಟುವಟಿಕೆ ನಡೆಸಬಾರದೆಂದು ಆದೇಶ ನೀಡಲಾಗಿತ್ತು. ಹೊಸದಾಗಿ ಶೆಡ್ ನಿರ್ಮಿಸಿದ ಕಾರಣ ಅರಣ್ಯ ಇಲಾಖೆ ಸಿಬ್ಬಂದಿ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ತೆರವು ಮಾಡಿದ್ದೇವೆ ಎಂದು ಸ್ಪಷ್ಟನೆ ನೀಡಿದರು.

ಈ ಪ್ರಕರಣ ಇತ್ಯರ್ಥವಾಗುವವರೆಗೂ ಹೊಸದಾಗಿ ಯಾವುದೇ ಶೆಡ್ ನಿರ್ಮಿಸಲು ಅವಕಾಶ ನೀಡಲು ಸಾಧ್ಯವಿಲ್ಲ. ಮತ್ತೆ ಶೆಡ್ ನಿರ್ಮಿಸಿದರೆ ಅರಣ್ಯ ಇಲಾಖೆಯ ವತಿಯಿಂದ ತೆರವುಗೊಳಿಸಲಾಗುವುದು ಎಂದರು.

ನಾಗರಹೊಳೆ ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅನನ್ಯ ಕುಮಾರ್.ಜಿ, ಹುಣಸೂರು ವನ್ಯಜೀವಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲಕ್ಷ್ಮಿಕಾಂತ್ .ಎನ್, ನಾಗರಹೊಳೆ ವನ್ಯಜೀವಿ ವಲಯದ ಅರಣ್ಯಾಧಿಕಾರಿ ಮಂಜುನಾಥ ಹೆಚ್.ಎಂ. ಮೇಟಿಕುಪ್ಪೆ ವನ್ಯಜೀವಿ ವಲಯ ಅರಣ್ಯಾಧಿಕಾರಿ ರಶ್ಮಿ ಎಂ.ಆರ್, ಕೊಡಗು ಅಡಿಷನಲ್ ಎಸ್.ಪಿ.ದಿನೇಶ್, ಮಡಿಕೇರಿ ಡಿವೈಎಸ್‌ಪಿ ಸೂರಜ್, ವಿರಾಜಪೇಟೆ ಡಿವೈಎಸ್‌ಪಿ ಮಹೇಶ್, ಕುಟ್ಟ ವೃತ್ತ ನಿರೀಕ್ಷಕ ಶಿವರುದ್ರ, ವಿರಾಜಪೇಟೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಕುಟ್ಟ ಎಸ್.ಐ. ಮಹದೇವ್ ಹೆಚ್.ಕೆ, ಶ್ರೀಮಂಗಲ ಎ.ಎಸ್.ಐ ಸಾಲ್ದಾನ, ಪೊನ್ನಂಪೇಟೆ ವೃತ್ತ ನಿರೀಕ್ಷಕ ನವೀನ್.ಕೆ, ಗೋಣಿಕೊಪ್ಪ ಎಸ್.ಐ. ಪ್ರದೀಪ್ ಕುಮಾರ್ ಸೇರಿದಂತೆ ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಜಮೀನುಗಳ ಗುತ್ತಿಗೆ ಪಡೆಯಲು ಅರ್ಜಿ ಆಹ್ವಾನ

ವಿರಾಜಪೇಟೆ: ಸರ್ಕಾರಿ ಜಮೀನಿನಲ್ಲಿ 2005 ಜ1ರ ಪೂರ್ವದಲ್ಲಿ ಅನಧಿಕೃತವಾಗಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳನ್ನು ಗುತ್ತಿಗೆ ನೀಡುವ ಸಂಬಂಧ ಆನ್‌ಲೈನ್ ಮೂಲಕ ಬೆಳೆಗಾರರಿಂದ ಅರ್ಜಿಗಳನ್ನು ಸ್ವೀಕರಿಸುವ ಕಾಲಾವಕಾಶವನ್ನು ಜು.15ರವರೆಗೆ ವಿಸ್ತರಿಸಲಾಗಿದೆ.

ಜಮೀನುಗಳನ್ನು ಗುತ್ತಿಗೆ ಪಡೆಯುವ ಸಂಬಂಧ ತಾಲೂಕು ಕಚೇರಿಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಈಗಾಗಲೇ ಅರ್ಜಿಗಳನ್ನು ಸಲ್ಲಿಸಿರುವವರು ಮತ್ತೊಮ್ಮೆ ಸಲ್ಲಿಸಿದಲ್ಲಿ ಅಂತಹವನ್ನು ಪರಿಗಣಿಸಲಾಗುವುದಿಲ್ಲ. ನಮೂನೆ–9ರಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿದಾರರ ಹಾಗೂ ಕುಟುಂಬದ ಸದಸ್ಯರ ಪಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್, 5 ವರ್ಷಗಳ ಆದಾಯ ತೆರಿಗೆ ಮಾಹಿತಿ, ವಂಶವೃಕ್ಷ ಹಾಗೂ ಪ್ಲಾಂಟೇಷನ್ ಮಾಡಿರುವ ಸರ್ವೆ ನಂಬರ್‌ನ ಪಹಣಿ ಅಗತ್ಯವಾಗಿರುತ್ತದೆ ಎಂದು ತಹಶೀಲ್ದಾರ್ ಕಚೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಆರೋಪಿ ಬಂಧನ: 1.79 ಕೆ.ಜಿ. ಗಾಂಜಾ ವಶ



ಮಡಿಕೇರಿ: ನಿಷೇಧಿತ ಮಾದಕ ವಸ್ತು ಎಂಡಿಎಂಎ ಮತ್ತು ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊನ್ನಂಪೇಟೆ ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಮೂಲದವನಾಗಿದ್ದು, ಗೋಣಿಕೊಪ್ಪದಲ್ಲಿ ನೆಲೆಸಿರುವ ಗುರುದತ್(30) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಆತನಿಂದ 4 ಗ್ರಾಂ ಎಂಡಿಎಂಎ 1.79 ಕೆ.ಜಿ. ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಕೃತ್ಯಕ್ಕೆ ಬಳಸಿದ ಎರಡು ಕಾರುಗಳನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

36 ಜನರ ಕುಟುಂಬಕ್ಕೂ ತಲಾ 25 ಲಕ್ಷ ರೂ. ಪರಿಹಾರಕ್ಕೆ ಒತ್ತಾಯಿಸಿ ಪ್ರತಿಭಟನಾ ಧರಣಿ



ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟ ಕುಟುಂಬಗಳಿಗೆ ತಲಾ 25 ಲಕ್ಷ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ವಿವಿಧ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಜೂ.18– ಬೆಂಗಳೂರಲ್ಲಿ ಕಾಲ್ತುಳಿತದಿಂದ ಮೃತಪಟ್ಟ ಕುಟುಂಬದವರಿಗೆ ನೀಡಿದಂತೆ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಆಕ್ಸಿಜನ್ ದೊರಕದೇ ಮೃತಪಟ್ಟ 36 ಜನರ ಕುಟುಂಬಕ್ಕೂ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು. ಕುಟುಂಬದಲ್ಲಿ ಓರ್ವರಿಗೆ ಸರ್ಕಾರಿ ನೌಕರಿ ನೀಡಬೇಕೆಂದು ಒತ್ತಾಯಿಸಿ ಆಕ್ಸಿಜನ್ ದುರಂತ ನ್ಯಾಯಕ್ಕಾಗಿ ಹೋರಾಟ ಸಮಿತಿಯಿಂದ ನಗರದಲ್ಲಿ ಪ್ರತಿಭಟನಾ ಧರಣಿ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂದೆ ರೈತ, ಕನ್ನಡ ಸಂಘಟನೆಗಳು ಮುಖಂಡರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಆಕ್ಸಿಜನ್ ದುರಂತದಲ್ಲಿ ಮಡಿದವರ ಕುಟುಂಬದ ಸದಸ್ಯರೂ ಪಾಲ್ಗೊಂಡಿದ್ದರು. ಪರಿಹಾರಕ್ಕೆ ಆಗ್ರಹಿಸಿ ಧರಣಿ ನಿರತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರಗತಿ ಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಸಿ.ಎಂ.ಕೃಷ್ಣಮೂರ್ತಿ ಮಾತನಾಡಿ, ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿರುವವರ ಕುಟುಂಬಕ್ಕೆ ರಾಜ್ಯ ಸರ್ಕಾರ 25 ಲಕ್ಷ ರೂ. ಪರಿಹಾರ ನೀಡಿದೆ. ಆದರೆ 2021ರಲ್ಲಿ ಅಂದಿನ ಸರ್ಕಾರದ ನಿರ್ಲಕ್ಷ್ಯದಿಂದ ಮೃತಪಟ್ಟ 36 ಜನರ ಕುಟುಂಬಗಳಿಗೆ 2 ಲಕ್ಷ 5 ಲಕ್ಷ ಇನ್ನೂ ಕೆಲವರಿಗೆ ಪರಿಹಾರವನ್ನೇ ನೀಡಿಲ್ಲ. ಸಂತ್ರಸ್ತರ ಪರವಾಗಿ ಅನೇಕ ಹೋರಾಟ ನಡೆದರೂ, ನೂರೆಂಟು ಅರ್ಜಿಗಳನ್ನು ಕೊಟ್ಟರೂ, ಈ ಕುಟುಂಬಗಳಿಗೆ ನ್ಯಾಯ ದೊರೆತಿಲ್ಲ. ಬೆಂಗಳೂರಿಗೆ ಒಂದು ನ್ಯಾಯ, ಚಾಮರಾಜನಗರಕ್ಕೇ ಒಂದು ನ್ಯಾಯವೇ? ಇದು ರಾಜ್ಯ ಸರ್ಕಾರದ ಮಲತಾಯಿ ಧೋರಣೆಯಾಗಿದೆ. ಎಂದು ಕಿಡಿಕಾರಿದರು

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕರ್ನಾಟಕ ಸೇನಾ ಪಡೆಯ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ರೈತ ಸಂಘದ ರಾಜ್ಯ ಸಂಚಾಲಕ ಗುರುಪ್ರಸಾದ್ ಮಾತನಾಡಿ, ಎಲ್ಲ ರೀತಿಯ ಹೋರಾಟ ಮಾಡಿಯಾಗಿದೆ. ಇನ್ನು ಸರ್ಕಾರದ ಬಳಿ ದುಡ್ಡಿಲ್ಲ ಎಂದು ಜನರ ಹತ್ತಿರ ಭಿಕ್ಷೆ ಬೇಡುವ ಚಳವಳಿ ಮಾಡಬೇಕು. ಜನಪ್ರತಿನಿಧಿಗಳಿಗೆ ಕಪ್ಪು ಬಾವುಟ ಪ್ರದರ್ಶಿಸಬೇಕು. ಸ್ವಾತಂತ್ರ್ಯ ದಿನಾಚರಣೆಯಂದು ಕಪ್ಪು ಪಟ್ಟಿ ಧರಿಸಿ ಕರಾಳ ದಿನ ಆಚರಣೆ ಮಾಡಬೇಕು. ಆಗ ಸಿಎಂ ಗಮನಸೆಳೆಯಬಹುದು ಎಂದರು.

ದಸಂಸ ಜಿಲ್ಲಾಧ್ಯಕ್ಷ ಬೆಳ್ಳಿಯಪ್ಪ ಸಾಮೂಹಿಕ ನಾಯಕತ್ವ ರೈತ ಸಂಘದ ಸಂಚಾಲಕ ಹೊನ್ನೂರು ಪ್ರಕಾಶ್ ರಂಗಕರ್ಮಿ ಕೆ. ವೆಂಕಟರಾಜು ಮಾತನಾಡಿ, ನ್ಯಾಯಮೂರ್ತಿ ವೇಣುಗೋಪಾಲ್ ಸಮಿತಿ ಈ ದುರಂತದಲ್ಲಿ 37 ಜನರು ಮೃತಪಟ್ಟಿದ್ದಾರೆ ಎಂದು ವರದಿ ನೀಡಿದೆ. ಈ 37 ಜನರಿಗೂ ತಲಾ 25 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ನಂತರ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದರು ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಭೆ ಕರೆಯಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಎಚ್‌ಸಿ ಮಹೇಶ್‌ಕುಮಾರ್, ಜಿಲ್ಲಾಧ್ಯಕ್ಷ ಮಾಡ್ರಹಳ್ಳಿ ಮಹದೇವಪ್ಪ, ಮಹದೇವಪ್ರಸಾದ್, ಹಾಲಿನ ನಾಗರಾಜು, ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅಬ್ರಾರ್ ಅಹಮದ್, ನಗರಸಭೆ ಸದಸ್ಯ ಎಂ. ಮಹೇಶ್, ನಯಾಜುಲ್ಲಾ, ಕಂದಹಳ್ಳಿ ನಾರಾಯಣ, ವಿವಿಧ ಸಂಘಟನೆಗಳ ಮುಖಂಡರಾದ ಸಿ.ಎನ್. ಗೋವಿಂದರಾಜು, ಸುರೇಶ್ ವಾಜಪೇಯಿ, ಆಟೋ ಮಹದೇವಸ್ವಾಮಿ, ಬ್ರಿಜೇಶ್ ಒಲಿವೆರಾ, ಕೃಷ್ಣರಾಜು, ಪ್ರಕಾಶ್ ಕಬ್ಬಹಳ್ಳಿ, ಮಲ್ಲೇಶ್, ಹಿರಿಕಾಟಿ ಚಿಕ್ಕಣ್ಣ, ದುರಂತ ಸಂತ್ರಸ್ತರ ಕುಟುಂಬದವರು ಭಾಗವಹಿಸಿದ್ದರು.

ಪತ್ರಿಕಾ ವಿತರಕ ವಿದ್ಯಾರ್ಥಿಗಳಿಗೆ ಪಠ್ಯ ಸಾಮಗ್ರಿ ವಿತರಣೆ



ಎಆರ್‌ಕೆ ಅಭಿಮಾನಿ ಬಳಗದಿಂದ ಪತ್ರಿಕಾ ವಿತರಕರಿಗೆ ಪಠ್ಯ ಸಾಮಗ್ರಿಗಳನ್ನು ವಿತರಣೆ ಮಾಡಲಾಯಿತು.

ಯಳಂದೂರು, ಜೂ.18 (ವಿ.ನಾಗರಾಜು)– ಪಟ್ಟಣದ ಕಾರಾಪುರ ವಿರಕ್ತ ಮಠದಲ್ಲಿ ನಿನ್ನೆ ಸಂಜೆ ಎ.ಆರ್. ಕೃಷ್ಣಮೂರ್ತಿ ಅಭಿಮಾನಿ ಬಳಗದ ವತಿಯಿಂದ ಪತ್ರಿಕಾ ವಿತರಕ ವಿದ್ಯಾರ್ಥಿಗಳಿಗೆ ಪಠ್ಯ ಸಾಮಾಗ್ರಿಗಳನ್ನು ವಿತರಣೆ ಮಾಡಲಾಯಿತು.

ಪತ್ರಿಕಾ ವಿತರಕರು ನಿತ್ಯ ಚಳಿ, ಮಳೆ ಎನ್ನದೆ ತಮ್ಮ ಕಾಯಕದಲ್ಲಿ ನಿರತರಾಗಿರುತ್ತಾರೆ. ಈ ಕೆಲಸವನ್ನು ಮುಗಿಸಿ ಶಾಲಾ ಕಾಲೇಜುಗಳಿಗೆ ತೆರಳುವವರಲ್ಲಿ ಅನೇಕರು ಬಡ ವಿದ್ಯಾರ್ಥಿಗಳಿದ್ದಾರೆ. ಹಾಗಾಗಿ ಇವರಿಗೆ ನೋಟ್ ಪುಸ್ತಕ, ಲೇಖನ ಸಾಮಗ್ರಿ ಸೇರಿದಂತೆ ಇತರೆ ಪಠ್ಯ ಸಾಮಾಗ್ರಿಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಸಂಘದ ಕಂದಹಳ್ಳಿ ನಂಜುಂಡಸ್ವಾಮಿ ಹೇಳಿದರು.

ಮುಂದಿನ ದಿನಗಳಲ್ಲಿ ಇವರಿಗೆ ಮತ್ತಷ್ಟು ಸೌಲಭ್ಯಗಳನ್ನು ನೀಡಲು ನಮ್ಮ ಬಳಗ ಪ್ರಾಮಾಣಿಕವಾಗಿ ಯತ್ನಿಸಲಿದೆ. ಬಳಗದ ವತಿಯಿಂದ ರಕ್ತದಾನ, ಉಚಿತ ಆರೋಗ್ಯ ಶಿಬಿರ, ಕಣ್ಣಿನ ಶಸ್ತ್ರಚಿಕಿತ್ಸೆ, ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಸಾಮಾಗ್ರಿ ವಿತರಣೆ ಸೇರಿದಂತೆ ಅನೇಕ ಕೆಲಸಗಳನ್ನು ಮಾಡಿಕೊಂಡು ಬರಲಾಗುತ್ತದೆ ಎಂದು ಮಾಹಿತಿ ನೀಡಿದರು.

ಕಾರಾಪುರ ವಿರಕ್ತ ಮಠದ ಬಸವರಾಜ ಸ್ವಾಮಿ ಒಡೆಯರ್ ಮಾತನಾಡಿ, ಪತ್ರಿಕೆಗಳಿಗೆ ಜಗತ್ತಿನ ಕೆಡಕುಗಳನ್ನು ತಿದ್ದುವ ಶಕ್ತಿ ಇದೆ. ದೃಶ್ಯ ಮಾಧ್ಯಮಕ್ಕಿಂತ ಪತ್ರಿಕಾ ಮಾಧ್ಯಮ ಇಂದಿಗೂ ಕೂಡ ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡುತ್ತಿದೆ. ಇಂತಹ ಪತ್ರಿಕೆಗಳ ಸಂಪಾದಕರು, ಇದರ ಮಾಲೀಕರು ಹಾಗೂ ಏಜೆಂಟರಿಗೆ ಪತ್ರಿಕಾ ವಿತರಕರೇ ಅನ್ನದಾತರಾಗಿರುತ್ತಾರೆ. ಇವರಿಲ್ಲದೆ ಮನೆಮನೆಗಳಿಗೆ, ಕಚೇರಿಗಳಿಗೆ, ಗ್ರಂಥಾಲಯಗಳಿಗೆ ಪತ್ರಿಕೆಗಳನ್ನು ವಿತರಿಸುವುದು ಕಷ್ಟಸಾಧ್ಯವಾಗುತ್ತದೆ. ಪ್ರತಿನಿತ್ಯ ಬೆಳಗಿನ ಜಾವದಲ್ಲೇ ಇವರು ಕಾಯಕ ಆರಂಭಿಸಿ ಮಳೆ, ಗಾಳಿ, ಚಳಿಯನ್ನು ಲೆಕ್ಕಿಸದೆ ಕೆಲಸ ಮಾಡುತ್ತಾರೆ. ಇವರ ಜ್ಞಾನವನ್ನು ಜಗತ್ತಿಗೆ ಹರಡುವ ಶ್ರೇಷ್ಠ ಕೆಲಸವನ್ನು ಮಾಡುತ್ತಾರೆ. ಇಂಥವರಿಗೆ ಪಠ್ಯ ಸಮಾಗ್ರಿಗಳನ್ನು ವಿತರಣೆ ಮಾಡುತ್ತಿರುವ ಎ.ಆರ್.ಕೃಷ್ಣಮೂರ್ತಿ ಅಭಿಮಾನಿ ಬಳಗದ ಕೆಲಸ ಶ್ಲಾಘನೀಯವಾಗಿದೆ ಎಂದು ಬಣ್ಣಿಸಿದರು.

ಪಪಂ ಸದಸ್ಯರಾದ ವೈ.ಜಿ. ರಂಗನಾಥ, ಲಿಂಗರಾಜಮೂರ್ತಿ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಂಬಳೆ ವೀರಭದ್ರನಾಯಕ, ಕಸಾಪ ತಾಲೂಕು ಅಧ್ಯಕ್ಷ ಯರಿಯೂರು ನಾಗೇಂದ್ರ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಮುಖಂಡ ಶಿವನಂಜಯ್ಯ ಅನೇಕರು ಇದ್ದರು.

ಪಟ್ಟಣಕ್ಕೆ ಹೋದ ಮಹಿಳೆ ನಾಪತ್ತೆ



ಯಳಂದೂರು: ತಾಲೂಕಿನ ಯರಿಯೂರು ಗ್ರಾಮದ ಮಹೇಶರವರ ಪತ್ನಿ ಉಮಾ(34 ವರ್ಷ) ಎಂಬುವರು ದಿನಾಂಕ 16–06–2025 ರಂದು ಬೆಳಿಗ್ಗೆ 10 ಗಂಟೆಯಲ್ಲಿ ಯಳಂದೂರು ಪಟ್ಟಣಕ್ಕೆ ಹೋಗಿಬರುವುದಾಗಿ ಹೇಳಿ ಹೋದವರು ವಾಪಸ್ ಮನೆಗೆ ಬಂದಿರುವುದಿಲ್ಲ ಎಲ್ಲಿಗೆ ಹೋದರೆಂದು ಇದುವರೆಗೂ ಪತ್ತೆ ಆಗಿರುವುದಿಲ್ಲ ಕಾಣೆಯಾದ ಮಹಿಳೆಯ ಗಂಡ ಮಹೇಶ ಎಂಬುವರು ತನ್ನ ಪತ್ನಿಯನ್ನು ಹುಡುಕಿಕೊಡಿ ಎಂದು ಯಳಂದೂರು ಪಟ್ಟಣ ಪೊಲಿಸ್ ಠಾಣೆಗೆ ದೂರು ನೀಡಿದ್ದಾರೆ.

ಕಾಣೆಯಾದ ಮಹಿಳೆ ಚಹರೆ

5.0 ಅಡಿ ಎತ್ತರ, ಎಣ್ಣೆಗೆಂಪು ಮೈ ಬಣ್ಣ, ಹಾಗೂ ಸಾಧಾರಣ ಶರೀರ, ಕೋಲುಮುಖ, ಮನೆಯಿಂದ ಹೋಗುವಾಗ ಕೆಂಪು ಬಣ್ಣದ ಸೀರೆ ಧರಿಸಿರುತ್ತಾರೆ. ಕನ್ನಡ ಭಾಷೆ ಮಾತನಾಡುತ್ತಾರೆ. ಈ ಸಂಬಂಧ ಯಳಂದೂರು ಪಟ್ಟಣ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಮೇಲ್ಕಂಡ ಮಹಿಳೆ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಯಳಂದೂರು ಪೊಲೀಸ್ ಠಾಣೆ 08226–240028, 9480804649, ಜಿಲ್ಲಾ ಪೊಲಿಸ್ ಕಂಟ್ರೋಲ್ ರೂಮ್ 08226–222383ಕ್ಕೆ ಕರೆ ಮಾಡಿ, ತಿಳಿಸಲು ಕೋರಲಾಗಿದೆ.

ಆಲದ ಮರಕ್ಕೆ ಕತ್ತರಿ ತಯಾರಿ ಖಂಡಿಸಿ ಪರಿಸರ ಸಂಘಟನೆಗಳ ಪ್ರತಿಭಟನೆ



ಆಲದ ಮರಗಳನ್ನು ಕಡಿಯಲು ಹರಾಜು ವಿರೋಧಿಸಿ ಪರಿಸರ ಬಳಗ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಯಿತು.

ಗುಂಡ್ಲುಪೇಟೆ, ಜೂ.18– ಪಟ್ಟಣದ ಹೊರವಲಯದಲ್ಲಿರುವ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ನಿಲಯದ ಆವರಣದಲ್ಲಿ ಕಟ್ಟಡ ನಿರ್ಮಿಸಲು 9 ಬೃಹತ್ ಆಲದ ಮರಗಳನ್ನು ಕಡಿಯಲು ಹರಾಜಿಗೆ ಮುಂದಾಗಿರುವ ಅರಣ್ಯ ಇಲಾಖೆ ಕ್ರಮವನ್ನು ಖಂಡಿಸಿ ಪರಿಸರಕ್ಕಾಗಿ ನಾವು ಮತ್ತು ಪರಿಸರ ಬಳಗ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ವಸತಿ ಶಾಲೆ ಆವರಣದಲ್ಲಿ ಜಮಾಯಿಸಿದ ಪರಿಸರ ಸಂಘಟನೆಗಳ ಪದಾಧಿಕಾರಿಗಳು, ಪರಿಸರ ಪ್ರೇಮಿಗಳು ಅರಣ್ಯ ಇಲಾಖೆ ನಿರ್ಧಾರವನ್ನು ಖಂಡಿಸಿ, ಮೌನ ಪ್ರತಿಭಟನೆ ನಡೆಸಿದರು. ಶತಮಾನದಷ್ಟು ಹಳೆಯದಾದ 9 ಆಲದ ಮರಗಳ ಕಡಿತಕ್ಕೆ ಮುಂದಾಗಿರುವುದು ಅತ್ಯಂತ ಖಂಡನೀಯ. ಶಾಲೆ ಆವರಣದಲ್ಲಿ ಮರಗಳು ಇಲ್ಲದ ಜಾಗವನ್ನು ಕಟ್ಟಡ ಕಟ್ಟಲು ಬಳಸಲಿ. ಆದರೆ ಮರಗಳು ಇರುವ ಜಾಗದಲ್ಲೇ ಕಟ್ಟಡ ಕಟ್ಟಬೇಕು ಎನ್ನುವ ನಿರ್ಧಾರ ಸರಿಯಲ್ಲ. ಅಲ್ಲದೆ ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿರುವುದು ತಪ್ಪು ಎಂದು ಆಕ್ರೋಶ ಹೊರಹಾಕಿದರು.

ಪರಿಸರಕ್ಕಾಗಿ ನಾವು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ಜಾಗತಿಕ ತಾಪಮಾನ ದಿನೇದಿನೆ ಹೆಚ್ಚಾಗುತ್ತಿದೆ. ಇರುವ ಮರಗಳನ್ನು ಉಳಿಸಿಕೊಂಡು, ಇನ್ನೂ ಹೆಚ್ಚಿನ ಮರಗಳನ್ನು ಬೆಳೆಸುವ ಸಂದರ್ಭದಲ್ಲಿ ಮರಗಳನ್ನು ಕಡಿಯಲು ಮುಂದಾಗಿರುವುದು ಸರಿಯಲ್ಲ. ಕೂಡಲೇ ಈ ನಿರ್ಧಾರವನ್ನು ಅರಣ್ಯ ಇಲಾಖೆ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಪಿಯುಸಿಎಲ್ ಮೈಸೂರು ಜಿಲ್ಲಾಧ್ಯಕ್ಷ ಕಮಲ್ ಗೋಪಿನಾಥ್, ಪರಿಸರಕ್ಕಾಗಿ ನಾವು ಸಂಘಟನೆಯ ಲೀಲಾ ವೆಂಕಟೇಶ್, ಭಾಗ್ಯ ಕಾಮಾಕ್ಷಿಗೌಡ, ಶ್ವೇತಾ, ಸುಮತಿ, ಸುಶೀಲಾ, ಸುಗುಣ, ಇಂದಿರಾ, ಅರುಣ್, ಭಾನುಪ್ರಕಾಶ್, ಮನ್ಸೂರ್, ಅಕ್ಬರ್, ಶೈಲಜೇಶ್, ಮಡಹಳ್ಳಿ ಮಣಿ, ಎ.ಆರ್.ಸುಬ್ಬರಾವ್, ವೀರನಪುರ ನಾಗಪ್ಪ ಮತ್ತಿತರರಿದ್ದರು.

ಹರಾಜು ರದ್ದುಪಡಿಸುವ ಆಶ್ವಾಸನೆ...

ಪರಸರ ಸಂಘಟನೆಗಳ ಹೋರಾಟಕ್ಕೆ ಮಣಿದ ಅರಣ್ಯ ಇಲಾಖೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್, ಈ ವಿಷಯದ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಹರಾಜನ್ನು ರದ್ದುಪಡಿಸಲಾಗುವುದು ಎಂದು ಆಶ್ವಾಸನೆ ನೀಡಿದ್ದಾರೆ.

ವಿಜೃಂಭಣೆಯ ಸಿದ್ದಪ್ಪಾಜಿ ಕೊಂಡೋತ್ಸವ



ಬಂಡಿಗೆರೆ ಗ್ರಾಮದ ಕಾಳಮ್ಮನ ದೇವಸ್ಥಾನದ ಮುಂಭಾಗ ಸಿದ್ದಪ್ಪಾಜಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಹರದನಹಳ್ಳಿ: ತಾಲೂಕಿನ ಬಂಡಿಗೆರೆ ಗ್ರಾಮದ ಕಾಳಮ್ಮನ ದೇವಸ್ಥಾನದ ಮುಂಭಾಗ ಸಿದ್ದಪ್ಪಾಜಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.

ಸತ್ತಿಗೆ, ಸುರಪಾನಿ, ಬಿದಿರು ಬಾವಲಿಗಳೊಂದಿಗೆ ಗೋಮುಕೇಶ್ವರ ದೇವಸ್ಥಾನದಲ್ಲಿ ವಿವಿಧ ಬಗೆಯ ಹೂಗಳೊಂದಿಗೆ ಪೂಜೆ ಮಾಡಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕಲಾ ತಂಡಗಳ ಜೊತೆಯಲ್ಲಿ ಕಂಸಾಳೆ ಬ್ಯಾಂಡ್‌ಸೆಟ್‌ನೊಂದಿಗೆ ಮೆರವಣಿಗೆ ನಡೆಸಲಾಯಿತು. ಬೆಳಗ್ಗೆ 11:30ಕ್ಕೆ ಕಾಳಮ್ಮನವರ ದೇವಸ್ಥಾನದಲ್ಲಿ ಅದ್ಧೂರಿಯಾಗಿ ಕೊಂಡೋತ್ಸವ ನಡೆಯಿತು.

ಶಾಸಕ ಸಿ. ಪುಟ್ಟರಂಗಶೆಟ್ಟಿ, ಗ್ರಾಮದ ಮುಖಂಡರು ಸೇರಿದಂತೆ ಸುಮಾರು 2 ಸಾವಿರಕ್ಕೂ ಹೆಚ್ಚು ಜನರು ಕೊಂಡೋತ್ಸವದಲ್ಲಿ ಪಾಲ್ಗೊಂಡಿದ್ದರು. ಶ್ರೀಕಾಳಮ್ಮನವರ ಮತ್ತು ಗುಂಟಮ್ಮನವರ ಹಾಗೂ ಸಿದ್ದಪ್ಪಾಜಿಯವರ ಕೊಂಡೋತ್ಸವಕ್ಕೆ ಅಗ್ನಿ ಸ್ಪರ್ಶ ಮಾಡಲಾಗಿತ್ತು.

ಎನ್‌ಎಂಎಂಎಸ್ ಫಲಿತಾಂಶ ಪ್ರಕಟ; ಮೈಸೂರು ಜಿಲ್ಲೆಯ 292 ವಿದ್ಯಾರ್ಥಿಗಳು ಆಯ್ಕೆ

ಮೈಸೂರು,ಜೂ.18– ಕೇಂದ್ರ ಸರ್ಕಾರದಿಂದ, ಸರ್ಕಾರಿ ಮತ್ತು ಅನುದಾನಿತ ಶೈಕ್ಷಣಿಕ ಸಂಸ್ಥೆಗಳಲ್ಲಿ 9ನೇ ತರಗತಿಯಿಂದ 12 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೊಡಮಾಡುವ ಎನ್‌ಎಂಎಂಎಸ್ ವಿದ್ಯಾರ್ಥಿವೇತನದ 2024–25ನೇ ಆಯ್ಕೆ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಜಿಲ್ಲೆಯಲ್ಲಿ 292 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಈ ಯೋಜನೆಯಡಿ ಜಿಲ್ಲೆಗೆ 274 ವಿದ್ಯಾರ್ಥಿಗಳನ್ನು ನಿಗಧಿಗೊಳಿಸಿದ್ದು, ಇದನ್ನು ಮೀರಿ 18 ವಿದ್ಯಾರ್ಥಿಗಳು ಹೆಚ್ಚುವರಿ ಆಯ್ಕೆಯಾಗಿದ್ದಾರೆ.

ಈ ಯೋಜನೆಯಡಿ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ 9ನೇ ತರಗತಿಯಿಂದ 12ನೇ ತರಗತಿವರೆಗೆ ಪ್ರತಿ ವರ್ಷ 12000/– ರೂ.ಗಳ ವಿದ್ಯಾರ್ಥಿ ವೇತನವನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುತ್ತದೆ. ಈ ಬಾರಿ ಮೈಸೂರು ಗ್ರಾಮಾಂತರ ಬ್ಲಾಕ್‌ನಿಂದ 78 ವಿದ್ಯಾರ್ಥಿಗಳು, ಮೈಸೂರು ದಕ್ಷಿಣ–51, ಟಿ.ನರಸೀಪುರ–42, ನಂಜನಗೂಡು–34, ಹುಣಸೂರು–24, ಮೈಸೂರು ಉತ್ತರ–22, ಕೆ.ಆರ್.ನಗರ ಹಾಗೂ ಹೆಚ್.ಡಿ.ಕೋಟೆ–18, ಪಿರಿಯಾಪಟ್ಟಣ ಬ್ಲಾಕ್‌ನಿಂದ 05 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳ ಪೈಕಿ ಆದರ್ಶ ವಿದ್ಯಾಲಯಗಳ 98, ಕೆ.ಪಿ.ಎಸ್ ಶಾಲೆಗಳ 20, ಸರ್ಕಾರಿ ಪ್ರೌಢಶಾಲೆಗಳ 58 ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ 45 ವಿದ್ಯಾರ್ಥಿಗಳು ಸೇರಿ ಸರ್ಕಾರಿ ಶಾಲೆಗಳ 221 ವಿದ್ಯಾರ್ಥಿಗಳು(ಶೇ.75.68) ಹಾಗೂ ಅನುದಾನಿತ ಸಂಸ್ಥೆಗಳಿಂದ 71 (ಶೇ.24.31) ವಿದ್ಯಾರ್ಥಿಗಳಿರುತ್ತಾರೆ.

2025–26ನೇ ಸಾಲಿಗೆ ಅರ್ಜಿ ಸಲ್ಲಿಕೆ ಪ್ರಾರಂಭ: ಹೊಸದಾಗಿ ಆಯ್ಕೆಯಾಗಿರುವ ವಿದ್ಯಾರ್ಥಿಗಳು ಸೇರಿದಂತೆ, ಈ ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿವೇತನ ಪಡೆದು 2025–26ನೇ ಸಾಲಿನಲ್ಲಿ ಸರ್ಕಾರಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳಲ್ಲಿ 9 ರಿಂದ 12ನೇ ತರಗತಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳು ನ್ಯಾಷನಲ್ ಸ್ಕಾಲರ್‌ಶಿಪ್ ಪೋರ್ಟಲ್ ಮೂಲಕ ಬ್ಯಾಂಕ್ ಖಾತೆ ಇತ್ಯಾದಿ ವಿವರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಎನ್‌ಎಂಎಂಎಸ್ ನೋಡಲ್ ಅಧಿಕಾರಿಗಳಿಂದ ಹಾಗೂ ಆಯಾ ಶೈಕ್ಷಣಿಕ ಸಂಸ್ಥೆ ಮುಖ್ಯಸ್ಥರಿಂದ ಪಡೆದುಕೊಳ್ಳಬಹುದಾಗಿದೆ ಎಂದು ಮೈಸೂರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲೆಗಳಲ್ಲಿ ಮಧ್ಯಾಹ್ನದ ಅಡುಗೆ ತಯಾರಿಸುವವರ ಗೌರವ ಧನ ಹೆಚ್ಚಳ

ಮೈಸೂರು, ಜೂ.18(ಎಸ್‌ಪಿಎನ್)– 2025–26ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಣೆಯಂತೆ ಶಾಲೆಗಳಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಅಡುಗೆ ತಯಾರಕರು, ಸಹಾಯಕ ಅಡುಗೆ ತಯಾರಕರಿಗೆ ನೀಡಲಾಗುತ್ತಿರುವ ಮಾಸಿಕ ಗೌರವ ಸಂಭಾವನೆಯನ್ನು ಸಾವಿರ ರೂ.ಗಳಷ್ಟು ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಪ್ರಸ್ತುತ ಮುಖ್ಯ ಅಡುಗೆ ತಯಾರಕರಿಗೆ 3,700 ಮತ್ತು ಸಹಾಯಕ ಅಡುಗೆಯವರಿಗೆ 3,600 ರೂ. ನೀಡುತ್ತಿದ್ದು, ಕೇಂದ್ರದಿಂದ 600 ರೂ., ರಾಜ್ಯದಿಂದ 400 ರೂ., ಸೇರಿಸಿ ಒಟ್ಟು ಸಾವಿರ ರೂ. ಹೆಚ್ಚಿಸಿದೆ. ಹಾಗಾಗಿ ರಾಜ್ಯದ ಎಲ್ಲಾ 31 ಜಿಪಂ ಸಿಇಓಗಳು ಮತ್ತು ತಾಲೂಕು ಇಓಗಳು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದೆ.

ಶೈಕ್ಷಣಿಕ ಜಿಲ್ಲೆಗಳು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸದರಿ ಆದೇಶವನ್ನು ಅನುಷ್ಠಾನಗೊಳಿಸಬೇಕು. ಈ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಅಡುಗೆಯವರು, ಸಹಾಯಕ ಅಡುಗೆಯವರಿಗೆ ಹೆಚ್ಚಿಸಲಾಗಿರುವ ಸಾವಿರ ರೂ. ಮಾಸಿಕ ಸಂಭಾವನೆ ಮೊತ್ತವನ್ನು ಪಾವತಿಸಲು ಅಗತ್ಯವಿರುವ ಅನುದಾನವನ್ನು ರಾಜ್ಯ ಕ್ಷೀರ ಭಾಗ್ಯ ಯೋಜನೆಯಡಿ ಪಾವತಿಸತಕ್ಕದ್ದು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಡಾ.ಕೆ.ವಿ.ತ್ರಿಲೋಕ ಚಂದ್ರ ಆದೇಶಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸಮುದಾಯ ಭವನ ಲಭ್ಯವಿದೆ
ನೂತನವಾಗಿ ಆರಂಭವಾಗಿರುವ 200 ಜನರ ಆಸನ ಸಾಮರ್ಥ್ಯ ಹಾಗೂ ಎಲ್ಲಾ ಸೌಕರ್ಯವುಳ್ಳ
ಆರೋಗ್ಯಮಾತೆ ಸಮುದಾಯ ಭವನ
ಮದುವೆ / ನಿಶ್ಚಿತಾರ್ಥ / ಜನ್ಮದಿನ ಹಾಗೂ ಶುಭ ಸಮಾರಂಭಗಳಿಗೆ ಲಭ್ಯವಿದೆ
ವಿಳಾಸ: ಹುಲಿಕೆರೆ, ಕೆ.ಆರ್.ಎಸ್. ರಸ್ತೆ, ಮೈಸೂರು
ಸಂಪರ್ಕಿಸಿ: 9739785892

RAI ESTATES
RERA APPROVED · MUDA APPROVED
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
9448181488, 9945061604
VEEYES RAIESTATES PRIVATE LIMITED
#10, 1st Floor, New Sayyaji Rao Road, Bamboo Bazar, Mysuru - 570 001

ಸೈಟು ಮಾರಾಟಕ್ಕಿದೆ
30x40, 11A ಖಾತಾ ಅಳತೆಯುಳ್ಳ ಸೈಟು ಮಾರಾಟಕ್ಕಿದೆ. ಬ್ಯಾಂಕ್ ಸಾಲ ಪಡೆಯುವ ಅನುಕೂಲ ಇದೆ. ಕೇರ್ಗಳ್ಳಿ ಪಕ್ಕ ತಿಬ್ಬಯ್ಯನ ಹುಂಡಿ.
9035224728, 9880379896
ಬ್ರೋಕರ್‌ಗೆ ಅವಕಾಶವಿಲ್ಲ

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Part time Salary Rs. 10,000. (Sunday: 10.30 to 3 pm) per month. For evening: (Male only). 7.00 pm to 11.30 pm. Salary: Rs. 10,000/- per month.
7349337469, 9448525072

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು **ಮ್ಯಾನೇಜರ್ ಹುದ್ದೆ** (ಉತ್ತಮ ಇಂಗ್ಲೀಷ್, ಹಿಂದಿ ಮಾತನಾಡಬಲ್ಲರು) ಹಾಗೂ **ಆಫೀಸ್ ಬಾಯ್** ಹುಡುಗ/ಹುಡುಗಿ ಬೇಕಾಗಿದ್ದಾರೆ.
9448415584
9380393866

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್
ಊಟ ವಸತಿ ದೊರೆಯುತ್ತದೆ
9110455297

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8660486818

ಟೀಚರ್ಸ್ ಟ್ರೇನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕು ?
SSLC, P U C, Diploma, Degree, NURSERY TEACHERS TRAINING, PRIMARY TEACHERS TRAINING
ಟ್ರೈನಿಂಗ್ ನಂತರ ತಕ್ಷಣ ಕೆಲಸ. ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ
I PUC ಓದುತ್ತಿರುವವರು ಸಹ ಸೇರಬಹುದು
JNANA GANGOTHRI CONVENT
Watsapp / Call 9113980741

ಉಚಿತ ಬ್ಯೂಟೀಷಿಯನ್ ತರಬೇತಿ
ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಉಚಿತವಾಗಿ 25 ತರಹದ ವಿವಿಧ ತರಬೇತಿಯನ್ನು ಕೊಡಲಾಗುತ್ತದೆ. ತರಬೇತಿಯನ್ನು ಪಡೆಯಲು ಇಚ್ಛಿಸುವವರು ಸಂಪರ್ಕಿಸಿ. ಶಾರದಾದೇವಿನಗರ
Mob: 9964874954

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

WE ARE HIRING
BUSINESS MARKETING EXECUTIVE - 06 Nos
- Qualification : BBA, B.Com or MBA
- Experience : 0-2 Years
- Salary Best in the Industry

MYSORE PRIDE MEMBERS
Call: 94493 52311

ಪೂಜಾ ಗೋಲ್ಡ್
Mysore, Mandya ಮಾರ್ಕೆಟಿಂಗ್
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಫೀಲ್ಡ್ ವರ್ಕ್ ಕೆಲಸವಾಗಿರುತ್ತದೆ
15 ರಿಂದ 20000 ಸಾವಿರ ಸಂಬಳ ನೀಡಲಾಗುವುದು, ಬೈಕ್ ಕಡ್ಡಾಯ
9591044013

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

WANTED
Teaching staff for reputed Institution Montessori and Spoken English.
Transport facilities available. Drop your resume through Whatsapp. Contact No.
8971577685, 9980631121

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 55 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ. SSLC ವಿದ್ಯಾರ್ಹತೆ ಇರಬೇಕು. ಹಿನಕಲ್, ಹೂಟಗಳ್ಳಿ, ವಿಜಯನಗರ, ಹೆಬ್ಬಾಳ, ಟಿ.ಕೆ. ಲೇಔಟ್, ಗೋಕುಲಂ, ಪಡುವಾರಹಳ್ಳಿ, ಒಂಟಿಕೊಪ್ಪಲ್, ವಸಂತನಗರ, ಶಾರದಾದೇವಿನಗರ, ವಿಜಯಪುರ ಹಾಗೂ ಬೋಗಾದಿ ಸುತ್ತಮುತ್ತಲಿನವರು ಸಂಪರ್ಕಿಸಿ:
Mob: 7259598615

ಬೇಕಾಗಿದ್ದಾರೆ
ಮೈಸೂರಿನ ದಟ್ಟಗಳ್ಳಿ (Apartment) ಸುತ್ತಮುತ್ತ ಕಾರ್ಯನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯಸ್ಸು: 18–45. ESI & PF ಸೌಲಭ್ಯ ಇರುತ್ತದೆ.
ನಿಮಿಷಾಂಬ ಸೆಕ್ಯೂರಿಟಿ ಬ್ಯೂರೋ ಮತ್ತು ಯುಟಿಲಿಟಿ ಸರ್ವೀಸಸ್
#380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು.
Mob: 9606023463

ರೂ. 2000ಕ್ಕೆ
ದಪ್ಪನೆಯ ಡಬಲ್ ಕಾಟ್ ಹಾಸಿಗೆ, 2 ದಿಂಬು, ದಿಂಬಿನ ಕವರ್, ಬೆಡ್ ಶೀಟ್, ಸೂಟ್‌ಕೇಸ್ ರಗ್ಗು ಎಲ್ಲಾ ಸೇರಿ ರೂ. 2,000/-.
Mob: 8884179981

SITES WANTED
@ Nagawala, Yelwala, Dadadahally, Mandakally, Vijyanagar & Mysore Surroundings.
Quick Registration
Mob: 95388 39926

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ವಾಟ್ಸಾಪ್ ಟೈಪಿಂಗ್, ಮತ್ತು ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 2000 ದಿಂದ 30,000 ವರೆಗೆ. ಕರೆ ಮಾಡಿ: ದಿವ್ಯ
Mob: 8904136612

ಬೇಕಾಗಿದ್ದಾರೆ
ಪಾಲುದಾರರು / ಹೂಡಿಕೆದಾರರು ನಿತ್ಯ ಬಳಕೆ ವಸ್ತುಗಳ ತಯಾರಿಕಾ ಕಾರ್ಖಾನೆಗೆ ಉತ್ತಮ ಆದಾಯ ವಿರುವ ಉದ್ಯಮಕ್ಕೆ, 20 ರಿಂದ 50 ಲಕ್ಷಗಳವರೆಗೆ ಹೂಡಿಕೆ ಮಾಡಲು ಪಾಲುದಾರರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 8884455552

ಬೇಕಾಗಿದ್ದಾರೆ
ಮೈಸೂರಿನಲ್ಲಿ 24 ಅಡಿ ವಾಹನಗಳಿಗೆ ಚಾಲಕರು ಬೇಕಾಗಿದ್ದಾರೆ. ಇಎಸ್‌ಐ, ಪಿಎಫ್ ಮತ್ತು ಬಾಟಾ ಸಹಿತ ಉತ್ತಮ ಸಂಬಳ. ಸಂಪರ್ಕಿಸಿ:
8050549720, 7019664461

ಮನೆ ಮಾರಾಟಕ್ಕೆ ಇದೆ
20x30 MUDA ಹೆಬ್ಬಾಳ್ 1ನೇ ಹಂತ, ರಿಂಗ್ ರೋಡ್, ಕಲ್ಯಾಣಿ ಹೋಟೆಲ್ ಹಿಂಭಾಗ, ಮೈಸೂರು.
Mob: 8549065443

SRV Educational Institution
Hosa Anandur, Next to J.K. Tyre
REQUIRED TEACHERS for High School.
Qualification: B.Ed. (English medium)
9902323740, 9008900883

To Let ಬಾಡಿಗೆಗೆ ದೊರೆಯುತ್ತದೆ
1000 sq.ft. office space, 1st Floor Main Road, Opp. Ashokapuram Rly Station, 1.5 km from Courts. Latest facilities.
9243505777, 9448308510

SITES FOR SALE
- ಪೋಲೀಸ್ ಲೇಔಟ್ ರಿಂಗ್ ರಸ್ತೆ ಹತ್ತಿರ 30x40 - 66, 40x45 - 96 ಲಕ್ಷ.
- J.P. ನಗರ 11 B ಕಮರ್ಷಿಯಲ್ 30x40 ಕಾರ್ನರ್ ಸೈಟ್ – 42 ಲಕ್ಷ.
- ಶ್ರೀನಗರ ರಾಷ್ಟ್ರೋತ್ಥಾನ ಸ್ಕೂಲ್ ಬಸ್ ರೂಟ್ – 32 ಲಕ್ಷ ನಂತರ.
- ಬೋಗಾದಿ – ಇಲವಾಲದಲ್ಲೂ ಲಭ್ಯ

BROKERS EXCUSE
Mob: 9742878878

30x40 / 30x50 Sites
ತಕ್ಷಣ ಮನೆ ಕಟ್ಟಲು ಲಭ್ಯ. ಅರಮನೆಯಿಂದ – 7 ಕಿ.ಮೀ
- ಆಲನಹಳ್ಳಿ ಟಿ.ಎನ್. ಪುರ ಮುಖ್ಯ ರಸ್ತೆಗೆ 400 ಮೀಟರ್. ಬೆಲೆ 55 – 64 ಲಕ್ಷ.
- ಜೆ.ಪಿ. ನಗರ ಶ್ರೀರಾಂಪುರ ರಿಂಗ್ ರಸ್ತೆಗೆ 300 ಮೀಟರ್ – 54 ಲಕ್ಷ.
- ಬನ್ನೂರು ರಸ್ತೆ, ವಿದ್ಯಾವಿಕಾಸ್ – 45 ಲಕ್ಷ.

Brokers Excuse. No Commission
Mob: 8123075038

ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್ (RTO office ಸುತ್ತ ಮುತ್ತ) 2) ಸೆಕ್ಯೂರಿಟಿ ಗಾರ್ಡ್‌ಗಳು (ಪುರುಷರು) (ಬಲ್ಲಾಳ್ ಸರ್ಕಲ್, ನಂಜುಮಳಿಗೆ ಬಿಳಿಕೆರೆ ಸುತ್ತ ಮುತ್ತ). 3) ಹೌಸ್ ಕೀಪಿಂಗ್ (ಪುರುಷರು) – ಬಿಳಿಕೆರೆ. ಆಕರ್ಷಕ ಸಂಬಳ, ಜೊತೆಗೆ ESI, PF ಕೊಡುತ್ತೇವೆ.
Mob: 8217563349, 8867197599, 9148975329

AVAILABLE FOR RENT
900 sq.ft. high roof RCC godown and 1900 sq.ft. sheet roof godown prime location, main road, 40' Road, J.P. Nagar. Interested please
Contact Mob: 9739816440

ಸುವರ್ಣಾವಕಾಶ
ಪ್ರಸಿದ್ಧ ಶೋರೂಂ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ ಯುವಕರು ಮತ್ತು ಯುವತಿಯರು, 22,000 ಸಂಬಳ. 100% ಗ್ಯಾರಂಟಿ ಕೆಲಸ.
9482369816, 9482360136

ಜಮೀನು ಭೋಗ್ಯಕ್ಕಿದೆ
ಹುಣಸೂರು ಮತ್ತು ಮೈಸೂರು ರಸ್ತೆ ಕುಪ್ಪೆ ಗ್ರಾಮದ ಬಳಿಯಿರುವ 2.5 ಎಕರೆ ಜಮೀನು ವ್ಯವಹಾರಕ್ಕೆ ದೊರೆಯುತ್ತದೆ. ಬಿಸಿನೆಸ್ ಮಾಡಲು ಪಾಲಿಹೌಸ್, ಹೈನುಗಾರಿಕೆ ಇತರೆ ವ್ಯವಹಾರಕ್ಕೆ ನೀರು + ಬೇಲಿ + ಸಣ್ಣ ಮನೆಯಿರುವ ಜಮೀನು ದೊರೆಯುತ್ತದೆ.
Mob: 7899141359

SITE FOR SALE
40x60 North Site for Sale at Roopa Nagar.
Call: 9880273834

Solar Water Heater

V-GUARD
10 ವರ್ಷಗಳ ವಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

REQUIRED
LADY WARDEN
AGE BETWEEN 21 TO 35. QUALIFICATION: ANY DEGREE. FRESHERS CAN ALSO APPLY. WARDEN NEED TO STAY IN THE HOSTEL. ACCOMODATION WITH FOOD IS FREE. SALARY - Rs.12000/-
LOCATION - MYSORE CITY (BANNIMANTAP).
MOB: 9964242430

SITE FOR SALE
30x40 East face site, Gayathri Layout (Near Dattagalli).
Call: 9880273834

WE ARE HIRING
Sleepwave Mattress Pvt. Ltd., Mysore
1) Sales Executive - 1 to 2 years experience. 2) Marketing Manager - 1 to 2 year experience. 3) Accountant (Experienced / fresher). Salary range: 12,000 to 35000 (Based on experience). Location: Mysore.
Mob: 9036824741
Email id: sleepwavemysore@gmail.com

Old House for Sale
Measuring 30x40, 2 bedrooms at Jayanagar, Mysore. Brokers Excuse. Please contact:
Mob: 7795984607

ಹೊಸ ಮನೆ ಮಾರಾಟಕ್ಕಿದೆ
20x30 Duplex, 3 BHK ಯೂನಿವರ್ಸಿಟಿ ಲೇಔಟ್, ಮೈಸೂರು.
Mob: 9739825766

ಡ್ರೈವರ್ ಬೇಕಾಗಿದ್ದಾರೆ
ಮೈಸೂರಿನಲ್ಲಿ "Innova Crysta" ಕಾರು ಚಲಾಯಿಸಲು ಅನುಭವವುಳ್ಳ ಕಾರು ಚಾಲಕ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಭತ್ಯೆ ನೀಡಲಾಗುವುದು.
Mob: 9845187246

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ 7Th, 10th PUC Diploma any degree pass or fail ಹಾಗು front office ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 15000 ರಿಂದ 30000 ರ ವರೆಗೆ. ವಿ. ಸೂ : ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ age below 35. Years. Android Mobile ಹಾಗೂ Two wheeler ಇರಬೇಕು. ಸಂಪರ್ಕಿಸಿ :
ಭರತ್ ಕುಮಾರ್: 9880151303

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SITE FOR SALE
Size: 21x42.5, West facing, Opposite to Lakshmi Theatre, K.R. Mohalla, Mysore. Contact:
Mob: 9035588489

ಕಳೆದಿದೆ
ಎಂ.ಆರ್. ಭಾಗ್ಯಲಕ್ಷ್ಮೀ, ಮನೆ ನಂ. ಐಡಬ್ಲ್ಯೂಎಸ್ 95, ಕೆಹೆಚ್‌ಬಿ 1ನೇ ಫೇಸ್, ಜೆಟಿಕೆ ಕುವೆಂಪುನಗರ, ಮೈಸೂರು, ನಮಗೆ ಸೇರಿದ ಈ ಮೇಲಿನ ಸ್ವತ್ತಿನ ಮೂಲ ಸ್ವಾಧೀನ ಪತ್ರ ಕಳೆದುಹೋಗಿದೆ. Document No. 299 80 Dtd. 9-6-1980, measurement 20x45). ಸಿಕ್ಕಿದವರು ಈ ಮೊಬೈಲ್ ಅನ್ನು ಸಂಪರ್ಕಿಸಿ. 9739360178

ಬೇಕಾಗಿದ್ದಾರೆ
ಗೃಹಿಣಿ ಸ್ತ್ರೀಯರಿಗೆ ಆದ್ಯತೆ
ಎಂಎನ್‌ಸಿ ಕಂಪನಿಯಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿ ಯಾವುದೇ ಬಂಡವಾಳ ಹೂಡಿಕೆಯಿಲ್ಲ, ಪಾರ್ಟ್ ಟೈಂ ಹಾಗೂ ಫುಲ್ ಟೈಂ ಯಾವುದೇ ವಿದ್ಯಾರ್ಹತೆ ಇಲ್ಲ, ಯಾವುದೇ ಟಾರ್ಗೆಟ್ ಇಲ್ಲ. ಸಂಪರ್ಕಿಸಿ.
Mob: 8197945400

ಬೇಕಾಗಿದ್ದಾರೆ
ಫರ್ನಿಷಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ ಕೆಲಸಕ್ಕೆ
1 Year Experience ಇರುವವರು ಬೇಕಾಗಿದ್ದಾರೆ
Near Ashoka Road
ಸಂಪರ್ಕಿಸಿ: 9916514950

ITI ಗೆ ಪ್ರವೇಶಾವಕಾಶ
ITI (Fitter-NSQF) ವೃತ್ತಿಗೆ SSLC/PUC Pass Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ವಿರುತ್ತದೆ. N.C.V.T ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತವೆ.
Also Admission for Nursery, LKG & UKG
BENAKA ITI College, Near Cauvery Circle, Dr. Rajkumar Road, Raghavendra Nagar, Mysore.
9342123467 / 9141756695

ಬೇಕಾಗಿದ್ದಾರೆ
1) ಸಪ್ಲೈಯರ್ ಹಾಗೂ ಕುಕ್ ಅಸಿಸ್ಟೆಂಟ್ ಬೇಕಾಗಿದ್ದಾರೆ. (ನಾನ್‌ವೆಜ್ ಹೋಟೆಲ್, ಸರಸ್ವತಿಪುರಂ, ಮೈಸೂರು)
Mob: 9738405038

ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
(ಸಂಬಳ 10,000 + incentive).
Field Executives ಬೇಕಾಗಿದ್ದಾರೆ. (ಸಂಬಳ 15,000)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್. ಮೊಹಲ್ಲಾ.
Mob: 8150005111

FOR SALE
1. 20x30 G+1, M Block, Kuvempunagar
2. 20 Acres Cultivated Land With Farm House, Complete Fencing and CC Camera Security Near T Narsipura Road.
3. 27x60 & 30x45 Commercial present Old House @ Jayanagar
4. 30x40 Sites Near RT Nagar Telecom Layout @ Just 20 Lakhs
5. 80x78 Krishnamurthy Puram

PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
(ಹೊಸಬರಿಗೆ ಆದ್ಯತೆ)
ಮೈಸೂರಿನ ಮೇಟಗಳ್ಳಿ ಸುತ್ತಮುತ್ತ ಇರುವಂತ ಯುವಕರು ಅಥವಾ ನಿರುದ್ಯೋಗಿಗಳು 18–50 ವಯಸ್ಸುಳ್ಳವರು ಡೆಲಿವರಿ ಬಾಯ್ಸ್ ಆಗಿ (ಪಾರ್ಟ್ ಟೈಂ) ಕೆಲಸ ಮಾಡಲು ಆಸಕ್ತಿವುಳ್ಳವರು ಸಂಪರ್ಕಿಸಿ:
8861061790 (WhatsApp)
8884178844

ಸೈಟುಗಳು ಮಾರಾಟಕ್ಕಿವೆ
30x50, 40x60 ಶ್ರೀರಾಂಪುರ ರಿಂಗ್ ರೋಡ್ ಹತ್ತಿರ, ಮೈಸೂರು
Mob: 8050345574

ಪ್ರವಾಸ
7 ದಿನಗಳ ಕಾಶಿ ಪ್ರವಾಸ 15/7/25,
3 ದಿನಗಳ ಶಿರಡಿ ಪ್ರವಾಸ 18/7/25,
4 ದಿನಗಳ ಪುರಿ ಜಗನ್ನಾಥ ಪ್ರವಾಸ 10/7/25,
5 ದಿನಗಳ ದೆಹಲಿ ಪ್ರವಾಸ 24/7/25
ಸುವರ್ಣ ಯಾತ್ರಾ
6360146483 / 9019462508

ನಿವೇಶನಗಳು ಮಾರಾಟಕ್ಕಿದೆ
ಮೈಸೂರು ಮಡಿಕೇರಿ ಹೈವೆಯಲ್ಲಿ ಬಿಳಿಕೆರೆಯ ಹತ್ತಿರ Investment ಹಾಗೂ ಮನೆ ಕಟ್ಟಲು ಯೋಗ್ಯವಾದ 30x40 ಅಳತೆಯ'A' ಖಾತಾ ಹಾಗೂ ಲೋನ್‌ಗೆ ಯೋಗ್ಯವಾದ ನಿವೇಶನಗಳು ಮಾರಾಟಕ್ಕಿವೆ.
ಸಂಪರ್ಕಿಸಿ: DSS
9845114307, 9945245946

ಕಳೆದಿದೆ
ಪುಟ್ಟಮಾದಯ್ಯ, 523, 1ನೇ ಮೇನ್, 13ನೇ ಕ್ರಾಸ್, ಬಿ.ಎಂ.ಶ್ರೀ ನಗರ, ಮೇಟಗಳ್ಳಿ, ಮೈಸೂರು–16 ಹಾಲಿ ವಾಸವಾಗಿರುವ ಪುಟ್ಟಮಾದಯ್ಯನಾದ ನನ್ನ ಸ್ವತ್ತು ವಸಂತನಗರದ ಮನೆ ನಂ. 378 (Article Property-Title Deed identification No. 967/20-21) ಕಳೆದಿದೆ. ಸಿಕ್ಕವರು ಸಂಪರ್ಕಿಸಿ:
Mob: 9945614772

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಎಂಎನ್‌ಸಿ ಕಂಪನಿಗಳಿಗೆ Showrooms ಗಳಿಗೆ 10th, PUC, ITI, Degree (Pass / fail) ಆದ ಯುವಕ, ಯುವತಿಯರಿಗೆ Back Office, Data Entry, HR, Admin, Accounts, typing, productions line ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 15,000 ರಿಂದ 58,000 (ESI + PF + OT) ಯೊಂದಿಗೆ. ಸಂಪರ್ಕಿಸಿ:
8296833225, 9886488434

ನಿವೇಶನಗಳು ಮಾರಾಟಕ್ಕಿದೆ
ಮೈಸೂರು, ನಂಜನಗೂಡು ಹೈವೆ ತಾಂಡವಪುರದ ಹತ್ತಿರ, Investment ಹಾಗೂ ತಕ್ಷಣ ಮನೆಕಟ್ಟಲು ಯೋಗ್ಯವಾದ 30x40 ಅಳತೆಯ MUDA ನಿವೇಶನಗಳು ಮಾರಾಟಕ್ಕಿದೆ. ಸಂಪರ್ಕಿಸಿ: DSS
9845114304, 9945245946

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ (Male) ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ನಂಜನಗೂಡು, ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ ಮತ್ತು ಹಿನ್‌ಕಲ್.Office Staff wanted in Mysore(Female). Contact:
9886200104, 7829393555.

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡುಗಳು. ಸ್ಥಳ: ದೊಡ್ಡ ಗಡಿಯಾರ ಸುತ್ತಮುತ್ತ ಹಿನಕಲ್ ಸುತ್ತಮುತ್ತ, ಹೆಬ್ಬಾಳ್ ಸುತ್ತಮುತ್ತ.
2) ಸಹಾಯಕರು (Helper), ವಿದ್ಯಾರಣ್ಯಪುರ ಸುತ್ತಮುತ್ತ
7259526261, 9242406261

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ.
9448229184
7899625268

ಒಂದು ಮಳಿಗೆ ಬಾಡಿಗೆಗೆ ಇದೆ, ಇನ್ನೊಂದು ಭೋಗ್ಯಕ್ಕೆ ಇದೆ.
ಇರ್ವಿನ್ ರಸ್ತೆ, ಮೈಸೂರು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
Mob: 9740785524

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು / ಹುಡುಗರು ಬೇಕಾಗಿದ್ದಾರೆ. ಸಂಬಳ: 15,000.
Mob: 78997 54149

ಸೈಟು ಮಾರಾಟಕ್ಕಿದೆ
30x50 DTCP 11'A' ಖಾತೆ ರೇರಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ. 25 ಲಕ್ಷಗಳು. ಶ್ರೀಧರ ಬಡಾವಣೆ (ಬಸ್ ರಸ್ತೆಗೆ ಹತ್ತಿರದಲ್ಲಿದೆ). ತಳೂರು ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು.
Mob: 9742198093

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 12,000 (12 hrs)
ಸ್ಥಳಗಳು: ಕುವೆಂಪುನಗರ, ದೇವರಾಜ ಮೊಹಲ್ಲಾ, ನಜರ್ ಬಾದ್ ಉದ್ಬೂರು, ಮೈಸೂರು ನಗರ
ವಯೋಮಿತಿ: 25 to 60. ಸಂಪರ್ಕಿಸಿ:
Mob: 7483638113

ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ Pvt. Limited A.W. Group of Company ಗೆ SSLC (Pass), PUC, ITI, Dip., any Degree etc. ಆದಂತಹ 149 ಗ್ರಾಮೀಣ | ನಗರದ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ: 18–30 ವರ್ಷಗಳು. ತಿಂಗಳಿಗೆ: 20,000 – 26,000. (ಉಚಿತ ಊಟ + ವಸತಿ + promotion). (Freshers ಗಳಿಗೆ ಹೆಚ್ಚಿನ ಆದ್ಯತೆ).
ಶ್ರೀಷಾ: 7090212014, 7406821955

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಕೇರಳದಲ್ಲಿ ಭಾರೀ ಮಳೆ: ಕಪಿಲಾ ಪ್ರವಾಹದ ಎಚ್ಚರಿಕೆ

● ಕಬಿನಿ ಭರ್ತಿಗೆ ಇನ್ನು 3 ಅಡಿ ಬಾಕಿ ● ಜಲಾಶಯದಿಂದ ನದಿಗೆ 25 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ● ನದಿ ಪಾತ್ರ ಜನರು ಸುರಕ್ಷಿತ ಸ್ಥಳಕ್ಕೆ ತೆರಳಲು ಸೂಚನೆ ● ಹೊರ ಹರಿಸುವ ನೀರಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆ



ಈ ವರ್ಷ ನೀರಿನ ಮಟ್ಟ:
ಜಲಾಶಯದ ಗರಿಷ್ಟ ಮಟ್ಟ 2284 ಅಡಿ
ಇಂದಿನ ಮಟ್ಟ 2281 ಅಡಿ
ಒಳಹರಿವು 22ಸಾವಿರ ಕ್ಯೂಸೆಕ್
ಹೊರಹರಿವು 25ಸಾವಿರ ಕ್ಯೂಸೆಕ್

ಕಳೆದ ವರ್ಷ:
ಗರಿಷ್ಟ ಮಟ್ಟ 2284 ಅಡಿ
ಇಂದಿನ ಮಟ್ಟ 2263 ಅಡಿ
ಒಳಹರಿವು 634 ಕ್ಯೂಸೆಕ್
ಹೊರಹರಿವು 300 ಕ್ಯೂಸೆಕ್



ಕಬಿನಿ ಜಲಾಶಯದಿಂದ ನದಿಗೆ ನೀರು ಬಿಡುತ್ತಿರುವುದು.

ಮೈಸೂರು, ಜೂ.18(ಎಂಟಿವೈ, ಮಂಜು)– ಕೇರಳದ ವೈಯ್ನಾಡು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮುಂಗಾರು ಮಳೆ ಆರ್ಭಟ ಮುಂದುವರೆದಿದ್ದು, ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚಾಗಿದೆ. ಕಪಿಲಾ ನದಿ ಪಾತ್ರದ ಜನರನ್ನು ಸುರಕ್ಷಿತ ಸ್ಥಳಕ್ಕೆ ಹೋಗುವಂತೆ ಎಚ್ಚರಿಕೆ ನೀಡಲಾಗಿದೆ.

ಕಳೆದ ಎರಡು ದಿನಗಳಿಂದ ಕೇರಳದ ವಿವಿಧೆಡೆ ಮಳೆ ರುದ್ರನರ್ತನ ಹೆಚ್ಚಾಗಿದ್ದು, ಕಬಿನಿ ಜಲಾಶಯಕ್ಕೆ ಹರಿದು ಬರುವ ನೀರಿನ ಪ್ರಮಾಣ ದುಪ್ಪಟ್ಟಾಗಿದೆ. 2284 ಅಡಿ ಎತ್ತರವಿರುವ ಕಬಿನಿ ಜಲಾಶಯಕ್ಕೆ ಬುಧವಾರ ಸಂಜೆ 5 ಗಂಟೆ ವೇಳೆಗೆ 23,775 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಲ್ಲಿ ನೀರಿನ ಮಟ್ಟ 2281 ಅಡಿ ತಲುಪಿದೆ. ಜಲಾಶಯ ಭರ್ತಿಯಾಗಲು ಕೇವಲ 3 ಅಡಿ ಮಾತ್ರವಿದ್ದು, ಜಲಾಶಯದ ಸುರಕ್ಷತೆಗಾಗಿ ಕಪಿಲಾ ನದಿಗೆ 25 ಸಾವಿರ ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಕೇರಳದಲ್ಲಿ ಇನ್ನು 3–4 ದಿನ ಭಾರಿ ಪ್ರಮಾಣದ ಮಳೆ ಬೀಳುವ ಸಾಧ್ಯತೆಯಿದ್ದು, ಕಬಿನಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಒಳ ಹರಿವಿನ ಪ್ರಮಾಣಕ್ಕೆ ಅನುಗುಣವಾಗಿ ನದಿಗೆ ಹೆಚ್ಚಿನ ಪ್ರಮಾಣದ ನೀರು ಬಿಡುವ ಸಾಧ್ಯತೆ ಇರುವುದರಿಂದ ನದಿ ಪಾತ್ರದ ಜನರಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ.


ಈಗಾಗಲೇ 25 ಸಾವಿರ ಕ್ಯೂಸೆಕ್ ನೀರು ಕಪಿಲಾ ನದಿಯಲ್ಲಿ ಹರಿಯುತ್ತಿರುವುದರಿಂದ ನದಿ ಪಾತ್ರದ ತಗ್ಗು ಪ್ರದೇಶದಲ್ಲಿ ವಾಸಿಸುವ ಜನರು ತಮ್ಮ ಜಾನುವಾರುಗಳೊಂದಿಗೆ ಸುರಕ್ಷಿತ ಪ್ರದೇಶಕ್ಕೆ ತೆರಳುವಂತೆ ಸಲಹೆ ನೀಡಲಾಗಿದೆ. ಬುಧವಾರ ಮಧ್ಯಾಹ್ನದಿಂದಲೇ ಕಾವೇರಿ ನೀರಾವರಿ ಇಲಾಖೆಯ ಅಧಿಕಾರಿಗಳು ಹೆಚ್.ಡಿ.ಕೋಟೆ, ನಂಜನಗೂಡು ತಾಲೂಕಿನ ನದಿ ಪಾತ್ರದ ಗ್ರಾಮಗಳಲ್ಲಿ ನದಿಯಲ್ಲಿ ಉಂಟಾಗಬಹುದಾದ ಪ್ರವಾಹ ಪರಿಸ್ಥಿತಿಯ ಬಗ್ಗೆ ಜನರಿಗೆ ಮಾಹಿತಿ ನೀಡಿದ್ದು, ನದಿಗೆ ಇಳಿಯದಂತೆ ಮನವಿ ಮಾಡಿದ್ದಾರೆ.

ಸೇತುವೆ ಮುಳುಗಡೆ: ಕಬಿನಿ ಜಲಾಶಯದ ನಾಲ್ಕು ಕ್ರಸ್ಟ್ ಗೇಟ್‌ಗಳಿಂದ 25ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಟ್ಟ ಹಿನ್ನೆಲೆಯಲ್ಲಿ ಜಲಾಶಯದ ಮುಂಭಾಗದ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ. ಇದರಿಂದ ಹ್ಯಾಂಡ್ ಪೋಸ್ಟ್‌ನಿಂದ ಎನ್.ಬೇಗೂರಿಗೆ ತೆರಳುವ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ. ಜಲಾಶಯದ ಮುಂಭಾಗವಿರುವ ಸೇತುವೆಯಿಂದ ತಾಲೂಕಿನ ಬಿದರಹಳ್ಳಿ, ಹೊಸಬೀದರಹಳ್ಳಿ, ನಂಜನಾಥಪುರ, ಬಸಾಪುರ, ಕಳಸೂರು, ಕೆಂಚನಹಳ್ಳಿ, ಮೂರ್ ಬಾಂದ್, ಬೋರೇದೇವರ ಮುಂಟಿ, ಬೀಮನಕೊಲ್ಲಿ, ಎನ್.ಬೇಗೂರು, ಜಕ್ಕಳ್ಳಿಮಾಳ, ಬ್ರಹ್ಮಗಿರಿ, ಗೆಂಡತ್ತೂರು, ಬೀರಂಬಳ್ಳಿ ಸೇರಿದಂತೆ ವಿವಿಧ ಗ್ರಾಮಗಳಿಗೆ ತೆರಳುವ ಜನರಿಗೆ ಅಣೆಕಟ್ಟಿನ ಮೇಲಿನ ರಸ್ತೆಯಲ್ಲಿ ಸಂಚರಿಸಲು ಅನುಕೂಲ ಮಾಡಿಕೊಡಲಾಗಿದೆ ಎಂದು ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಗಣೇಶ್ ತಿಳಿಸಿದ್ದಾರೆ.


ನಂಜನಗೂಡಲ್ಲಿ ಕಟ್ಟೆಚ್ಚರ: ಕಪಿಲಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾದ ಹಿನ್ನೆಲೆಯಲ್ಲಿ ನಂಜನಗೂಡು ಭಾಗದಲ್ಲಿ ಪ್ರವಾಸಿಗರು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಬರುವ ಪ್ರವಾಸಿಗರು, ಭಕ್ತರು ಕಪಿಲಾ ನದಿಯ ಸ್ನಾನಘಟ್ಟದಲ್ಲಿ ಇಳಿಯದಂತೆ ಮನವಿ ಮಾಡಲಾಗಿದೆ. ಅಲ್ಲದೆ, ನದಿಯಲ್ಲಿ ರಭಸವಾಗಿ ಹರಿಯುತ್ತಿರುವ ನೀರಿನಲ್ಲಿ ಈಜುವ ದುಸ್ಸಾಹಸ ಮಾಡದಂತೆ ಹಾಗೂ ಬೆಟ್ಟಿಂಗ್ ಕಟ್ಟಿಕೊಂಡು ಈಜುವ ಸ್ಪರ್ಧೆ ನಡೆಸಲು ಮುಂದಾಗುವವರು ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ.

ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಮೈಸೂರು–ಊಟಿ ರಸ್ತೆಯಲ್ಲಿ ನದಿಗೆ ಅಡ್ಡಲಾಗಿ ಕಟ್ಟಿರುವ ಮೇಲ್ಸೇತುವೆ ಮೇಲೆ ನಿಂತು ನದಿ ನೀರು ನೋಡಬಯಸುವವರಿಗೂ ಕಡಿವಾಣ ಹಾಕಲು ನಿರ್ಧರಿಸಲಾಗಿದ್ದು, ಮೇಲ್ಸೇತುವೆ ಮೇಲೆ ಹೆಚ್ಚು ಹೊತ್ತು ನಿಲ್ಲದಂತೆ ಸವಾರರಿಗೆ ಸೂಚನೆ ನೀಡಲಾಗುತ್ತಿದೆ. ನದಿಯಲ್ಲಿ 50 ಸಾವಿರ ಕ್ಯೂಸೆಕ್‌ಗೂ ಹೆಚ್ಚಿನ ಪ್ರಮಾಣದ ನೀರು ಹರಿಯಲಾರಂಭಿಸಿದರೆ, ಅಪಾಯದ ಮಟ್ಟ ಮೀರುವ ಸಾಧ್ಯತೆ ಇದೆ. ಕಳೆದ ವರ್ಷ 90 ಸಾವಿರ ಕ್ಯೂಸೆಕ್ ನೀರು ನದಿಗೆ ಬಿಟ್ಟಿದ್ದರಿಂದ ಮಲ್ಲನಮೂಲೆ ಮಠದ ಬಳಿ ಊಟಿ ರಸ್ತೆಗೆ ನೀರು ನುಗ್ಗಿತ್ತು. ಇದರಿಂದ 2–3 ದಿನ ಊಟಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಈ ಬಾರಿಯೂ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದರೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವಂತೆ ಸೂಚನೆ ನೀಡಲಾಗಿದೆ.


ಗಾಂಭೀರ್ಯದಿಂದ ಕುಳಿತಿರುವ ಹುಲಿ ...... ಮರಿಗಳೊಂದಿಗೆ ರಸ್ತೆ ದಾಟುತ್ತಿರುವ ಹುಲಿ .... ಸಫಾರಿ ವಾಹನ ಹಿಂಬಾಲಿಸುತ್ತಿರುವ ಕಾಡಾನೆ



ಹೆಚ್.ಡಿ.ಕೋಟೆ ತಾಲೂಕಿನ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ದಮ್ಮನಕಟ್ಟೆ ಸಫಾರಿ ಕೇಂದ್ರ ವ್ಯಾಪ್ತಿಯ ಹಳೇ ಮೈಸೂರು–ಮಾನಂದವಾಡಿ ರಸ್ತೆ ಸೇತುವೆ ಮೇಲೆ ತುಂತುರು ಮಳೆಯಲ್ಲಿ ಗಾಂಭೀರ್ಯದಿಂದ ಕುಳಿತಿರುವ ಹುಲಿ.



ದಮ್ಮನಕಟ್ಟೆ ಸಫಾರಿ ವಾಹನವನ್ನು ಆನೆ ಅಟ್ಟಾಡಿಸಿಕೊಂಡು ಬರುತ್ತಿರುವುದು.



ದಮ್ಮನಕಟ್ಟೆ ಸಫಾರಿ ಕೇಂದ್ರ ವ್ಯಾಪ್ತಿಯಲ್ಲಿ ತಾಯಿ ಹುಲಿ ತನ್ನ ಮರಿಗಳೊಂದಿಗೆ ರಸ್ತೆ ದಾಟುತ್ತಿರುವುದು.

ಉತ್ತಮ ಪರಿಸರಕ್ಕಾಗಿ ಸಸಿಗಳನ್ನು ನೆಟ್ಟು ಪೋಷಿಸಿ

ನಂಜನಗೂಡು, ಜೂ.18– ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ನಮ್ಮ ಸುತ್ತಮುತ್ತಲ ಉತ್ತಮ ಪರಿಸರಕ್ಕಾಗಿ ಎಲ್ಲರೂ ಸಸಿಗಳನ್ನು ನೆಟ್ಟು ಪೋಷಿಸಬೇಕು ಎಂದು ಕಳಲೆ ಗ್ರಾಮದ ಶ್ರೀಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಪಾರುಪತ್ತೇದಾರ ಜಯರಾಮ್ ತಿಳಿಸಿದರು.



ಪರಿಸರ ದಿನಾಚರಣೆ ಪ್ರಯುಕ್ತ ಗಿಡ ನೆಡುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಕಳಲೆ ಗ್ರಾಮದ ಶ್ರೀಲಕ್ಷ್ಮಿಕಾಂತಸ್ವಾಮಿ ದೇವಸ್ಥಾನದ ಆವರಣದಲ್ಲಿ ಪರಿಸರ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವರು ಪರಿಸರದ ಬಗ್ಗೆ ಕಾಳಜಿ ವಹಿಸಿ ಇಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ಪರಿಸರ ನಾಶವಾದರೆ ಭವಿಷ್ಯದಲ್ಲಿ ನಾವೆಲ್ಲರೂ ದೊಡ್ಡ ಬೆಲೆ ತೆರಬೇಕಾಗುತ್ತದೆ. ಸದ್ಯ ನೆಲ, ಜಲ, ಗಾಳಿ ಹಾಗೂ ಆಹಾರ ಎಲ್ಲವೂ ಮಲೀನಗೊಳ್ಳುತ್ತಿದೆ ಇದರ ಬಗ್ಗೆ ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ನಾವು ಪರಿಸರದ ಬಗ್ಗೆ ತುಂಬಾ ಜಾಗೃತರಾಗಬೇಕು ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೃಷಿ ಮೇಲ್ವಿಚಾರಕ ಮಧುಸೂದನ್ ಮಾತನಾಡಿ, ಪರಿಸರ ನಮ್ಮೆಲ್ಲರ ಉಸಿರು. ಪರಿಸರ ಇಲ್ಲದಿದ್ದರೆ ನಮ್ಮ ನಾಶ ಕಟ್ಟಿಟ್ಟಬುತ್ತಿ. ಗಿಡ ನೆಡುವುದು ಮಾತ್ರವಲ್ಲ ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಚರಂಡಿ ಕೊಳಚೆ ನೀರನ್ನು ಕೆರೆಗೆ ಬಿಡುವುದು. ಮನೆ ಮುಂದೆ ತಿಪ್ಪೆಗಳನ್ನು ಹಾಕುವುದು ಮೊದಲು ನಿಲ್ಲಬೇಕು. ನಮ್ಮ ಸುತ್ತಮುತ್ತಲಿನ ಪ್ರದೇಶಗಳ ಸ್ವಚ್ಛತೆ ಕಾಪಾಡೋಣ. ಇನ್ನು ಹಸಿರೇ ಉಸಿರು. ಮನುಷ್ಯ ಆಹಾರ ಇಲ್ಲದೆ ಬದುಕಬಹುದು. ಆದರೆ ಗಾಳಿ, ನೀರು ಇಲ್ಲದೆ ಮನುಷ್ಯನಿಂದ ಹಿಡಿದು ಪ್ರಾಣಿಗಳವರೆಗೂ ಬದುಕಲು ಸಾಧ್ಯವಿಲ್ಲ. ಆದ್ದರಿಂದ ನಾವು ಪರಿಸರವನ್ನು ಸಂರಕ್ಷಣೆ ಮಾಡಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಕಳಲೆ ವಲಯದ ಮೇಲ್ವಿಚಾರಕರಾದ ಅನಿತಾ, ಸೇವಾ ಪ್ರತಿನಿಧಿ ಶಾಂತಮ್ಮ, ಸ್ವಸಹಾಯ ಹಾಗೂ ಪ್ರಗತಿ ಬಂಧು ಸಂಘದ ಸದಸ್ಯರು, ಸೇವಾ ಪ್ರತಿನಿಧಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಪಿಎಚ್.ಡಿ



ಡಾ.ವಿ.ಮಹೇಶ ಅವರ ಮಾರ್ಗದರ್ಶನದಲ್ಲಿ ಹೆಚ್.ಮನು ವಾಣಿಜ್ಯಶಾಸ್ತ್ರದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮುಕ್ತ ವಿವಿ ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ

ಡಾ.ಯತೀಂದ್ರ ವಿರುದ್ಧ ಪ್ರತಾಪ್ ಸಿಂಹ ಹೇಳಿಕೆಗೆ ಖಂಡನೆ

ಹೆಚ್.ಡಿ.ಕೋಟೆ, ಜೂ.18– ಜಾತಿಗಣತಿ ವಿಚಾರವಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ವಿರುದ್ಧ ಇಲ್ಲಸಲ್ಲದ ಹೇಳಿಕೆ ನೀಡಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿಕೆ ಖಂಡನೀಯ ಎಂದು ಕರ್ನಾಟಕ ರಾಜ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಜನಸೇವಾ ವೇದಿಕೆ ರಾಜ್ಯಾಧ್ಯಕ್ಷ ಬೈಪಾಸ್ ಮಂಜು ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಡಾ.ಯತೀಂದ್ರ ಅವರು ಈ ಹಿಂದೆ ವರುಣ ಕ್ಷೇತ್ರದ ಶಾಸಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದೀಗ ವಿಧಾನಪರಿಷತ್ ಸದಸ್ಯರಾಗಿದ್ದಾರೆ. ಅಲ್ಲದೇ ಜವಾಬ್ದಾರಿಯುತ ವ್ಯಕ್ತಿಯಾಗಿ ಎಲ್ಲಾ ಸಮುದಾಯಗಳನ್ನು ಒಂದಾಗಿ ಕರೆದೊಯ್ಯುವ ನಾಯಕತ್ವದ ಗುಣ ಹೊಂದಿದ್ದಾರೆ. ಮಂಡ್ಯದಲ್ಲಿ ನಡೆದ ಸಭೆಯಲ್ಲಿ ಜನಗಣತಿ ವರದಿ ಪ್ರಕಟವಾಗಿದ್ದರೆ ಹಿಂದುಳಿದವರಿಗೆ ಅನುಕೂಲವಾಗುತ್ತಿತ್ತು ಎಂದಷ್ಟೇ ತಿಳಿಸಿದ್ದಾರೆ. ಆದರೆ ನೀವು ಡಾ.ಯತೀಂದ್ರರಿಗೆ ಜಾತಿ ಗಣತಿ ಬಗ್ಗೆ ಏನು ಗೊತ್ತಿದೆ. ಅವರು ಇನ್ನೂ ಇದರ ಬಗ್ಗೆ ತಿಳಿದುಕೊಳ್ಳಬೇಕಿದೆ ಎಂದಿದ್ದೀರಾ. ನಿಮಗಿರುವಂತೆ ಯತೀಂದ್ರ ಅವರಿಗೂ ರಾಜಕೀಯ ಪ್ರಜ್ಞೆ, ಅರಿವು ಎಲ್ಲವೂ ಇದೆ. ವೈಜ್ಞಾನಿಕ ಹಾಗೂ ಅವೈಜ್ಞಾನಿಕ ನಿಮಗೊಬ್ಬರಿಗೆ ಗೊತ್ತಿದೆ ಎನ್ನುವಂತೆ ಮಾತನಾಡಬೇಡಿ. ಯತೀಂದ್ರ ಅವರು ಏನು ಹೇಳಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ ಎಂದ ಅವರು, ಇಲ್ಲಸಲ್ಲದ ಹೇಳಿಕೆ ನೀಡಿ ಜಾತಿ ಜಾತಿಗಳನ್ನು ಎತ್ತಿ ಕಟ್ಟುತ್ತಿರುವ, ಕೋಮು ಗಲಭೆಗೆ ಯತ್ನಿಸುತ್ತಿರುವ ಪ್ರತಾಪ್ ಸಿಂಹ ಅವರ ನಡೆ ಖಂಡನೀಯ ಎಂದರು.

ನಿಮ್ಮ ಪಕ್ಷದಲ್ಲೇ ನಿಮಗೆ ನೆಲೆ ಇಲ್ಲದಂತಾಗಿದ್ದು, ತಾವು ಸಂಸದರಾಗಿ ಉತ್ತಮ ಕಾರ್ಯ ಮಾಡಿದ್ದರೇ ನಿಮಗೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಪ್ರತಾಪ್ ಸಿಂಹ ಅವರು ಸಿಎಂ ಸಿದ್ದರಾಮಯ್ಯ, ಎಂಎಲ್‌ಸಿ ಡಾ.ಯತೀಂದ್ರ ಅವರನ್ನು ನಿಂದಿಸಿದರೇ ಯಾವುದಾದರೊಂದು ಸ್ಥಾನಮಾನ ಸಿಗಲಿದೆ ಎಂಬ ಭ್ರಮೆಯಲ್ಲಿದ್ದಾರೆ. ಹೀಗಾಗಿ ಮುಂದೆ ಇದೇ ರೀತಿ ವ್ಯತಿರಿಕ್ತ ಹೇಳಿಕೆ ನೀಡಿದ್ದೇ ಆದಲ್ಲಿ ಕಾಂಗ್ರೆಸ್ ಪಕ್ಷ ಪ್ರತಿಭಟನೆ ನಡೆಸುತ್ತದೆ. ಹಾಗಾಗಿ ಪ್ರತಾಪ್ ಸಿಂಹ ಅವರು ಯತೀಂದ್ರ ಬಗ್ಗೆ ನೀಡಿ ರುವ ಹೇಳಿಕೆ ಹಿಂಪಡೆದು ಬಹಿರಂಗ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

48 ಅಕ್ರಮ ನಿವೇಶನಗಳ ಖಾತೆ ರದ್ದು

ನಂಜನಗೂಡು, ಜೂ.18– ನಗರದ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ಕಾರ್ಮೆಲ್ ಕಾನ್ವೆಂಟ್ ಎದುರಿನ 3.16 ಎಕರೆ ಜಾಗದಲ್ಲಿರುವ 48 ನಿವೇಶನಗಳಿಗೆ ಅಕ್ರಮವಾಗಿ ಫಾರಂ ನಂ.24ರ ಅಡಿ ನೀಡಿದ್ದ ಖಾತೆಯನ್ನು ಮೈಸೂರಿನ ಪ್ರಾದೇಶಿಕ ಆಯುಕ್ತರ ನ್ಯಾಯಾಲಯ ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ನಗರಸಭೆ ವಕೀಲ ಎಲ್.ಶ್ರೀಕಂಠ ಪ್ರಸಾದ್, ಈ ಹಿಂದೆ ತಾಲೂಕಿನ ದೇವಿರಮ್ಮನಹಳ್ಳಿ ಗ್ರಾಪಂಗೆ ಸೇರಿದ ಸರ್ವೇ ನಂ.58 ಹಾಗೂ 59ರ 3.16 ಎಕರೆ ಜಾಗ ನಂಜನಗೂಡು ಪುರಸಭೆ, ನಗರಸಭೆಯಾಗಿ ಉನ್ನತೀಕರಣಗೊಂಡ ನಂತರ ಪ್ರಸ್ತುತ ನಗರಸಭೆ ವ್ಯಾಪ್ತಿಗೆ ಸೇರಿದ್ದು, ಬಿ.ಬಸಪ್ಪ ಎಂಬುವರ ಹೆಸರಿಗೆ ಖಾತೆಯಾಗಿತ್ತು. ಅವರು ನಿಧನರಾದ ನಂತರ ಅವರ ಹೆಂಡತಿ ಬಿ.ಗಂಗಮ್ಮನವರ ಹೆಸರಿಗೆ 2024ರ ಜನವರಿಯಲ್ಲಿ ಅಂದಿನ ನಗರಸಭೆ ಆಯುಕ್ತರು ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಖಾತೆ ಮಾಡಿಕೊಟ್ಟಿದ್ದರು.

ಸದರಿ ನಿವೇಶನ ಮೈಸೂರು ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಸೇರಿದ್ದು, ನಿಯಮದ ಪ್ರಕಾರ ಅನ್ಯಕ್ರಾಂತವಾದ ಮೇಲೆ 48 ನಿವೇಶನಗಳಿಗೆ 30 ಅಡಿ ರಸ್ತೆ, ಉದ್ಯಾನ, ದೇವಾಲಯಗಳಿಗಾಗಿ ಜಾಗ ಬಿಟ್ಟು, ಮೂಲ ಸೌಲಭ್ಯಗಳನ್ನು ಕಲ್ಪಿಸಿ ಟೌನ್ ಪ್ಲಾನಿಂಗ್‌ಗಾಗಿ ಮೂಡಾಗೆ ಅರ್ಜಿ ಸಲ್ಲಿಸಿ, ನಗರಸಭೆಗೆ ಹಕ್ಕು ಖುಲಾಸೆ ಮಾಡಿ, ನೋಂದಾವಣೆ ಮಾಡಿಕೊಡಬೇಕಾಗಿತ್ತು. ಈ ಎಲ್ಲಾ ನಿಯಮಗಳನ್ನು ಮೀರಿ ಖಾತೆ ಮಾಡಿಕೊಡಲಾಗಿದೆ ಎಂದು ವ್ಯಾಪಕ ದೂರುಗಳು ಕೇಳಿ ಬಂದ ನಂತರ ಅಂದಿನ ನಗರಸಭೆ ಆಯುಕ್ತ ಹಾಗೂ ಕಂದಾಯ ಅಧಿಕಾರಿ ಮೇಲೆ ನಗರಸಭೆ ಪ್ರಾದೇಶಿಕ ಆಯುಕ್ತರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿತ್ತು. ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಖಾತೆಯಾಗಿರುವುದು ದಾಖಲೆಗಳನ್ನು ಪರಿಶೀಲಿಸಿದ ನಂತರ ದೃಢಪಟ್ಟಿದ್ದರಿಂದ ಪ್ರಾದೇಶಿಕ ಆಯುಕ್ತರ ನ್ಯಾಯಾಲಯ 48 ನಿವೇಶನಗಳ ಅಕ್ರಮ ಖಾತೆ ರದ್ದುಪಡಿಸಿ ಆದೇಶ ಹೊರಡಿಸಿದೆ ಎಂದರು.

ಪಕ್ಷದ ಬಲವರ್ಧನೆಗೆ ದುಡಿಯುತ್ತೇನೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು.

ಸರಗೂರು, ಜೂ.18– ಪಕ್ಷದ ಬಲವರ್ಧನೆಗೆ ಪ್ರಾಮಾಣಿಕವಾಗಿ ದುಡಿಯುತ್ತೇನೆ ಎಂದು ಜಿಲ್ಲಾ ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸರಗೂರು ಬಿಜೆಪಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತಳಮಟ್ಟದಿಂದ ಪಕ್ಷ ಬಲಪಡಿಸಿ ಮುಂಬರುವ ಜಿಪಂ, ತಾಪಂ, ಗ್ರಾಪಂ, ಸಹಕಾರ ಸಂಘಗಳ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರ ಜೊತೆಗೂಡಿ ಪಕ್ಷದ ಗೆಲುವಿಗಾಗಿ ಶ್ರಮಿಸುತ್ತೇನೆ ಎಂದರು.

ಜಿಲ್ಲಾ ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಉಪಾಧ್ಯಕ್ಷ ಹೆಚ್.ಸಿ.ಲಕ್ಷ್ಮಣ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್ ಜಯರಾಮೇಗೌಡ, ಜಿಲ್ಲಾ ಕಾರ್ಯದರ್ಶಿ ಮಂಜುನಾಥ್, ಮುಖಂಡರಾದ ಮಂಜು, ಮಾಜಿ ಜಿಲ್ಲಾ ಕಾರ್ಯದರ್ಶಿ ಮೋಹನ್, ರೈತ ಮೋರ್ಚಾ ಕಾರ್ಯದರ್ಶಿ ರಾಹುಲ್ ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಚಿರತೆ ದಾಳಿಗೆ ಸಾಕು ನಾಯಿ ಬಲಿ



ಹುಣಸೂರು, ಜೂ.18– ಚಿರತೆ ದಾಳಿಗೆ ಸಾಕು ನಾಯಿ ಬಲಿಯಾಗಿರುವ ಘಟನೆ ತಾಲೂಕಿನ ಗಾವಡಗೆರೆ ಹೋಬಳಿ ಮಾರಗೌಡನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸೋಮೇಗೌಡರ ಪುತ್ರ ಮೋಹನ್ ಅವರಿಗೆ ಸೇರಿದ ನಾಯಿ ಸಾವನ್ನಪ್ಪಿರುವುದು. ಮೋಹನ್ ಅವರು ಎಂದಿನಂತೆ ತಮ್ಮ ಮನೆ ಮುಂದೆ ನಾಯಿ ಕಟ್ಟಿಹಾಕಿದ್ದರು. ಮಂಗಳವಾರ ರಾತ್ರಿ ದಾಳಿ ನಡೆಸಿರುವ ಚಿರತೆ ಬಲಿ ಪಡೆದಿದೆ. ಬುಧವಾರ ಬೆಳಗ್ಗೆ ಮನೆಯವರು ನೋಡಲಾಗಿ ನಾಯಿ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ನಾಯಿ ಸತ್ತಿರುವ ಜಾಗದ ಸುತ್ತಮುತ್ತಲಿನಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದೆ. ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆ ಕ್ರಮ ವಹಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸಾಲ ಮರುಪಾವತಿಸುವಂತೆ

ಮೈಕ್ರೋ ಫೈನಾನ್ಸ್ ಸಿಬ್ಬಂದಿಯಿಂದ ಮುಂದುವರಿದ ಧಮ್ಕಿ...

ಹುಣಸೂರು, ಜೂ.18– ತಾಲೂಕಿನಲ್ಲಿ ಮತ್ತೆ ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳಿಂದ ಸಾಲಗಾರರಿಗೆ ಧಮ್ಕಿ ಹಾಕುವುದು ಮುಂದುವರಿದಿದ್ದು, ತಾಲೂಕಿನ ನಂಜಾಪುರದಲ್ಲಿ ಆಸ್ಪತ್ರೆಯಿಂದ ಬಂದ ಮಾರನೇ ದಿನವೇ ಸಾಲ ಪಡೆದವರ ಮನೆ ಮುಂದೆ ಗಲಾಟೆ ಮಾಡಿರುವ ಘಟನೆ ನಡೆದಿದೆ. ಅಲ್ಲದೇ ಸಾಲ ಕಟ್ಟಮ್ಮ, ಇಲ್ಲಾಂದ್ರೆ ನಾವು ತರೋ ಪೇಪರ್‌ಗೆ ಸೈನ್ ಹಾಕು ಎಂದು ಒತ್ತಾಯಿಸಿದ್ದಾರೆ.

ನಂಜಾಪುರ ಗ್ರಾಮದ ಟೈಲರ್ ಮೀನಾಕ್ಷಿ ಎಂಬುವರ ಮನೆ ಬಳಿ ಘಟನೆ ನಡೆದಿದ್ದು, ಮೈಕ್ರೋ ಫೈನಾನ್ಸ್ ಹಾವಳಿಗೆ ಬೇಸತ್ತು ವಿಷ ಸೇವಿಸಿದ್ದ ಮಹಿಳೆ ಬದುಕಿ ಬಂದರೂ ಬೆಂಬಿಡದ ಫೈನಾನ್ಸ್ ಸಿಬ್ಬಂದಿ, ಮನೆ ಮುಂದೆ ಕೊಟ್ಟ ಸಾಲ ತೀರಿಸುವಂತೆ ಧಮ್ಕಿ ಹಾಕುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಮೀನಾಕ್ಷಿಯವರು ಎಲ್‌ಆಂಡ್‌ಟಿ ವಿಸ್ತಾರ ಫೈನಾನ್ಸ್ ಸೇರಿದಂತೆ ಇತರೆ ಮೈಕ್ರೋ ಫೈನಾನ್ಸ್‌ಗಳಿಂದ ಸುಮಾರು 10 ಲಕ್ಷಕ್ಕೂ ಹೆಚ್ಚು ಸಾಲ ಪಡೆದಿದ್ದರು. ಸಾಲ ತೀರಿಸುವ ಸಲುವಾಗಿ ಈಗಾಗಲೇ ತಮ್ಮ 2 ಎಕರೆ ಜಮೀನನ್ನು ಮಾರಾಟ ಮಾಡಿಕೊಂಡಿದ್ದು, ಸಾಲ ತೀರಿರಲಿಲ್ಲ. ಸಾಲಗಾರರ ಕಿರುಕುಳ, ಬೆದರಿಕೆಯಿಂದ ಅವಮಾನಿತರಾಗಿ ಕಳೆದ 5 ದಿನಗಳ ಹಿಂದೆ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಕುಟುಂಬದವರು, ಗ್ರಾಮಸ್ಥರು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಪಡೆದು ಗುಣಮುಖರಾಗಿ ಜೂ.16ರಂದು ಗ್ರಾಮಕ್ಕೆ ಹಿಂತಿರುಗಿದ್ದರು.

ಮೀನಾಕ್ಷಿ ಮನೆಗೆ ಬಂದಿರುವ ವಿಷಯ ತಿಳಿದ ಫೈನಾನ್ಸ್ ಸಿಬ್ಬಂದಿ ಮಂಗಳವಾರ ಬೆಳ್ಳಂಬೆಳಗ್ಗೆ ಮತ್ತೆ ಗ್ರಾಮಕ್ಕೆ ಬಂದು ಹಣ ಕಟ್ಟುವಂತೆ ಒತ್ತಾಯಿಸಿದ್ದಾರೆ. ಪರಿಸ್ಥಿತಿಯ ಬಗ್ಗೆ ಮನೆಯವರು, ಗ್ರಾಮಸ್ಥರು ಕಾಲಾವಕಾಶ ನೀಡಿದಲ್ಲಿ ಸಾಲ ತೀರಿಸುವುದಾಗಿ ಪರಿಪರಿಯಾಗಿ ಕೇಳಿಕೊಂಡರೂ ಮನೆ ಮುಂದೆ ಜಗಳ ತೆಗೆದಿದ್ದಾರೆ.



ಎಚ್ಚರಿಕೆಗೆ ಹೆದರಿ ಕಾಲ್ಕಿತ್ತ ಫೈನಾನ್ಸ್ ಸಿಬ್ಬಂದಿ: ಕೊನೆಗೆ ಗ್ರಾಮದ ಗ್ರಾಪಂ ಸದಸ್ಯ ಮನುಕುಮಾರ್ ಮಧ್ಯಪ್ರವೇಶಿಸಿ ಹಣಕ್ಕಾಗಿ ಪೀಡಿಸುತ್ತಿದ್ದೀರಾ? ಇಲ್ಲಿಂದ ಹೋಗದಿದ್ದರೆ ಪೊಲೀಸರಿಗೆ ದೂರು ನೀಡುವುದಾಗಿ ಎಚ್ಚರಿಸಿದ ವೇಳೆ ಗ್ರಾಮಸ್ಥರು ಜಮಾಯಿಸಿದ್ದರಿಂದಾಗಿ ಹೆದರಿದ ಫೈನಾನ್ಸ್‌ನವರು ಕಾಲ್ಕಿತ್ತಿದ್ದಾರೆ. ಈ ಸಂಬಂಧ ಆಸ್ಪತ್ರೆಯಲ್ಲಿ ದಾಖಲಾಗಿದ್ದ ವೇಳೆಯೇ ಮೀನಾಕ್ಷಿ ಅವರಿಂದ ಪೊಲೀಸರು ಹೇಳಿಕೆ ಪಡೆದಿದ್ದಾರೆ. ರಾತ್ರಿಯಾಗಿದ್ದರಿಂದ ಬುಧವಾರ ಮತ್ತೆ ಬಿಳಿಕೆರೆ ಠಾಣಾ ಪೊಲೀಸರಿಗೆ ದೂರು ನೀಡಲಾಗುವುದೆಂದು ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ಯೋಗ, ವಿಶ್ವ ಪರಿಸರ ದಿನಾಚರಣೆ

ತಿ.ನರಸೀಪುರ, ಜೂ.18– ಪಟ್ಟಣದ ಗುರುಭವನದಲ್ಲಿ ಸಾಮಾಜಿಕ ವಲಯ ಅರಣ್ಯ ಇಲಾಖೆ ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ವಿದ್ಯಾಲಯದ ಸಹಯೋಗದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನಾ ಗುರು ಭವನದ ಆವರಣದಲ್ಲಿ ಗಿಡ ನೆಡಲಾಯಿತು. ಅಲ್ಲದೇ ಯೋಗ ದಿನಾಚರಣೆ ಅಂಗವಾಗಿ ಯೋಗಾಭ್ಯಾಸ ಆಯೋಜಿಸಲಾಗಿತ್ತು.



ಗುರುಭವನದ ಆವರಣದಲ್ಲಿ ಅಂತರಾಷ್ಟ್ರೀಯ ಯೋಗ ಹಾಗೂ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಸಾಮಾಜಿಕ ವಲಯ ಅರಣ್ಯಾಧಿಕಾರಿ ಎಸ್.ಡಿ.ರಾಜೇಶ್ ಮಾತನಾಡಿ, ಸಕಲ ಜೀವಿಗಳ ಬದುಕಿಗೆ ಪೂರಕವಾದ ಎಲ್ಲಾ ಸಂಪನ್ಮೂಲಗಳನ್ನು ನಮಗೆ ಪರಿಸರ ನೀಡುತ್ತದೆ. ಹೀಗಾಗಿ ಅದರ ರಕ್ಷಣೆ ನಮ್ಮ ಹೊಣೆ. ವಿಶ್ವ ಪರಿಸರ ದಿನದ ಈ ವರ್ಷದ ಘೋಷಣ ವಾಕ್ಯ ಪ್ಲಾಸ್ಟಿಕ್ ಬಳಕೆ ನಿಷೇಧಿಸಿ, ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಿಸುವ ಕಂಕಣ ತೊಡಬೇಕಿದೆ ಎಂದರು.

ಪ್ರಸಕ್ತ ಸನ್ನಿವೇಶದಲ್ಲಿ ನಾವು ಬಹಳ ಒತ್ತಡದ ಜೀವನ ನಡೆಸುತ್ತಿದ್ದೇವೆ. ಈ ಒತ್ತಡ ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ. ಈ ದುಷ್ಪರಿಣಾಮ ತಡೆಗಟ್ಟಲು ಯೋಗ ನಮ್ಮ ದೈನಂದಿನ ಚಟುವಟಿಕೆ ಆಗಬೇಕು. ಆಗ ಮಾತ್ರ ಉತ್ತಮ ಆರೋಗ್ಯ ಪಡೆಯಲು ಸಾಧ್ಯ. ಪ್ರತಿನಿತ್ಯ ಯೋಗ ಮಾಡುವುದರ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಂತೆ ಕರೆ ನೀಡಿದರು.

ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಸುಧೀಂದ್ರ ಮಾತನಾಡಿ, ಆಯುಷ್ ಇಲಾಖೆಯಿಂದ ಎಲ್ಲಾ ತರಹದ ಆರೋಗ್ಯ ಸಮಸ್ಯೆಗಳಿಗೆ ಔಷಧಿ ಲಭ್ಯವಿದೆ. ಆಯುರ್ವೇದ ಚಿಕಿತ್ಸೆ ನಮ್ಮ ಆರೋಗ್ಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಆಯುರ್ವೇದ ಚಿಕಿತ್ಸಾ ಪದ್ಧತಿಯನ್ನು ಹೆಚ್ಚು ಬಳಸಬೇಕು ಎಂದರು.

ಕಾರ್ಯಕ್ರಮದಲ್ಲಿ ಆಯುರ್ವೇದ ವಿದ್ಯಾಲಯದ ಪ್ರಾಧ್ಯಾಪಕ ಡಾ.ಪ್ರವೀಣ್, ಉಪವಲಯ ಅರಣ್ಯ ಅಧಿಕಾರಿಗಳಾದ ಸಿ.ಅಂತೋನಿ ಸ್ವಾಮಿ, ಮಹದೇವಸ್ವಾಮಿ, ವಿನಯ್ ಕುಮಾರ್, ಗಸ್ತು ಅರಣ್ಯಪಾಲಕರಾದ ಚಿಕ್ಕಬಸವಯ್ಯ, ಪುಟ್ಟಣ್ಣ, ಮೋಹನ್ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ

ತಿ.ನರಸೀಪುರ, ಜೂ.18– ತಾಲೂಕಿನ ಬನ್ನೂರು ಸೆಸ್ಕ್ ಉಪವಿಭಾಗದ ಮಲಿಯೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ಹಿನ್ನೆಲೆಯಲ್ಲಿ ಜೂ.20ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ಮಲಿಯೂರು ವಿದ್ಯುತ್ ವಿತರಣಾ ಕೇಂದ್ರ, ಬೆಟ್ಟಹಳ್ಳಿ ಐಪಿ, ನಂಜಾಪುರ ಐಪಿ ವ್ಯಾಪ್ತಿಯ ಹೆನ್ನೂರು, ಕಟ್ಟಿಕೊಪ್ಪಲು, ನಂಜಾಪುರ, ಬಸವನಹಳ್ಳಿ, ಮಲಿಯೂರು, ವಡ್ಡರಕೊಪ್ಪಲು, ಸಿ.ವಿ.ಕೊಪ್ಪಲು, ಬಿ.ಬೆಟ್ಟಹಳ್ಳಿ, ಮೇಗಳಕೊಪ್ಪಲು, ಕುಂತನಹಳ್ಳಿ, ಬೆಂಡರವಾಡಿ, ದೇಶವಳ್ಳಿಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೆಆರ್‌ಎಸ್ ಜಲಾಶಯದ ಬಳಿ ಕಾವೇರಿ ಆರತಿ, ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಪ್ರಸ್ತಾಪ ಕೈಬಿಡಲು ರೈತ ಸಂಘ ಆಗ್ರಹ

ಜನಾಭಿಪ್ರಾಯ ಪಡೆಯದೇ ಯೋಜನೆ ಕೈಗೆತ್ತಿಕೊಳ್ಳಲು ಮುಂದಾಗಿರುವ ಸರ್ಕಾರದ ವರ್ತನೆಗೆ ಖಂಡನೆ

ಮೈಸೂರು,ಜೂ.18(ಎಂಟಿವೈ)– ಕೆಆರ್‌ಎಸ್‌ನಲ್ಲಿ ರಾಜ್ಯ ಸರ್ಕಾರ ನಡೆಸಲುದ್ದೇಶಿಸಿರುವ ಕಾವೇರಿ ಆರತಿ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಯೋಜನೆಯಿಂದ ಹಿಂದೆ ಸರಿಯುವಂತೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 90 ವರ್ಷದ ಹಿಂದೆ ನಿರ್ಮಾಣವಾಗಿರುವ ಕೆಆರ್‌ಎಸ್ ಜಲಾಶಯದ ಬಳಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸದೆ ರಾಜ್ಯ ಸರ್ಕಾರ ಕಾವೇರಿ ಆರತಿ ಮಾಡಲು ಮುಂದಾಗಿರುವುದು ಖಂಡನೀಯ. ಇದೊಂದು ಮೌಢ್ಯ ಬಿತ್ತುವ ಕಾರ್ಯಕ್ರಮವಾಗಿದ್ದು, ಇದನ್ನು ಉತ್ತೇಜಿಸಬಾರದು. 92 ಕೋಟಿ ರೂ. ವೆಚ್ಚ ಮಾಡಿ ಕಾವೇರಿ ಆರತಿ ಮಾಡಲು ಸರ್ಕಾರ ಮುಂದಾಗಿರುವುದು ಅರ್ಥಹೀನ. ಈ ಹಿನ್ನೆಲೆಯಲ್ಲಿ ಕೂಡಲೇ ಆರತಿ ಮಾಡುವ ಪ್ರಕ್ರಿಯೆಯನ್ನು ಕೈ ಬಿಡಬೇಕು ಎಂದು ಆಗ್ರಹಿಸಿದರು.

ಇನ್ನು ಕೆಆರ್‌ಎಸ್‌ನಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣ ಮಾಡಲು ಮುಂದಾಗಿರುವ ಕ್ರಮ ಅಣೆಕಟ್ಟೆಯ ಭದ್ರತಾ ನಿಯಮಕ್ಕೆ ವಿರುದ್ಧವಾಗಿದೆ. ಈ ಹಿಂದೆ ಡಿಸ್ನಿಲ್ಯಾಂಡ್ ಮಾದರಿ ಯೋಜನೆಯನ್ನು ಸರ್ಕಾರ ಘೋಷಿಸಿತ್ತು. ಅದಕ್ಕೆ ರೈತ ಸಂಘ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಆ ನಂತರ ಅದು ನನೆಗುದಿಗೆ ಬಿದ್ದಿತ್ತು ಇದೀಗ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಮುಂದಾಗಿರುವುದು ಸರಿಯಲ್ಲ. ಸಾರ್ವಜನಿಕ ಅಭಿಪ್ರಾಯ ಪಡೆಯದೇ ಇಂತಹ ಯೋಜನೆ ಪ್ರಕಟಿಸಿರುವುದು ಖಂಡನೀಯ. ನಮಗೆ ಅಣೆಕಟ್ಟೆಯ ಭದ್ರತೆ ಮುಖ್ಯ, ಅಮ್ಯೂಸ್‌ಮೆಂಟ್ ಪಾರ್ಕ್ ಬೇಕಾಗಿಲ್ಲ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿದರು.

ಅರ್ಹರಿಗೆ ಪರಿಹಾರ ನೀಡಿ: ನಂಜನಗೂಡು ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿ ಇಮ್ಮಾವು ಗ್ರಾಮದ 1123 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸ್ವಾಧೀನ ಪಡಿಸಿಕೊಂಡಿದೆ. ಇದರಲ್ಲಿ ಫಿಲಂ ಸಿಟಿಗಾಗಿಯೂ ಭೂಮಿ ನೀಡಲಾಗಿದೆ. ಆದರೆ ವಿವಿಧ ಗ್ರಾಮಗಳ 700 ರೈತರು 70–80 ವರ್ಷಗಳಿಂದ ಸ್ವಾಧೀನ ಹೊಂದಿ ಬೇಸಾಯ ಮಾಡುತ್ತ ಬಂದಿದ್ದು, ಗೇಣಿಗಾಗಿ ಅರ್ಜಿ ಸಲ್ಲಿಸಿದ್ದರು. ಭೂ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿರುವ ಭೂಮಿಯಲ್ಲಿ ಅನಧಿಕೃತ ಸಾಗುವಳಿ ಹೊಂದಿದ್ದ ರೈತರಿಗೆ 4 ಲಕ್ಷ ಎಕ್ಸ್‌ಗ್ರೇಷಿಯಾ ನೀಡಲು ತೀರ್ಮಾನಿಸಿ, 18 ಕೋಟಿ ರೂ. ಮೀಸಲಿಡಲಾಗಿದೆ. ಆದರೆ, ಎಕ್ಸ್‌ಗ್ರೇಷಿಯಾ ಹಣವನ್ನು ಅರ್ಹ ರೈತರಿಗೆ ನೀಡದೇ, ಬೇರೆ ಬೇರೆ ತಾಲೂಕಿನಲ್ಲಿರುವ ಕೆಲ ರೈತರಿಗೆ ನೀಡಲಾಗುತ್ತಿದೆ. ಈ ಕುರಿತು ತನಿಖೆ ನಡೆಸಿ, ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಭೂಮಿಯಲ್ಲಿ ಸ್ವಾಧೀನ ಹೊಂದಿರುವ ರೈತರಿಗೆ ಎಕ್ಸ್‌ಗ್ರೇಷಿಯಾ ಹಣ ನೀಡಬೇಕು ಎಂದು ಒತ್ತಾಯಿಸಿದರು.

ಬಿತ್ತನೆ ಬೀಜ, ರಸಗೊಬ್ಬರ ನೀಡಿ: ರಾಜ್ಯದಲ್ಲಿ ಮುಂಗಾರು ಮಳೆ ಆರಂಭವಾಗಿದ್ದು, ಕೃಷಿ ಇಲಾಖೆ ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿತರಿಸಿಲ್ಲ. ಇದರಿಂದ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದೆ. ಕೂಡಲೇ ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ನೀಜ ಹಾಗೂ ಗೊಬ್ಬರ ವಿತರಿಸಬೇಕು. ನಕಲಿ ಬೀಜ ಹಾಗೂ ರಸಗೊಬ್ಬರ ಹಾವಳಿ ಹೆಚ್ಚಾಗಿದ್ದು, ಅದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಜೂ.25ರಂದು ದೇವನಹಳ್ಳಿ ಚಲೋ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ಸುಮಾರು 1777 ಎಕರೆ ಫಲವತ್ತಾದ ಭೂಮಿಯನ್ನು ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವುದನ್ನು ವಿರೋಧಿಸಿ ಜೂ. 25ರಂದು ದೇವನಹಳ್ಳಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಳೆದ ಬಿಜೆಪಿ ಸರ್ಕಾರ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿದ್ದಾಗ ಆ ಭಾಗದ ರೈತರು ಪ್ರತಿಭಟನೆ ಮಾಡಿದ್ದರು. ಆ ವೇಳೆ ಸಿಎಂ ಸಿದ್ದರಾಮಯ್ಯ ಹಾಗೂ ಇನ್ನಿತರ ಕಾಂಗ್ರೆಸ್ ಮುಖಂಡರು ಅದರಲ್ಲಿ ಪಾಲ್ಗೊಂಡು ಬಲವಂತದ ಭೂಸ್ವಾಧೀನಕ್ಕೆ ಅವಕಾಶ ನೀಡುವುದಿಲ್ಲ ಎಂದಿದ್ದರು. ಆದರೆ ಈಗ ಇವರು ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದಾರೆ. ಹೀಗಾಗಿ ಮಾತಿಗೆ ತಪ್ಪಿದ ಸರ್ಕಾರದ ನೀತಿ ಖಂಡಿಸಿ ಭೂಸ್ವಾಧೀನ ಕೈಬಿಡಬೇಕೆಂದು ಆಗ್ರಹಿಸಿ ಜೂ. 25 ರಂದು ದೇವನಹಳ್ಳಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ರೈತರು, ದಲಿತರು, ಕಾರ್ಮಿಕರು, ಮಹಿಳಾ, ಯುವ ಚಳವಳಿಗಾರರು, ಪ್ರಗತಿಪರ ಹೋರಾಟಗಾರರು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ದೇವನಹಳ್ಳಿಗೆ ಬಂದು ತಹಸಿಲ್ದಾರ್ ಕಚೇರಿ ಬಳಿ ಧರಣಿ ನಡೆಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳಾದ ಎ.ಎಲ್. ಕೆಂಪೂಗೌಡ, ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ಪಿ. ಮರಂಕಯ್ಯ ಇನ್ನಿತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪುದುಪೆಟ್ಟೈ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್–5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಹೊಲೊಕಾಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಎಡಗೈಯೇ ಅಪಘಾತಕ್ಕೆ ಕಾರಣ (ಕ)	4 ಪ್ರದರ್ಶನಗಳು
ಲಿಡೋ	
ಮೆರ್ಸಲ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ

ಜೂ.21ರಂದು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮ

ಖ್ಯಾತ ಗಾಯಕ ಡಾ.ದತ್ತಾತ್ರೇಯ ವೇಲಂಕರ್ ಅವರಿಂದ ಗಾನ ಮೋಡಿ


ಮೈಸೂರು, ಜೂ.18(ಪಿಎಂ)– ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಘಟಕಗಳ ಸಂಯುಕ್ತಾಶ್ರಯದಲ್ಲಿ ಜೂ.21ರಂದು 145ನೇ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಹಿಂದೂಸ್ತಾನಿ ಸಂಗೀತ ಏರ್ಪಡಿಸಲಾಗಿದೆ.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ ಸಭಾಂಗಣದಲ್ಲಿ ಅಂದು ಸಂಜೆ 6ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿದ್ವಾನ್ ಡಾ.ದತ್ತಾತ್ರೇಯ ವೇಲಂಕರ್ ಗಾಯನ ಸಾದರಪಡಿಸಲಿದ್ದಾರೆ. ಪಕ್ಕವಾದ್ಯದಲ್ಲಿ ಸುಮಿತ್ ನಾಯಕ್ (ತಬಲ) ಹಾಗೂ ವೀರಭದ್ರಯ್ಯ ಹಿರೇಮಠ್ (ಹಾರ್ಮೋನಿಯಂ) ಸಹಕಾರ ನೀಡಲಿದ್ದಾರೆ.

ಗಾನ ಕ್ಷೇತ್ರದಲ್ಲಿ ಡಾ.ದತ್ತಾತ್ರೇಯ ಖ್ಯಾತನಾಮರು: ಸುರ್ಮಣಿ ಡಾ.ದತ್ತಾತ್ರೇಯ ವೇಲಂಕರ್ ಅವರು ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರು. ಜೊತೆಗೆ ಬೆಂಗಳೂರಿನ ಷಡ್ಜ ಕಲಾಕೇಂದ್ರದ ಸಂಸ್ಥಾಪಕರು. ಇವರು ಪ್ರಸಿದ್ಧ ಗ್ವಾಲಿಯರ್–ಕಿರಣ ಘರಾನಾ ಮಾಂತ್ರಿಕ ಪಂಡಿತ್ ವಿನಾಯಕ ತೊರವಿ ಹಾಗೂ ಕೀರ್ತನಾಚಾರ್ಯ ಲಕ್ಷ್ಮಣದಾಸ್ ವೇಲಂಕರ್ ಅವರ ಶಿಷ್ಯರು. ಮೂರು ದಶಕಗಳಿಗೂ ಹೆಚ್ಚು ಕಾಲ ಡಾ.ದತ್ತಾತ್ರೇಯ ವೇಲಂಕರ್ ಅವರು ತೊರವಿ ಅವರಿಂದ ಕಠಿಣ ತರಬೇತಿ ಪಡೆದಿದ್ದಾರೆ. ದತ್ತಾತ್ರೇಯ ವೇಲಂಕರ್ ಅವರು 'ಎ' ಶ್ರೇಣಿಯ 'ಆಲ್ ಇಂಡಿಯಾ ರೇಡಿಯೋ' ಮತ್ತು 'ದೂರದರ್ಶನ' ಗಾಯಕರು. ಅಲ್ಲದೆ, ಇವರು ಭಾರತ ಸರ್ಕಾರದ 'ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್'ನ ಪಟ್ಟಿಯಲ್ಲಿ ಸ್ಥಾನ ಪಡೆದ ಹಿರಿಯ ಗಾಯಕರು.



ಸುಮಿತ್ ನಾಯಕ್




ವೀರಭದ್ರಯ್ಯ

ದೇಶ–ವಿದೇಶದ ಪ್ರತಿಷ್ಠಿತ ವೇದಿಕೆಗಳಲ್ಲಿ ಗಾಯನ ಸಾದರಪಡಿಸಿದ ಹಿರಿಮೆಯನ್ನು ದತ್ತಾತ್ರೇಯ ಅವರು ಹೊಂದಿದ್ದಾರೆ. ಮುಂಬೈನ ಸುರ್ ಸಿಂಗಾರ್‌ನಿಂದ ಕೊಡಮಾಡುವ 'ಸುರ್ಮಣಿ' ಬಿರುದಿಗೂ ದತ್ತಾತ್ರೇಯ ಭಾಜನರಾಗಿದ್ದಾರೆ. ಚೆನ್ನೈನ ಮಹಾರಾಷ್ಟ್ರ ಅಸೋಸಿಯೇಷನ್‌ನ 'ಭಜನ್ ಭೂಷಣ' ಬಿರುದು ಸಹ ಇವರಿಗೆ ಸಂದಿದೆ. ಬೆಂಗಳೂರಿನ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ನೀಡುವ 'ಬ್ರಹ್ಮತೇಜ' ಪ್ರಶಸ್ತಿಗೂ ಇವರು ಪಾತ್ರರಾಗಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಗಾಯನ, ಭಜನೆ, ಜುಗಲ್ಬಂಧಿ ಹಾಗೂ ಕಥಾ ಕೀರ್ತನೆ ಸಿಡಿಗಳನ್ನು ಹೊರತಂದಿದ್ದಾರೆ.

ದತ್ತಾತ್ರೇಯ ಅವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಹಾಗೂ ಕಥಾ ಕೀರ್ತನೆ ಎರಡರಲ್ಲೂ ಪರಿಣತಿ ಹೊಂದಿರುವುದು ಅವರ ವಿಶಿಷ್ಟತೆಯಾಗಿದೆ. ಇವರು ಯುಎಸ್‌ಎ, ಸಿಂಗಾಪುರ್, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್, ಸ್ವೀಡನ್, ಯುಕೆ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲೂ ತಮ್ಮ ಕಲಾ ಕೌಶಲ ಮೆರೆದು ಖ್ಯಾತನಾಮರಾಗಿದ್ದಾರೆ. ದತ್ತಾತ್ರೇಯ ವೇಲಂಕರ್ ಅವರು ಬೆಂಗಳೂರು ಜೈನ್ ವಿವಿಯಿಂದ ವಿದುಷಿ ಡಾ.ಮೀರಾ ರಾಜಾರಾಮ್ ಪ್ರಾಣೇಶ್ ಅವರ ಮಾರ್ಗದರ್ಶನದಲ್ಲಿ ಕಥಾ ಕೀರ್ತನೆಯಲ್ಲಿ ಪಿಹೆಚ್.ಡಿ ಪಡೆದಿದ್ದಾರೆ. ಅಲ್ಲದೆ, ಮೈಸೂರಿನ ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿವಿಯಿಂದ ಎಂಎ ಪದವಿ ಪಡೆದಿದ್ದಾರೆ.

ಲಂಚ ಸ್ವೀಕರಿಸುತ್ತಿದ್ದ ಸೆಸ್ಕ್ ವಿಜಿಲೆನ್ಸ್ ಅಧಿಕಾರಿ ಲೋಕಾಯುಕ್ತ ಬಲೆಗೆ

ಮೈಸೂರು, ಜೂ. 18(ಆರ್‌ಕೆ)– ಅನಧಿಕೃತ ವಿದ್ಯುತ್ ಸಂಪರ್ಕದ ದಂಡದ ಮೊತ್ತ ಕಡಿಮೆ ಮಾಡಿಕೊಡಲು ಗ್ರಾಹಕನಿಂದ 3 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದ ಸೆಸ್ಕ್ ವಿಜಿಲೆನ್ಸ್ ಅಧಿಕಾರಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.



ವಿ. ದೀಪಕ್

ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ವಿ. ದೀಪಕ್ ಹಣದ ಸಮೇತ ಸಿಕ್ಕಿಬಿದ್ದವರು. ಮೈಸೂರಿನ ಅಜೀಜ್‌ಸೇಠ್‌ನಗರ ನಿವಾಸಿ ಸೈಯದ್ ನಸೀಮ್(35) ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದು, ಬಳಸುತ್ತಿದ್ದರು. ವಿಜಿಲೆನ್ಸ್ ಅಧಿಕಾರಿ ದೀಪಕ್ ಪರಿಶೀಲನೆ ವೇಳೆ ಅನಧಿಕೃತ ಸಂಪರ್ಕ ಪತ್ತೆಯಾದ ಕಾರಣ ದಂಡ ಪಾವತಿಸುವಂತೆ ತಿಳಿಸಿದ್ದರು. ದುಬಾರಿ ದಂಡದ ಮೊತ್ತ ಕಡಿಮೆ ಮಾಡಿಕೊಡುವಂತೆ ನಸೀಮ್ ಕೇಳಿದ್ದರು. ಅದಕ್ಕೆ ಪ್ರತಿಯಾಗಿ 3 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ ದೀಪಕ್, ಇಂದು ಖಾಸಗಿ ಹೋಟೆಲೊಂದರಲ್ಲಿ ಲಂಚ ಸ್ವೀಕರಿಸುತ್ತಿದ್ದಾಗ ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಪೊಲೀಸರು ಆತನನ್ನು ಬಂಧಿಸಿದರು. ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಮಾಥ್ಯೂ ಥಾಮಸ್, ಇನ್ಸ್‌ಪೆಕ್ಟರ್ ರವಿಕುಮಾರ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ರಂಗ ಸಂಗೀತ ಕಾರ್ಯಾಗಾರಕ್ಕೆ ಆಹ್ವಾನ

ಮೈಸೂರು, ಜೂ.18– ಪರಂಪರಾಗತವಾದ ರಂಗಗೀತೆಗಳನ್ನು ಅಭಿನಯಪೂರ್ವಕವಾಗಿ ಕಲಿಸುವ ಕಾರ್ಯಾಗಾರವನ್ನು ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣವು ನಗರದ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ವಿವಿಯ ಆವರಣದಲ್ಲಿ ಹಮ್ಮಿಕೊಂಡಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ 15 ದಿನಗಳ ರಂಗಸಂಗೀತ ಕಲಿಸಲಾಗುತ್ತದೆ.

ಧ್ವನಿ ಸಂಸ್ಕರಣೆ, ರಂಗ ಸಂಗೀತದ ಪ್ರಾಥಮಿಕ ಪಾಠಗಳು ಮತ್ತು ರಂಗಗೀತೆಗಳ ಅಭಿನಯಪೂರ್ವಕ ಕಲಿಕೆಯ ತರಬೇತಿ ನೀಡಲಾಗುವುದು. ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಶಿಷ್ಯವೇತನ ಹಾಗೂ ಪ್ರಮಾಣಪತ್ರ ನೀಡಲಾಗುವುದು. ತರಬೇತಿ ನಂತರ ಸಾರ್ವಜನಿಕ ಪ್ರದರ್ಶನ ಏರ್ಪಡಿಸಲಾಗುವುದು.

ಸಂಗೀತದ ಪ್ರಾಥಮಿಕ ಜ್ಞಾನವುಳ್ಳ 18ರಿಂದ 40 ವರ್ಷದೊಳಗಿನ ಅಭ್ಯರ್ಥಿಗಳು ಸ್ವವಿವರದ ಮನವಿಯೊಂದಿಗೆ ನೇರ ಸಂದರ್ಶನಕ್ಕೆ ಇದೇ ಜೂನ್ 27ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿವಿಯ ಕೆಎಸ್‌ಜಿಎಚ್ ಸಭಾಂಗಣದಲ್ಲಿ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ, ನಿರ್ದೇಶಕರು, ವಿಶೇಷಾಧಿಕಾರಿಗಳು, ವೃತ್ತಿ ರಂಗಭೂಮಿ ರಂಗಾಯಣ, ದಾವಣಗೆರೆ, ಮೊ :93410 10712/ 74831 20974 ಸಂಪರ್ಕಿಸಬಹುದು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯಿಂದ ಜಾತಿನಿಂದನೆ ಆರೋಪ

ಮೈಸೂರು, ಜೂ.18(ಎಂಟಿವೈ)– ಸಮಾಜ ಕಲ್ಯಾಣ ಇಲಾಖೆ ದ್ವಿತೀಯ ಶ್ರೇಣಿ ಸಹಾಯಕ ನಿರ್ದೇಶಕರೊಬ್ಬರು ಜೇನುಕುರುಬ ಮತ್ತು ಸೋಲಿಗ ಸಮುದಾಯದ ವಿರುದ್ಧ ಅವಹೇಳನ ರೀತಿ ಮಾತನಾಡಿ, ಜಾತಿ ನಿಂದನೆ ಮಾಡಿದ್ದಾರೆ ಎಂದು ಪಿರಿಯಾಪಟ್ಟಣ ತಾಲೂಕು ಕೊಪ್ಪ ಅಂಚೆ ರಾಣಿಗೇಟ್ ಹಾಡಿ ನಿವಾಸಿ ಶಾಂತರಾಜು ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿ ನಾಟಿ ಕೋಳಿ ಸಾಕಾಣಿಕೆಗಾಗಿ ಶೆಡ್ ನಿರ್ಮಿಸಿಕೊಳ್ಳಲು ಮಂಜೂರಾಗಿದ್ದು, ಅದರ ಪರಿವೀಕ್ಷಣೆಗಾಗಿ ಆಗಮಿಸಿದ್ದ ಸಮಾಜ ಕಲ್ಯಾಣ ಇಲಾಖೆ ದ್ವಿತೀಯ ಶ್ರೇಣಿ ಸಹಾಯಕ ನಿರ್ದೇಶಕ ಎನ್.ಬಿ. ಚಂದ್ರಶೇಖರ್, ಜಾತಿ ನಿಂದನೆ ಮಾಡಿದ್ದಾರೆ. ಈ ಕುರಿತು ಬೈಲಕುಪ್ಪೆ ಠಾಣೆಗೆ ದೂರು ನೀಡಿ ಎಫ್‌ಐಆರ್ ದಾಖಲಾಗಿದ್ದರೂ ಪೊಲೀಸರು ಅವರನ್ನು ಇನ್ನೂ ಬಂಧಿಸಿಲ್ಲ. ಇವರ ವಿರುದ್ಧ ವಾರದೊಳಗೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ದಲಿತ ಸಂಘರ್ಷ ಸಮಿತಿ, ರಾಜ್ಯ ಮೂಲ ಆದಿವಾಸಿಗಳ ರಕ್ಷಣಾ ವೇದಿಕೆಗಳ ಆಶ್ರಯದಲ್ಲಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಹಾಡಿ ವಾಸಿಗಳಾದ ಮಲ್ಲಿಕಾರ್ಜುನ್, ವೆಂಕಟಸ್ವಾಮಿ, ಮಣಿಕಂಠ, ಅಕ್ಕಯ್ಯಮ್ಮ ಇದ್ದರು.

ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಕೇಸ್: ಜುಲೈ ಮೊದಲ ವಾರಕ್ಕೆ ವಿಚಾರಣೆ

ಬೆಂಗಳೂರು: ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಹೈಕೋರ್ಟ್ ಅರ್ಜಿ ವಿಚಾರಣೆ ನಡೆಸಿದ್ದು ಜುಲೈ ಮೊದಲ ವಾರಕ್ಕೆ ವಿಚಾರಣೆ ಮುಂದೂಡಿದೆ.



ರನ್ಯಾರಾವ್ ತಾಯಿ ರೋಹಿಣಿ ಹೈಕೋರ್ಟ್‌ಗೆ ಹೆಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಕೆ ಮಾಡಿದ್ದರು. ಡಿಆರ್‌ಐ ಅಧಿಕಾರಿಗಳು ನನ್ನ ಮಗಳನ್ನು ಅಕ್ರಮ ಬಂಧನದಲ್ಲಿರಿಸಿದ್ದಾರೆ. ಈಗಾಗಲೇ ರನ್ಯಾಗೆ ಜಾಮೀನು ಮಂಜೂರಾಗಿದೆ ಎಂದು ಅರ್ಜಿ ಸಲ್ಲಿಸಲಾಗಿತ್ತು ಆದರೆ ಇದಕ್ಕೆ ಹೈಕೋರ್ಟ್ ನಲ್ಲಿ ಆಕ್ಷೇಪಣೆ ಎತ್ತಿ, ರನ್ಯಾ ಸೇರಿದಂತೆ 4 ಆರೋಪಿಗಳ ವಿರುದ್ಧ ಕಾಫೆಪೋಸಾ ಆಕ್ಟ್ ಹಾಕಲಾಗಿದೆ. ಕಾಫೆಪೋಸಾ ಇತ್ಯರ್ಥ ಮಾಡೋದು ಸಲಹಾ ಮಂಡಳಿ. ಅಲ್ಲಿ ತೀರ್ಮಾನ ಆಗಬೇಕಿದೆ ಎಂದು ಹೈಕೋರ್ಟ್‌ಗೆ ಮಾಹಿತಿ ನೀಡಲಾಗಿದೆ. ಇನ್ನು ರನ್ಯಾ ರಾವ್ ಪರ ವಕೀಲರು ಸಲಹಾ ಮಂಡಳಿಯಲ್ಲಿ ನಾಳೆ ಅರ್ಜಿ ವಿಚಾರಣೆಗೆ ಬರುತ್ತದೆ ಎಂದಿದ್ದಾರೆ. ಇದನ್ನು ಗಮನಿಸಿದ ಹೈಕೋರ್ಟ್ ಸಲಹಾ ಮಂಡಳಿಯಲ್ಲಿ ಅರ್ಜಿಯ ಸ್ಥಿತಿಗತಿ ನೋಡಿ ವಿಚಾರಣೆ ಮುಂದುವರೆಸುವುದಾಗಿ ಹೇಳಿ ವಿಚಾರಣೆಯನ್ನು ಮುಂದೂಡಿಕೆ ಮಾಡಿದೆ.

ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ

ಮೈಸೂರು,ಜೂ.18(ಪಿಎಂ)– ಪರೀಕ್ಷೆಗೆ ತೆರಳದೇ ಹಾಸ್ಟೆಲ್ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಕಾಲೇಜು ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಸಿದ್ಧಾರ್ಥನಗರದಲ್ಲಿ ಬುಧವಾರ ನಡೆದಿದೆ.

ಇಲ್ಲಿನ ಟೆರೇಷಿಯನ್ ಕಾಲೇಜಿನ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿನಿ ಜೆ.ಶಕೀನಾ (20) ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿನಿ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಾರ್ಟಳ್ಳಿ ಗ್ರಾಮದ ಜಯರಾಜ್ ಮತ್ತು ಶಾಂತಿ ದಂಪತಿ ಪುತ್ರಿಯಾದ ಈಕೆ ಬುಧವಾರ ಬೆಳಗ್ಗೆ ಕಾಲೇಜಿನ ಪಕ್ಕದಲ್ಲಿರುವ ಹಾಸ್ಟೆಲ್‌ನಲ್ಲಿ ತಿಂಡಿ ಸೇವಿಸಿ ತನ್ನ ಕೊಠಡಿಯೊಳಗೆ ಹೋಗಿದ್ದು, ಸಾಕಷ್ಟು ಸಮಯವಾದರೂ ಹೊರಬಾರದಿದ್ದ ಕಾರಣ, ಅನುಮಾನಗೊಂಡು ಕೊಠಡಿ ಬಾಗಿಲು ಒಡೆದು ನೋಡಿದಾಗ, ಶಕೀನಾ ಫ್ಯಾನ್‌ಗೆ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂದಿದೆ.

ಬೆಳಗ್ಗೆ 9.30ಕ್ಕೆ ಭೌತಶಾಸ್ತ್ರ ಪರೀಕ್ಷೆಗೆ ಹೋಗಬೇಕಿದ್ದ ಈಕೆ, ಸುಮಾರು 9 ಗಂಟೆ ವೇಳೆಗೆ ಹಾಸ್ಟೆಲ್‌ನ ತನ್ನ ಕೊಠಡಿ ಬಾಗಿಲು ಹಾಕಿಕೊಂಡಿದ್ದಳು ಎನ್ನಲಾಗಿದೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ನಜರ್‌ಬಾದ್ ಪೊಲೀಸರು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಕೆಲ ಸಬ್ಜೆಕ್ಟ್‌ಗಳಿಗೆ ಸಂಬಂಧಿಸಿದಂತೆ ಈ ಹಿಂದೆ ನಡೆದಿದ್ದ ಪರೀಕ್ಷೆಗಳನ್ನು ಈಕೆ ಬರೆದಿರಲಿಲ್ಲ. ಬಹುಶಃ ಓದಿನಲ್ಲಿ ಹಿಂದುಳಿದಿರುವ ಕಾರಣಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನ ಇದೆ ಎಂದು ತಿಳಿಸಿದರು.

ಪರೀಕ್ಷೆಗೆ ಅವಕಾಶ ನೀಡದೇ ವಾಪಸ್ ಕಳುಹಿಸದ ಕಾರಣಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಕೇಳಿಬಂದಿರುವ ಆರೋಪ ಸುಳ್ಳು. ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದ್ದು, ಪರೀಕ್ಷೆ ನಡೆಯುತ್ತಿದ್ದ ಕೊಠಡಿಗೆ ಆಕೆ ಹೋಗಿಯೇ ಇಲ್ಲ. ಮಧ್ಯಾಹ್ನ ಸುಮಾರು 12.30ರ ವೇಳೆಗೆ ತರಗತಿಯಿಂದ ವಾಪಸ್ ಬಂದ ಶಕೀನಾಳ ಹಾಸ್ಟೆಲ್ ಕೊಠಡಿಯ ಸಹಪಾಠಿಗಳು, ಬಾಗಿಲು ಬಡಿದರೂ ತೆರೆಯದ ಹಿನ್ನೆಲೆಯಲ್ಲಿ ಗಾಬರಿಗೊಂಡು, ಹಾಸ್ಟೆಲ್ ಸಿಬ್ಬಂದಿಗೆ ತಿಳಿಸಿದ್ದು, ನಂತರ ಬಾಗಿಲು ಒಡೆದು ನೋಡಿದಾಗ, ಶಕೀನಾ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ತಿಳಿಸಿದರು. ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಿರುವ ನಜರ್‌ಬಾದ್ ಪೊಲೀಸರು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಂದು ಹಸಿವು ನೀಗಿಸಿದ ಜನಪದ ಗೀತೆಗಳು ಈಗ ಬದುಕು ಕಟ್ಟಿಕೊಟ್ಟಿವೆ

ಜಾನಪದ ಗಾಯಕ ಡಾ. ಮಳವಳ್ಳಿ ಮಹದೇವಸ್ವಾಮಿ ಧನ್ಯತೆ

ಮೈಸೂರು, ಜೂ.18(ಎಂಟಿವೈ)– ಹಸಿವು ನೀಗಿಸಿಕೊಳ್ಳಲು ಅಂದು ಜನಪದ ಗೀತೆಗಳನ್ನು ಹಾಡುತ್ತಿದ್ದ ನಮಗೆ ಇಂದು ಆ ಪದಗಳೇ ಬದುಕು ಕಟ್ಟಿಕೊಟ್ಟಿವೆ ಎಂದು ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ ವತಿಯಿಂದ ನಡೆಯುತ್ತಿರುವ 52ನೇ ಪುನಶ್ಚೇತನ ಶಿಬಿರದಲ್ಲಿ ಜನಪದ ಗೀತೆಗಳ ಗಾಯನದ ಬಳಿಕ ಮಾತನಾಡಿದ ಅವರು, ಜಾನಪದ ಗೀತೆಯ ಸಾಲುಗಳು ಸಿನಿಮಾ ಗೀತೆಗಳಾಗಿ ಬಹಳಷ್ಟು ಬದಲಾಗಿವೆ. ಮೂಲ ಜನಪದ ಗೀತೆಗಳನ್ನು ಉಳಿಸುವುದು ನಮ್ಮ ಕರ್ತವ್ಯವಾಗಿದೆ.

ಪ್ರಾರಂಭದ ದಿನಗಳಲ್ಲಿ ಜನಪದ ಗೀತೆ ಹಾಡಲು ಸ್ವರವಿತ್ತು ವರ ಇರಲಿಲ್ಲ. ಇಂದು ವರ ಇದೆ, ಸ್ವರವಿಲ್ಲ. ಬದುಕು ಬದಲಾದಂತೆ ಎಲ್ಲವೂ ಬದಲಾಗುತ್ತಿದೆ. ಅಂದು ಮಂಟೇಸ್ವಾಮಿ ಹೇಳಿದಂತೆ ಕಲಿಯುಗ ಬದಲಾಗಿದೆ. ತಲೆ ತಗ್ಗಿಸಿ ಮೊಬೈಲ್ ನೋಡಿದರೆ ಜೀವನ ಪೂರ್ತಿ ತಲೆ ತಗ್ಗಿಸುವಂತಾಗುತ್ತದೆ. ತಲೆ ಎತ್ತಿ ನಿಲ್ಲಲು ಪುಸ್ತಕಗಳು ಹಾಗೂ ಶಿಕ್ಷಕರು ಹೇಳಿಕೊಟ್ಟ ಪಾಠ ಕಾರಣವಾಗುತ್ತದೆ. ನಾವು ಮಾಡಿದ ದಾನ–ಧರ್ಮ ನಮ್ಮನ್ನು ಕಾಪಾಡುತ್ತದೆ. ಸತ್ತ ಮೇಲೆ ಯಾರು ಏನನ್ನು ತೆಗೆದುಕೊಂಡು ಹೋಗುವುದಿಲ್ಲ, ಸೂರ್ಯ, ಚಂದ್ರ, ಭೂಮಿ ಬದಲಾಗುವುದಿಲ್ಲ. ನಾವು ಮಾತ್ರ ಬದಲಾಗುತ್ತಿದ್ದೇವೆ ಎಂದು ವಿಷಾದಿಸಿದರು.



ಮೈಸೂರು ವಿಶ್ವವಿದ್ಯಾಲಯದ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ನಡೆದ ಪುನಶ್ಚೇತನ ಶಿಬಿರದಲ್ಲಿ ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಸಂಗಡಿಗರೊಂದಿಗೆ ಜಾನಪದ ಗೀತೆಗಳ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಇತ್ತೀಚೆಗೆ ವಿನೋದ್ ಪ್ರಭಾಕರ್ ನಟನೆಯ ಮಾದೇವ ಚಿತ್ರಕ್ಕೆ 'ಜೀವ ಹೆದರಿ ಬಂತು ಕೈಯಾಗೆ' ಹಾಡನ್ನು ಹಾಡಿದ್ದೇನೆ. ಅಲ್ಲದೇ, ದುನಿಯಾ ವಿಜಯ್ ನಿರ್ದೇಶನದ ವಿನಯ್ ರಾಜ್‌ಕುಮಾರ್ ನಟನೆಯ 'ಸಿಟಿ ಲೈಟ್' ಚಿತ್ರಕ್ಕೂ ಹಾಡಿದ್ದೇನೆ ಎಂದರು.

ಮಂಟೇಸ್ವಾಮಿ, ಮಹದೇಶ್ವರ ಹಾಗೂ ಬಿಳಿಗಿರಿರಂಗನ ಕಾವ್ಯಗಳ ಆಯ್ದ ಭಾಗಗಳನ್ನು ಹಾಡಿ, ಕನ್ನಡದ ಜನಪದ ಮಹಾಕಾವ್ಯಗಳ ಪರಂಪರೆಯನ್ನು ಕಟ್ಟಿಕೊಟ್ಟರು. ಈ ವೇಳೆ ಅಧ್ಯಾಪಕ ಶಿಬಿರಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಕಾವ್ಯಾತ್ಮಕವಾಗಿ ಉತ್ತರಿಸಿದರು. ಅಲ್ಲದೇ ಗಾದೆ ಮಾತು, ನುಡಿಗಟ್ಟು, ಸಣ್ಣ ಕತೆಗಳನ್ನು ಹೇಳುವ ಮೂಲಕ ಎಲ್ಲರ ಗಮನ ಸೆಳೆದರು. ನಾನು ಹಾಡಿದ ಅರ್ಜುನ್ ಜೋಗಿಯ 'ಅನ್ಯಾಯಕಾರಿ ಬ್ರಹ್ಮ ಈ ಸುಂದರನ ನೋಡಬಹುದೇ...' ಹಾಡಿಗೆ ನೃತ್ಯ ಮಾಡಿ ಹೆಣ್ಣು ಮಕ್ಕಳು ಫೇಸ್ಬುಕ್ ಮತ್ತು ಯೂಟ್ಯೂಬ್‌ಗಳಲ್ಲಿ ಸಾಕಷ್ಟು ಟ್ರೆಂಡ್ ಮಾಡಿದರು. ಅದರಿಂದ ಸಾಕಷ್ಟು ಹಣ ಗಳಿಸಿದರು. ಆದರೆ ನನಗೆ ಯಾವುದೇ ಲಾಭವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪ್ರಸಾರಾಂಗದ ನಿರ್ದೇಶಕರು, ಶಿಬಿರ ಸಂಯೋಜಕರು ಆದ ಪ್ರೊ. ಎಂ. ನಂಜಯ್ಯ ಹೊಂಗನೂರು, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಜ್ಯೋತಿ ಹೆಚ್.ಪಿ, ಸಹಾಯಕ ಪ್ರಾಧ್ಯಾಪಕರಾದ ಎಲ್. ನಂಜುಂಡಸ್ವಾಮಿ, ಪ್ರೊ. ಆರ್. ರಾಮಕೃಷ್ಣ, ದೇವನೂರು ಶಂಕರ್ ದಂಪತಿ, ಸಂಶೋಧಕ ಶಂಕರ ಹೆಚ್.ಎಸ್ ಮತ್ತಿತರರು ಉಪಸ್ಥಿತರಿದ್ದರು.

ಜೂ. 23 ರಂದು ಮೆಗಾ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜೂ. 18– ಸೂಫಿ ಸಂತ ಹಜ಼ರತ್ ಮೌಲಾನಾ ಷಾ ಮೊಹಮ್ಮದ್ ಸಲ್ಮಾನ್ ಸಾಹೇಬ್ ಮಿಸ್ಬಾಹಿ ಚಿಸ್ತಿ, ಸಂಸ್ಥಾಪಕರು, ಅಜ಼ೀಜ಼ಿಯಾ ಎಜುಕೇಷನಲ್ ಟ್ರಸ್ಟ್, ದಾರುಲ್ ಉಲೂಮ್ ಅಜ಼ೀಜ಼ಿಯ ಅರೇಬಿಕ್ ಕಾಲೇಜು, ಮಾಂಬಳ್ಳಿ ವಾರ್ಷಿಕ ಗಂಧದ ಉರುಸ್ ಷರೀಫ್ ಅಂಗವಾಗಿ, ಅಜ಼ೀಜ಼ಿಯಾ ಎಜುಕೇಷನಲ್ ಟ್ರಸ್ಟ್ ಟ್ರಸ್ಟಿಗಳು, ದಾರುಲ್ ಉಲೂಮ್ ಅಜ಼ೀಜ಼ಿಯ ಅರೇಬಿಕ್ ಕಾಲೇಜು, ಮಾಂಬಳ್ಳಿ ಮತ್ತು ಆಸ್ತಾನೆ ಸಲ್ಮಾನಿಯ ದರ್ಗಾ ಕಮಿಟಿ ಜಂಟಿಯಾಗಿ, ಸೂಫಿ ಸಂತ ಹಜ಼ರತ್ ಸೂಫಿ ಅನ್ವರ್ ಅಹಮದ್ ನಿಜ಼ಾಮಿ ಸಾಹೆಬ್, ಕಾರ್ಯದರ್ಶಿ, ಅಜ಼ೀಜ಼ಿಯ ಎಜುಕೇಷನಲ್ ಟ್ರಸ್ಟ್ ಆಶ್ರಯದಲ್ಲಿ ಮೈಸೂರಿನ ಕಲ್ಯಾಣಗಿರಿಯ ಎಇಟಿ ಪಬ್ಲಿಕ್ ಹೈಸ್ಕೂಲ್‌ನಲ್ಲಿ ಜೂ. 23 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಮೆಗಾ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ : 9620153213, 0821–2457786 ಸಂಪರ್ಕಿಸಬಹುದು.

ಪಾಕ್ ಮಂಡಿಯೂರಿದಾಗ ಕದನ ವಿರಾಮಕ್ಕೆ ಒಪ್ಪಿದ್ದೇವೆ; ನಿಮ್ಮ ಮಧ್ಯಸ್ಥಿಕೆಯಿಂದಲ್ಲ!

ನವದೆಹಲಿ: ಭಾರತ ಮತ್ತು ಪಾಕಿಸ್ತಾನದ ನಡುವೆ ನಾನೇ ಕದನ ವಿರಾಮ ಒಪ್ಪಂದ ಮಾಡಿಸಿದ್ದು ಎಂದು ವಿಶ್ವದ ಮುಂದೆ ಬಡಾಯಿ ಕೊಚ್ಚುತ್ತಿದ್ದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಪ್ ಅವರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವಾಸ್ತವತೆಯ ಪರಿಚಯ ಮಾಡಿಸಿದ್ದಾರೆ.

ಮಂಗಳವಾರ ತಡರಾತ್ರಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಡುವೆ 35 ನಿಮಿಷಗಳ ದೂರವಾಣಿ ಸಂಭಾಷಣೆಯ ಸಮಯದಲ್ಲಿ ಕಾಶ್ಮೀರ ವಿಚಾರ ಪ್ರಸ್ತಾಪವಾಯಿತು ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಮಾಹಿತಿ ನೀಡಿದ್ದಾರೆ.

ಮಾತುಕತೆ ವೇಳೆ ಪ್ರಧಾನಿ ಮೋದಿಯವರು ಭಾರತದ ಭಯೋತ್ಪಾದನಾ ವಿರೋಧಿ ಕ್ರಮಗಳ ಬಗ್ಗೆ, ವಿಶೇಷವಾಗಿ ಆಪರೇಷನ್ ಸಿಂಧೂರ್ ಬಗ್ಗೆ ಟ್ರಂಪ್ ಬಳಿ ವಿವರವಾಗಿ ಚರ್ಚಿಸಿದರು ಎಂದು ಹೇಳಿದ್ದಾರೆ.

ಇದೇ ವೇಳೆ ಸೇನಾ ಕಾರ್ಯಾಚರಣೆಯನ್ನು ನಿಲ್ಲಿಸುವ ವಿಷಯವನ್ನೂ ಮೋದಿಯವರು ಪ್ರಸ್ತಾಪಿಸಿದ್ದು, ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮ ವಿಚಾರದಲ್ಲಿ ಅಮೆರಿಕದ ಯಾವುದೇ ಮಧ್ಯಸ್ಥಿಕೆ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಜಿ 7 ಶೃಂಗಸಭೆಯ ಹೊರತಾಗಿ ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ಭೇಟಿಯಾಗಬೇಕಿತ್ತು. ಆದರೆ, ಅಧ್ಯಕ್ಷ ಟ್ರಂಪ್ ಅವರು ಅಮೆರಿಕಕ್ಕೆ ಬೇಗನೆ ಹಿಂತಿರುಗಬೇಕಾಯಿತು. ಇದರಿಂದಾಗಿ ಈ ಸಭೆ ನಡೆಯಲು ಸಾಧ್ಯವಾಗಲಿಲ್ಲ. ನಂತರ, ಅಧ್ಯಕ್ಷ ಟ್ರಂಪ್ ಅವರ ಕೋರಿಕೆಯ ಮೇರೆಗೆ, ಉಭಯ ರಾಷ್ಟ್ರಗಳ ನಾಯಕರು ಇಂದು ದೂರವಾಣಿ ಮೂಲಕ ಮಾತನಾಡಿದರು.

ಈ ಸಂಭಾಷಣೆ ಸುಮಾರು 35 ನಿಮಿಷಗಳ ಕಾಲ ನಡೆಯಿತು, ಇದರಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿ, ಆಪರೇಷನ್ ಸಿಂಧೂರ್ ಮತ್ತು ನಂತರದ ಭಾರತ–ಪಾಕಿಸ್ತಾನ ಉದ್ವಿಗ್ನತೆಯನ್ನು ವಿವರವಾಗಿ ಚರ್ಚಿಸಲಾಯಿತು.

ಏಪ್ರಿಲ್ 22 ರ ನಂತರ ಭಾರತವು ಭಯೋತ್ಪಾದನೆಯ ವಿರುದ್ಧ ಕ್ರಮ ಕೈಗೊಳ್ಳುವ ತನ್ನ ದೃಢನಿಶ್ಚಯದ ಬಗ್ಗೆ ಇಡೀ ಜಗತ್ತಿಗೆ ತಿಳಿಸಿದೆ ಎಂದು ಪ್ರಧಾನಿ ಮೋದಿ, ಅಧ್ಯಕ್ಷ ಟ್ರಂಪ್ ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ವಿವಾದಕ್ಕೆ ಸಂಬಂಧಿಸಿದಂತೆ ಭಾರತ ಎಂದಿಗೂ ಮೂರನೇ ಶಕ್ತಿಯ ಮಧ್ಯಸ್ಥಿಕೆ ಕೇಳಿಲ್ಲ, ಮುಂದೆಯೂ ಕೇಳುವುದಿಲ್ಲ ಎಂದು ತಿಳಿಸಿದ್ದಾರೆಂದು ಮಿಶ್ರಿ ತಿಳಿಸಿದ್ದಾರೆ. ಭಾರತ–ಅಮೆರಿಕ ವ್ಯಾಪಾರ ಒಪ್ಪಂದ ಮತ್ತು ಭಾರತ ಮತ್ತು ಪಾಕಿಸ್ತಾನ ನಡುವಿನ ಮಧ್ಯಸ್ಥಿಕೆ ಕುರಿತು, ಅಮೆರಿಕದೊಂದಿಗೆ ಯಾವುದೇ ಮಟ್ಟದಲ್ಲಿ ಮಾತುಕತೆ ನಡೆದಿಲ್ಲ. ಮಿಲಿಟರಿ ಕ್ರಮವನ್ನು ನಿಲ್ಲಿಸುವ ಕುರಿತು, ಭಾರತ ಮತ್ತು ಪಾಕಿಸ್ತಾನದ ನಡುವೆ ನೇರವಾಗಿ ಮಾತುಕತೆಗಳು ನಡೆದಿವೆ ಎಂದು ಮಾಹಿತಿ ನೀಡಿದ್ದಾರೆ.

ಟ್ರಂಪ್‌ಗೆ ಪ್ರಧಾನಿ ಮೋದಿ ಟಾಂಗ್


ನರೇಂದ್ರ ಮೋದಿ


ಡೊನಾಲ್ಡ್ ಟ್ರಂಪ್

ಜಮ್ಮು ಮತ್ತು ಕಾಶ್ಮೀರ ವಿವಾದಕ್ಕೆ ಸಂಬಂಧಿಸಿದಂತೆ, ಭಾರತ ಮೊದಲಿನಿಂದಲೂ ದ್ವಿಪಕ್ಷೀಯ ಮಾತುಕತೆಗೆ ಒತ್ತು ನೀಡಿದೆ. ಇದರಲ್ಲಿ ಮೂರನೇ ಶಕ್ತಿಯ ಮಧ್ಯಸ್ಥಿಕೆಯನ್ನು ಭಾರತ ಎಂದಿಗೂ ಒಪ್ಪಿಕೊಂಡಿಲ್ಲ. ಮುಂದೆ ಒಪ್ಪುವುದೂ ಇಲ್ಲ. ಈ ಪ್ರಾದೇಶಿಕ ವಿವಾದ ಬಗೆಹರಿಯಲು ಮೂರನೇ ಶಕ್ತಿಯ ಅವಶ್ಯಕತೆಯೇ ಇಲ್ಲ ಎಂಬುದು ಭಾರತದ ದೃಢವಾದ ನಿಲುವು ಎಂದು ಪ್ರಧಾನಿ ಮೋದಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರ ಮಾತನ್ನು ಮೌನವಾಗಿ ಆಲಿಸಿದ ಡೊನಾಲ್ಡ್ ಟ್ರಂಪ್, ಈ ವಿಚಾರವಾಗಿ ಭಾರತದ ಅಭಿ ಪ್ರಾಯಕ್ಕೆ ಸಹಮತ ಇದೆ ಎಂದು ಹೇಳಿದ್ದಾಗಿ ಮೂಲ ಗಳು ಖಚಿತಪಡಿಸಿವೆ.

ಭಾರತದ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಕೂಡ, ಅಮೆರಿಕಾ ಮಧ್ಯಸ್ಥಿಕೆ ವಾದವನ್ನು ನಿರಾಕರಿಸಿದ್ದರು. ಆದರೆ, ಮೋದಿಯವರು ಮೌನ ಕುರಿತು ವಿರೋಧ ಪಕ್ಷಗಳ ನಾಯಕರು ಟೀಕೆ ಮಾಡುತ್ತಿದ್ದರು. ಟ್ರಂಪ್ ಅವರೊಂದಿಗೆ ನೇರವಾಗಿ ಮಾತುಕತೆ ನಡೆಸಿರುವ ಪ್ರಧಾನಿ ಮೋದಿಯವರು ಕಾಶ್ಮೀರ ವಿಚಾರದಲ್ಲಿ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆಯನ್ನು ಭಾರತ ಎಂದಿಗೂ ಒಪ್ಪುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ.

ಮತ್ತೆ ಬಡಬಡಾಯಿಸಿದ ಟ್ರಂಪ್: ಈ ಮಧ್ಯೆ ಡೊನಾಲ್ಡ್ ಟ್ರಂಪ್ ಇಂದು ಮತ್ತೆ ತಮ್ಮ ಮೊಂಡುವಾದ ಮುಂದುವರೆಸಿ ನಾನೇ ಭಾರತ–ಪಾಕಿಸ್ತಾನ ಯುದ್ಧ ನಿಲ್ಲಿಸಿದೆ. ಐ ಲವ್ ಪಾಕಿಸ್ತಾನ್. ಪ್ರಧಾನಿ ಮೋದಿ ಒಳ್ಳೆ ಮನುಷ್ಯ ಎಂದಿದ್ದಾರೆ.

ನೌಕಾಪಡೆಗೆ ಅರ್ಣಾಲಾ ಸೇರ್ಪಡೆ

ಮುಂಬೈ: ಆತ್ಮನಿರ್ಭರ ನೀತಿಯಡಿ ನಿರ್ಮಾಣಗೊಂಡ 'ಅರ್ಣಾಲಾ' ಜಲಾಂತರ್ಗಾಮಿಯು ಭಾರತೀಯ ನೌಕಾಪಡೆಗೆ ಬುಧವಾರ ಸೇರ್ಪಡೆಗೊಂಡಿತು. ಶತ್ರುಗಳ ದಾಳಿಯನ್ನು ತಡೆಗಟ್ಟಬಹುದಾದ ಸಾಮರ್ಥ್ಯ ಹೊಂದಿರುವ ಭಾರತೀಯ ನೌಕಾಪಡೆಯ ಮೊದಲ ಜಲಾಂತರ್ಗಾಮಿ ಇದು. ಶತ್ರು ದೇಶಗಳ ಜಲಾಂತರ್ಗಾಮಿಗಳ ಚಲನವಲನವನ್ನು ಪತ್ತೆ ಹಚ್ಚುವ ಜೊತೆಗೆ ಅವನ್ನು ತಟಸ್ಥಗೊಳಿಸುವ ದಕ್ಷತೆಯನ್ನು ಹೊಂದಿದೆ.

ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಐತಿಹಾಸಿಕ ಕೋಟೆಯ ಹೆಸರನ್ನು ಹೊಂದಿರುವ ಈ ಅತ್ಯಾಧುನಿಕ ಜಲಾಂತರ್ಗಾಮಿಯನ್ನು ಕೋಲ್ಕತ್ತ ಮೂಲದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ ಲಿಮಿಟೆಡ್ (ಜಿಆರ್‌ಎಸ್‌ಇ) ನಿರ್ಮಿಸಿದೆ.

ಶತ್ರುಗಳ ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಿಗಾಗಿಯೇ ಡೀಸೆಲ್ ಎಂಜಿನ್ ಹಾಗೂ ವಾಟರ್ ಜೆಟ್‌ನ ಸಂಯೋಜನೆಯೊಂದಿಗೆ ವಿನ್ಯಾಸಗೊಳಿಸಲಾಗಿರುವ ಈ ಯುದ್ಧನೌಕೆಯನ್ನು ವಿಶಾಖಪಟ್ಟಣಂನ ನೌಕಾನೆಲೆಯಲ್ಲಿ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಸಮ್ಮುಖ ನೌಕಾಪಡೆಗೆ ನಿಯೋಜಿಸಲಾಯಿತು.